# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 1 ಶುಕ್ರವಾರ 2024

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 313 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

# ಡಾ.ಹೆಚ್.ಸಿ.ಸತ್ಯನ್ ಸೇರಿ ಮೂವರಿಗೆ ಮುಕ್ತ ವಿವಿ ಗೌರವ ಡಾಕ್ಟರೇಟ್


ಹೆಚ್.ಸಿ.ಸತ್ಯನ್


ಕೆ.ಎಂ. ವೀರೇಶ್


ಮೀರಾ

ಮೈಸೂರು,ಫೆ.29(ಎಂಟಿವೈ)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 19ನೇ ಘಟಿಕೋತ್ಸವದಲ್ಲಿ ಕರ್ನಾಟಕ ರಾಜ್ಯ ಮಾಹಿತಿ ಆಯೋಗದ ಆಯುಕ್ತ ಡಾ.ಹೆಚ್.ಸಿ.ಸತ್ಯನ್, ಸಾಮಾಜಿಕ ಸೇವೆಯಲ್ಲಿ ತೊಡಗಿರುವ ಚಿತ್ರದುರ್ಗದ ಕೆ.ಎಂ. ವೀರೇಶ್, ಶೈಕ್ಷಣಿಕ ವಲಯದಿಂದ ಮಂಡ್ಯದ ಮೀರಾ ಶಿವಲಿಂಗಯ್ಯ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಗುತ್ತಿದೆ.

**ಡಾ.ಹೆ.ಸಿ.ಸತ್ಯನ್:** ಮೈಸೂರಿನವರಾದ ಡಾ.ಹೆಚ್.ಸಿ. ಸತ್ಯನ್, ರಾಜ್ಯ ಮಾಹಿತಿ ಆಯೋಗದ ಆಯುಕ್ತರಾಗಿದ್ದಾರೆ. 1991ರಿಂದ 2020ರವರೆಗೆ ವಿವಿಧ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದರು. 2006ರಿಂದ 2020ರವರೆಗೆ ಕರ್ನಾಟಕ ಮೋಟಾರ್ ವೆಹಿಕಲ್ಸ್ ಇನ್‌ಸ್ಪೆಕ್ಟರ್ಸ್ ಅಸೋಸಿಯೇಷನ್ ಅಧ್ಯಕ್ಷರಾಗಿದ್ದು, 2017ರಲ್ಲಿ ಕೆಂಪೇಗೌಡ ಪ್ರಶಸ್ತಿಗೆ ಭಾಜನರಾಗಿದ್ದಾರೆ.

**ಕೆ.ಎಂ. ವೀರೇಶ್:** ಚಿತ್ರದುರ್ಗದ ಜಯಚಾಮರಾಜೇಂದ್ರ ಬಡಾವಣೆಯ ನಿವಾಸಿಯಾದ ಕೆ.ಎಂ.ವೀರೇಶ್ ಬಿ.ಕಾಂ, ಎಲ್‌ಎಲ್‌ಬಿ ಪದವೀಧರರಾಗಿದ್ದು, ಮುರುಘರಾಜೇಂದ್ರ ವಿದ್ಯಾಪೀಠದ ಆಡಳಿತಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾರೆ. ಚಿತ್ರದುರ್ಗ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ಗೆ ಮೂರು ಬಾರಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಭದ್ರಾ ಮೇಲ್ದಂಡೆ ಯೋಜನೆ ಹೋರಾಟ ಸೇರಿ ಹಲವು ಸಾಮಾಜಿಕ ಹಾಗೂ ಶೈಕ್ಷಣಿಕ ಸೇವೆಯಲ್ಲಿ ನಿರತರಾಗಿದ್ದಾರೆ.

**ಮೀರಾ ಶಿವಲಿಂಗಯ್ಯ:** ಶಿಕ್ಷಣ ತಜ್ಞೆ ಮತ್ತು ಉದ್ಯಮಿಯಾದ ಮೀರಾ ಶಿವಲಿಂಗಯ್ಯ ಅವರು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಂದ ಧರ್ಮ ಪ್ರವರ್ತಕ ಗೌರವಕ್ಕೆ ಭಾಜನರಾದ ಸ್ವಾತಂತ್ರ್ಯ ಹೋರಾಟಗಾರರಾದ ತಮ್ಮಯ್ಯ ಮತ್ತು ಬೋರೇಗೌಡದ ಕುಟುಂಬಕ್ಕೆ ಸೇರಿದವರಾಗಿದ್ದು, ಕ್ರೀಡಾಪಟುವೂ ಆಗಿದ್ದಾರೆ. ಚಿಕ್ಕಮಗಳೂರು ಶ್ರೀ ಆದಿಚುಂಚನಗಿರಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದಾರೆ. ತದನಂತರ ಮಾಂಡವ್ಯ ಗ್ರೂಪ್ ಆಫ್ ಎಜುಕೇಷನ್ ಸಂಸ್ಥಾಪಕ ಕಾರ್ಯದರ್ಶಿಯಾಗಿದ್ದಾರೆ. ವಿದ್ಯಾಭಾರತಿ ಟ್ರಸ್ಟ್ ಕಾರ್ಯದರ್ಶಿ ಮತ್ತು ಚಿನ್ಮಯ ಪಬ್ಲಿಕ್ ಸ್ಕೂಲ್ ಅಧ್ಯಕ್ಷರಾಗಿದ್ದಾರೆ. ಸಿರಿ ಸಂಸ್ಥೆಯ ಮೂಲಕ ಮಹಿಳಾ ಉದ್ಯಮಕ್ಕೆ ಶ್ರಮಿಸಿದ್ದಾರೆ. 1996ರಲ್ಲಿ ಉತ್ತಮ ಮಹಿಳಾ ಉದ್ಯಮಿ ಎಂಬ ಪ್ರಶಸ್ತಿ ದೊರೆತಿದ್ದು, ಹಲವು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

# ವಿಶ್ವ ಕ್ಯಾನ್ಸರ್ ದಿನಾಚರಣೆ: ಕ್ಲಿಯರ್‌ಮೆಡಿ ರೇಡಿಯಂಟ್ ಆಸ್ಪತ್ರೆ ವತಿಯಿಂದ ಜಾಗೃತಿ ಜಾಥಾ



ಮೈಸೂರು, ಫೆ.29(ಎಸ್‌ಬಿಡಿ)–ವಿಶ್ವ ಕ್ಯಾನ್ಸರ್ ದಿನಾಚರಣೆ ಅಂಗವಾಗಿ ಮೈಸೂರಿನ ಕ್ಲಿಯರ್‌ಮೆಡಿ ರೇಡಿಯಂಟ್ ಆಸ್ಪತ್ರೆ ವತಿಯಿಂದ ಗುರುವಾರ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿತ್ತು.

ನಗರದ ಕೋಟೆ ಆಂಜನೇಯ ಸ್ವಾಮಿ ದೇವಾಲಯ ಆವರಣದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ(ಎಸ್ಪಿ) ಸೀಮಾ ಲಾಟ್ಕರ್ ಕ್ಯಾನ್ಸರ್ ಜಾಗೃತಿ ಜಾಥಾಗೆ ಚಾಲನೆ ನೀಡಿದರು. ವಿವಿಧ ನರ್ಸಿಂಗ್ ಹಾಗೂ ಪ್ಯಾರಾ ಮೆಡಿಕಲ್ ಕಾಲೇಜುಗಳ ನೂರಾರು ವಿದ್ಯಾರ್ಥಿಗಳು ಜಾಥಾದಲ್ಲಿ ಪಾಲ್ಗೊಂಡಿದ್ದರು. ಇದೇ ವೇಳೆ ಅಂತಾರಾಷ್ಟ್ರೀಯ ಅಥ್ಲೀಟ್ ಮೈಸೂರಿನ ಡಾ.ಉಷಾ ಹೆಗ್ಡೆ ಅವರನ್ನು ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಎಸ್ಪಿ ಸೀಮಾ ಲಾಟ್ಕರ್ ಮಾತನಾಡಿ, ಕ್ಯಾನ್ಸರ್ ಮಾರಣಾಂತಿಕ ಕಾಯಿಲೆಯಾದರೂ ಅದನ್ನು ಆರಂಭಿಕ ಹಂತದಲ್ಲೇ ಗುರುತಿಸಿ ಚಿಕಿತ್ಸೆ ಪಡೆದರೆ ಸಂಪೂರ್ಣ ಗುಣಮುಖರಾಗಬಹುದು. ಈ ನಿಟ್ಟಿನಲ್ಲಿ ರೇಡಿಯಂಟ್ ಆಸ್ಪತ್ರೆಯಲ್ಲಿ ಉಚಿತ ಸ್ಕ್ರೀನಿಂಗ್ ವ್ಯವಸ್ಥೆ ಕಲ್ಪಿಸಿರುವುದು ಶ್ಲಾಘನೀಯ. ದುಶ್ಚಟಗಳೂ ಕ್ಯಾನ್ಸರ್‌ಗೆ ಕಾರಣ. ಹಾಗಾಗಿ ಯುವ ಸಮೂಹ ಕೆಟ್ಟ ಅಭ್ಯಾಸಗಳನ್ನು ರೂಢಿಸಿಕೊಳ್ಳಬಾರದು. ಉತ್ತಮ ಜೀವನ ಶೈಲಿ ಹಾಗೂ ಮಾನವೀಯ ಮೌಲ್ಯಗಳಿಂದ ಆರೋಗ್ಯವಂತರಾಗಿ ಬದುಕಬಹುದು ಎಂದು ಕಿವಿಮಾತು ಹೇಳಿದರು. ಕ್ಲಿಯರ್‌ಮೆಡಿ ರೇಡಿಯಂಟ್ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ.ಶಶಿ ಬಾಲಿಯಾನ್ ಮಾತನಾಡಿ, ಕ್ಯಾನ್ಸರ್‌ನಿಂದ ರೋಗಿಯಷ್ಟೇ ಬಳಲುವುದಿಲ್ಲ, ಅವರ ಕುಟುಂಬವನ್ನೇ ಆರ್ಥಿಕ ಸಂಕಷ್ಟಕ್ಕೆ ಸಿಲುಕಿಸುತ್ತದೆ. ಬಡ ಕುಟುಂಬಗಳು ತತ್ತರಿಸುವಂತಾಗುತ್ತದೆ. ಈ ಹಿನ್ನೆಲೆಯಲ್ಲಿ ಕೈಗೆಟಕುವ ದರದಲ್ಲಿ ಚಿಕಿತ್ಸೆ ನೀಡುವ ಉದ್ದೇಶದಿಂದ ಹಲವೆಡೆ ಆಸ್ಪತ್ರೆಯ ಶಾಖೆಗಳನ್ನು ಆರಂಭಿಸಲಾಗುತ್ತಿದೆ ಎಂದು ತಿಳಿಸಿದರು. ಆಸ್ಪತ್ರೆಯ ಮೆಡಿಕಲ್ ಆಂಕಾಲಜಿ ವಿಭಾಗದ ಕನ್ಸಲ್ಟೆಂಟ್ ಡಾ.ಸಿ.ಬಿ. ಅವಿನಾಶ್, ಗರ್ಭಕಂಠದ ಕ್ಯಾನ್ಸರ್‌ಗೆ ವ್ಯಾಕ್ಸಿನ್ ಸೌಲಭ್ಯವಿದೆ ಎಂದು ಮಾಹಿತಿ ನೀಡಿದರು. ಕಲಾವಿದ ಬಾದಲ್ ನಂಜುಂಡಸ್ವಾಮಿ, ಆಸ್ಪತ್ರೆಯ ಮುಖ್ಯ ವ್ಯವಸ್ಥಾಪಕ ಎ.ಆರ್. ಮಂಜುನಾಥ್, ವೈದ್ಯಕೀಯ ಅಧೀಕ್ಷಕ ಡಾ.ರಾಕೇಶ್ ಮತ್ತಿತರರು ಉಪಸ್ಥಿತರಿದ್ದರು.

# ನಿವೃತ್ತ ಐಎಎಸ್ ಅಧಿಕಾರಿ ಕೆ.ಶಿವರಾಮ್ ನಿಧನ

**● ಮೊಟ್ಟ ಮೊದಲು ಕನ್ನಡದಲ್ಲಿ ಪರೀಕ್ಷೆ ಬರೆದು ಐಎಎಸ್ ಪಾಸ್ ಮಾಡಿದ್ದರು ● ಹಲವು ಚಿತ್ರಗಳಲ್ಲೂ ನಟಿಸಿದ್ದರು**



**ಬೆಂಗಳೂರು:** ಮೊದಲ ಬಾರಿಗೆ ಕನ್ನಡದಲ್ಲಿ ಪರೀಕ್ಷೆ ಬರೆದು, ಐಎಎಸ್ ಅಧಿಕಾರಿಯಾಗಿದ್ದ, ಬಿಜೆಪಿ ಮುಖಂಡ, ನಟ ಕೆ.ಶಿವರಾಮ್ ಹೃದಯಾಘಾತದಿಂದ ಗುರುವಾರ ಮೃತಪಟ್ಟಿದ್ದಾರೆ.

ಅನಾರೋಗ್ಯದಿಂದ ಕಳೆದ 20 ದಿನದ ಹಿಂದೆ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದ ಅವರಿಗೆ ಬುಧವಾರ ಹೃದಯಾಘಾತವಾಗಿತ್ತು. ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವರು ಚಿಕಿತ್ಸೆ ಫಲಿಸದೆ, ಗುರುವಾರ ಬೆಳಗ್ಗೆ ಮೃತಪಟ್ಟಿದ್ದಾರೆ. ಮೋದಿ ರಸ್ತೆಯ ಸ್ವಗೃಹದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ.

ರಾಮನಗರ ಜಿಲ್ಲೆಯ ಬಿಡದಿ ಬಳಿಯ ಹಳ್ಳಿಯಲ್ಲಿ 1953ರಲ್ಲಿ ಜನಿಸಿದ್ದ ಶಿವರಾಮು, 1985ರಲ್ಲಿ ಕೆಎಎಸ್ ಅಧಿಕಾರಿಯಾಗಿ ಆಯ್ಕೆಯಾಗಿದ್ದರು. ಬಳಿಕ, ಕನ್ನಡದಲ್ಲಿಯೇ ಐಎಎಸ್ ಪರೀಕ್ಷೆ ಬರೆದು, ಐಎಎಸ್ ಅಧಿಕಾರಿಯೂ ಆಗಿದ್ದರು. ಆ ಮೂಲಕ, ಕನ್ನಡದಲ್ಲಿ ಐಎಎಸ್ ಬರೆದು, ಅಧಿಕಾರಿಯಾದ ಮೊದಲ ಕನ್ನಡಿಗ ಎಂಬ ಹೆಗ್ಗಳಿಕೆಗೂ ಭಾಜನರಾಗಿದ್ದರು. ಕೆ.ಶಿವರಾಮ್ ಅವರು ಮೈಸೂರು ಮಹಾನಗರಪಾಲಿಕೆ ಆಯುಕ್ತರಾಗಿದ್ದರು. ಅಲ್ಲದೇ ರಾಜ್ಯದ ಹಲವು ಜಿಲ್ಲೆ ಯಲ್ಲಿ ಜಿಲ್ಲಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದರು. 1993ರಲ್ಲಿ ಸಿನಿರಂಗಕ್ಕೆ ಎಂಟ್ರಿ ಕೊಟ್ಟಿದ್ದ ಶಿವರಾಮು ಅವರು, ನಾಗತಿಹಳ್ಳಿ ನಿರ್ದೇಶನದ 'ಬಾ ನಲ್ಲೆ ಮಧುಚಂದ್ರಕೆ' ಸಿನಿಮಾದಲ್ಲಿ ನಾಯಕ ನಟನಾಗಿ ನಟಿಸಿದ್ದರು. ವಸಂತ ಕಾವ್ಯ, ಖಳ ನಾಯಕ, ಸಾಂಗ್ಲಿಯಾನ–3, ಪ್ರತಿಭಟನೆ, ಯಾರಿಗೆ ಬೇಡ ದುಡ್ಡು, ಗೇಮ್ ಫಾರ್ ಲವ್ ಹಾಗೂ ಟೈಗರ್ ಸಿನಿಮಾಗಳಲ್ಲಿ ನಟಿಸಿದ್ದರು. 2013ರಲ್ಲಿ ಐಎಎಸ್ ಹುದ್ದೆಗೆ ರಾಜೀನಾಮೆ ನೀಡಿ, ಕಾಂಗ್ರೆಸ್ ಸೇರಿ, ರಾಜಕೀಯ ಆರಂಭಿಸಿ ದ್ದರು. 2014ರ ಲೋಕಸಭಾ ಚುನಾವಣೆ ಯಲ್ಲಿ ವಿಜಯಪುರ ಕ್ಷೇತ್ರದಲ್ಲಿ ಸ್ಪರ್ಧಿಸಿ, ಸೋಲುಂಡಿದ್ದರು. ಬಳಿಕ, ಕಾಂಗ್ರೆಸ್ ತೊರೆದು, ಬಿಜೆಪಿ ಸೇರಿದ್ದರು. ಅಲ್ಲದೆ, ಛಲವಾದಿ ಮಹಾಸಭಾ ಅಧ್ಯಕ್ಷರೂ ಆಗಿದ್ದರು

## ಶಿವರಾಂ ನಿಧನಕ್ಕೆ ಡಾ.ಯೋಗಣ್ಣ ಸಂತಾಪ

ಮೈಸೂರು, ಫೆ.29– ನಿವೃತ್ತ ಐಎಎಸ್ ಅಧಿಕಾರಿ ಕೆ.ಶಿವರಾಂ ನಿಧನಕ್ಕೆ ಮೈಸೂರಿನ ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಅತೀವ ಸಂತಾಪ ವ್ಯಕ್ತಪಡಿಸಿದ್ದಾರೆ.

ಕೆ.ಶಿವರಾಂ ಅವರು ನನ್ನ ಅತ್ಯಂತ ಆತ್ಮೀಯ ಸ್ನೇಹಿತರಾಗಿದ್ದರು. ಮೈಸೂರು ನಗರಪಾಲಿಕೆ ಆಯುಕ್ತರಾಗಿದ್ದಾಗ ಅವರು ಕೈಗೊಂಡ ಜನಪರ ಕಾರ್ಯಕ್ರಮಗಳು ಅವಿಸ್ಮರಣೀಯ. ಬಡವರು, ದೀನ–ದಲಿತರ ಬಗ್ಗೆ ಕಾಳಜಿಯುಳ್ಳ ಅಧಿಕಾರಿಯಾಗಿದ್ದರು. ರಾಮನಗರದಲ್ಲಿ ಬಡ ಮಕ್ಕಳಿಗೆ ವಿದ್ಯಾರ್ಥಿ ನಿಲಯವನ್ನು ತಮ್ಮ ಸ್ವಂತ ಹಣದಲ್ಲಿ ಆರಂಭಿಸಿ, ಸಾವಿರಾರು ವಿದ್ಯಾರ್ಥಿಗಳಿಗೆ ನೆರವಾಗಿದ್ದರು. ಶಿವರಾಂ ಅಗಲಿಕೆಯಿಂದ ಸಮಾಜಕ್ಕೆ ತುಂಬಲಾರದ ನಷ್ಟವಾಗಿದೆ. ಅವರ ಕುಟುಂಬ ವರ್ಗಕ್ಕೆ ದೇವರು ನೋವು ಸಹಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸಿದ್ದಾರೆ.

# ಮಾ.3ರಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ

**● 30 ಚಿನ್ನ, 37 ನಗದು ಪುರಸ್ಕಾರ ಸೇರಿದಂತೆ 7869 ಮಂದಿಗೆ ನಾನಾ ಪದವಿ ಪ್ರದಾನ ● ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಮಾಹಿತಿ**


ಮೈಸೂರಿನ ಮುಕ್ತ ಗಂಗೋತ್ರಿಯ ಅತಿಥಿ ಗೃಹದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಘಟಿಕೋತ್ಸವ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು,ಫೆ.29(ಎಂಟಿವೈ)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 19ನೇ ಘಟಿಕೋತ್ಸವ ಮುಕ್ತಗಂಗೋತ್ರಿಯ ಘಟಿಕೋತ್ಸವ ಭವನದಲ್ಲಿ ಮಾ.3ರಂದು ಮಧ್ಯಾಹ್ನ 12 ಗಂಟೆಗೆ ಜರುಗಲಿದ್ದು, ಈ ಬಾರಿ ಮೂವರಿಗೆ ಗೌರವ ಡಾಕ್ಟರೇಟ್, 30 ಚಿನ್ನದ ಪದಕ, 37 ನಗದು ಬಹುಮಾನ ಸೇರಿದಂತೆ 7869 ಮಂದಿಗೆ ವಿವಿಧ ವಿಷಯಗಳಲ್ಲಿ ಪದವಿ ಪ್ರದಾನ ಮಾಡಲಾಗುತ್ತಿದೆ ಎಂದು ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ. ಹಲಸೆ ತಿಳಿಸಿದ್ದಾರೆ.

ಮುಕ್ತ ವಿವಿ ಅತಿಥಿಗೃಹದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮುಕ್ತ ವಿವಿ ಕುಲಾಧಿಪತಿಗಳೂ ಆದ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ವಹಿಸಲಿದ್ದು, ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಕುಲಸಚಿವರಾದ ಪ್ರೊ.ಬಿ.ಕೆ.ಪ್ರವೀಣ, ಪ್ರೊ.ಕೆ.ಎಲ್.ಎನ್.ಮೂರ್ತಿ ಉಪಸ್ಥಿತಿಯಲ್ಲಿ ಘಟಿಕೋತ್ಸವ ಜರುಗಲಿದೆ ಎಂದರು.

ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳಲ್ಲಿ ಒಟ್ಟು 10,276 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಅವರಲ್ಲಿ ಶೇ. 76.57ರಷ್ಟು, ಸರಾಸರಿ 7869 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಘಟಿಕೋತ್ಸವದಲ್ಲಿ ಇವರಿಗೆ ಪದವಿ ಪ್ರದಾನ ಮಾಡಲಾಗುತ್ತಿದೆ. ಇದರೊಂದಿಗೆ ಮೂವರಿಗೆ ಗೌರವ ಡಾಕ್ಟರೇಟ್, ಮೂವರು ಪಿಹೆಚ್.ಡಿ, 30 ಮಂದಿಗೆ ಚಿನ್ನದ ಪದಕ ಹಾಗೂ 37 ಮಂದಿಗೆ ನಗದು ಬಹುಮಾನ ವಿತರಿಸಲಾಗುತ್ತಿದೆ ಎಂದು ವಿವರಿಸಿದರು.

**ಮಹಿಳೆಯರು ಮೇಲುಗೈ:** ಇದೇ ವೇಳೆ ಪರೀಕ್ಷಾಂಗ ಕುಲಸಚಿವ ಪ್ರೊ.ಕೆ.ಬಿ. ಪ್ರವೀಣ ಮಾತನಾಡಿ, ಈ ಬಾರಿ ಪದವಿ ಪಡೆಯುತ್ತಿರುವ ಒಟ್ಟು 7869 ವಿದ್ಯಾರ್ಥಿಗಳಲ್ಲಿ 3398 ಪುರುಷರು, 4471 ಮಹಿಳೆಯರಿದ್ದಾರೆ. ಈ ಬಾರಿ ಮಹಿಳೆಯರೇ ಮೇಲುಗೈ ಸಾಧಿಸಿದ್ದಾರೆ. ಕನ್ನಡ, ಇತಿಹಾಸ ಮತ್ತು ರಾಜ್ಯಶಾಸ್ತ್ರದ ವಿಷಯದಲ್ಲಿ ಕ್ರಮವಾಗಿ ಮೂವರು ವಿದ್ಯಾರ್ಥಿಗಳು ಪಿಹೆಚ್.ಡಿ ಪದವಿ ಪಡೆದಿದ್ದಾರೆ. ಮಾನವಿಕ ವಿಷಯದ ಸ್ನಾತಕೋತ್ತರ ಪದವಿಯಲ್ಲಿ 1016, ಸ್ನಾತಕ ಪದವಿಯಲ್ಲಿ 2501, ಸಮಾಜ ವಿಜ್ಞಾನ ವಿಷಯಗಳಲ್ಲಿ 1239, ವಾಣಿಜ್ಯಶಾಸ್ತ್ರದ ವಿಷಯದ ಸ್ನಾತಕ ಪದವಿಯಲ್ಲಿ 472, ಸ್ನಾತಕೋತ್ತರ ಪದವಿಯಲ್ಲಿ 615, ನಿರ್ವಹಣಾ ಶಾಸ್ತ್ರ ವಿಷಯದಲ್ಲಿ 719, ವಿಜ್ಞಾನ ಮತ್ತು ಗ್ರಂಥಾಲಯ ಮಾಹಿತಿ ವಿಜ್ಞಾನ ವಿಷಯದಲ್ಲಿ 1304 ವಿದ್ಯಾರ್ಥಿಗಳು ಪದವಿ ಪಡೆಯಲಿದ್ದಾರೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಕುಲಸಚಿವ ಪ್ರೊ.ಕೆ.ಎಲ್.ಎನ್. ಮೂರ್ತಿ, ಡೀನ್ ಅಕಾಡೆಮಿಕ್ ಪ್ರೊ.ಲಕ್ಷ್ಮೀ, ಡೀನ್ ಸ್ಟಡಿ ಸೆಂಟರ್ ಪ್ರೊ.ರಾಮನಾಥನ್ ನಾಯ್ಡು, ಪ್ರಭಾರ ಹಣಕಾಸು ಅಧಿಕಾರಿ ಡಾ.ವಿ.ಎಂ.ರಮೇಶ್ ಇನ್ನಿತರರು ಉಪಸ್ಥಿತರಿದ್ದರು.

## ನಾಳೆ, ನಾಡಿದ್ದು ಡಾ.ಬಿ.ಆರ್.ಅಂಬೇಡ್ಕರ್ ವಿಷಯವಾಗಿ ಅಂತಾರಾಷ್ಟ್ರೀಯ ಸಮ್ಮೇಳನ



ಮೈಸೂರು, ಫೆ.29 (ಎಂಟಿವೈ)–ಕರ್ನಾಟಕ ರಾಜ್ಯ ಮುಕ್ತ ವಿವಿಯ ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ಮಾ.2 ಮತ್ತು 3ರಂದು, ಎರಡು ದಿನಗಳ 'ಡಾ.ಬಿ.ಆರ್.ಅಂಬೇಡ್ಕರ್ ಅವರ ಅಭಿವೃದ್ಧಿ ದೃಷ್ಟಿಕೋನಗಳು ಮತ್ತು ಸಮಕಾಲೀನ ಜಗತ್ತು' ವಿಷಯದ ಮೇಲೆ ಅಂತಾರಾಷ್ಟ್ರೀಯ ಸಮ್ಮೇಳನ ಆಯೋಜಿಸಲಾಗಿದೆ ಎಂದು ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ. ಹಲಸೆ ತಿಳಿಸಿದ್ದಾರೆ

ಸಮ್ಮೇಳನವನ್ನು ಮಾ.2ರಂದು ಬೆಳಗ್ಗೆ 10.30ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಲಿದ್ದಾರೆ. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅತಿಥಿಗಳಾಗಿ ಭಾಗವಹಿಸುವರು. ಆಕ್ಸಫರ್ಡ್ ವಿವಿ ಪ್ರಾಧ್ಯಾಪಕ ಅಸಂಗ್ ವಾಂಖೇಡೆ ಆಶಯ ಭಾಷಣ ಮಾಡಲಿದ್ದಾರೆ. ಸಮ್ಮೇಳನದ ಸಮಾರೋಪ ಸಮಾರಂಭ ಮಾ. 3ರಂದು ಸಂಜೆ 4 ಗಂಟೆಗೆ ನಡೆಯಲಿದ್ದು, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸುವರು. ಸಣ್ಣ ಕೈಗಾರಿಕೆ ಸಚಿವ ಶರಣಬಸಪ್ಪ ದರ್ಶನಪುರ ಭಾಗವಹಿಸುವರು. ಪ್ರೊ. ಯಗತಿ ಚಿನ್ನರಾವ್ ಸಮಾರೋಪ ಭಾಷಣ ಮಾಡಲಿದ್ದಾರೆ ಎಂದರು.

# ವೈಜ್ಞಾನಿಕತೆ ರೂಢಿಸಿಕೊಳ್ಳದಿದ್ದಲ್ಲಿ ಉದ್ಯೋಗಾವಕಾಶಗಳಿಂದ ವಂಚಿತರಾಗಬಹುದು

**ವಿದ್ಯಾರ್ಥಿಗಳಿಗೆ ಸಿಎಫ್‌ಟಿಆರ್‌ಐ ನಿವೃತ್ತ ವಿಜ್ಞಾನಿ ಡಾ.ಜಿ.ವೆಂಕಟೇಶ್ವರನ್ ಎಚ್ಚರಿಕೆ**



ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯಲ್ಲಿ ಸಿಎಫ್‌ಟಿಆರ್‌ಐ ವಿಶ್ರಾಂತ ವಿಜ್ಞಾನಿ ಡಾ.ಜಿ.ವೆಂಕಟೇಶ್ವರನ್ ಮಾತನಾಡಿದರು.

ಮೈಸೂರು, ಫೆ.29(ಎಸ್‌ಬಿಡಿ)– ತಂತ್ರಜ್ಞಾನ, ವೈಜ್ಞಾನಿಕ ಸಂಶೋಧನೆ ಬಗ್ಗೆ ತಿಳಿದುಕೊಳ್ಳುವುದು ಅತ್ಯವಶ್ಯಕ ಎಂದು ಸಿಎಫ್‌ಟಿಆರ್‌ಐ ನಿವೃತ್ತ ವಿಜ್ಞಾನಿ ಡಾ.ಜಿ.ವೆಂಕಟೇಶ್ವರನ್ ವಿದ್ಯಾರ್ಥಿ ಗಳಿಗೆ ಕಿವಿಮಾತು ಹೇಳಿದರು.

ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಸ್ವಾಯತ್ತ ಕಾಲೇಜಿನಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ವೈಜ್ಞಾನಿಕ ಸಂಶೋಧನೆಗಳು ವೇಗದ ಗತಿಯಲ್ಲಿದ್ದು, ಇದಕ್ಕೆ ತಕ್ಕಂತೆ ವಿದ್ಯಾರ್ಥಿಗಳು ತಮ್ಮ ಜ್ಞಾನವನ್ನು ವೃದ್ಧಿಸಿಕೊಳ್ಳಬೇಕು ಎಂದರು.

ತಂತ್ರಜ್ಞಾನವನ್ನು ಬಳಸಿಕೊಂಡು, ಜ್ಞಾನ ಮಟ್ಟ ಹೆಚ್ಚಿಸಿಕೊಳ್ಳಬೇಕು. ತಂತ್ರಜ್ಞಾನ ಆಧಾರಿತ ಜ್ಞಾನದ ಬಳಕೆಯೇ ಪ್ರಸ್ತುತ ಬಹಳ ಮುಖ್ಯವಾಗಿದೆ ಇಲ್ಲವಾದರೆ ಸಮಾಜದಲ್ಲಿ ನೀವೇ ಅಪ್ರಸ್ತುತ ಆಗುವ ಆಪಾಯವಿದೆ. ಸಾಕಷ್ಟು ಉದ್ಯೋಗಾವಕಾಶಗಳಿಂದ ವಂಚಿತರಾಗುತ್ತೀರಿ. ದೇಶದಲ್ಲಿ ಸಂಶೋಧನೆಗೆ ವಿಫುಲವಾದ ಅವಕಾಶಗಳಿವೆ. ಈ ಬಗ್ಗೆ ವಿದ್ಯಾರ್ಥಿಗಳು ಗಮನಹರಿಸಬೇಕು. ಅಂತರ್ಜಾಲವನ್ನು ಶೈಕ್ಷಣಿಕ ಹಾಗೂ ಉದ್ಯೋಗ ಮಾಹಿತಿಗಾಗಿ ಬಳಸಿಕೊಳ್ಳಿ, ಉತ್ತಮ ಉದ್ಯೋಗಗಳಿಸಿಕೊಂಡು ಸಮಾಜಕ್ಕೆ ಉತ್ತಮ ಪ್ರಜೆಗಳಾಗಿ ಎಂದು ಸಲಹೆ ನೀಡಿದರು.

ಡಿಎಫ್‌ಆರ್‌ಎಲ್ ಮತ್ತು ಸಿಎಫ್‌ಟಿಆರ್‌ಐ ಆಹಾರ ಸಂಸ್ಕರಣೆಯಲ್ಲಿ ಮಾಡಿರುವ ಆವಿಷ್ಕಾರಗಳ ಬಗ್ಗೆ ವಿದ್ಯಾರ್ಥಿಗಳಿಗೆ ಪರಿಚಯಿಸಿದ ಅವರು, ಆರೋಗ್ಯ ಕಾಳಜಿಯೂ ಬಹಳ ಮುಖ್ಯ. ಆರೋಗ್ಯಕ್ಕೆ ಪೂರಕವಾದ ಧಾನ್ಯಗಳು ಹಾಗೂ ಆಹಾರವನ್ನು ಸೇವಿಸಿ. ನಾಲಿಗೆ ರುಚಿಗಾಗಿ ಆರೋಗ್ಯ ಹಾಳು ಮಾಡುವ ಆಹಾರಕ್ಕೆ ಮಾರು ಹೋಗಬೇಡಿ ಎಂದು ಕಿವಿಮಾತು ಹೇಳಿದರು. ಪ್ರಾಂಶುಪಾಲ ಪ್ರೊ.ಅಬ್ದುಲ್ ರಹಿಮಾನ್ ಮಾತನಾಡಿ, ಶಿಕ್ಷಣದೊಂದಿಗೆ ವೈಜ್ಞಾನಿಕ ಮನೋಭಾವ ಬೆಳೆಸಿಕೊಂಡು ತಮ್ಮ ಸುತ್ತಮುತ್ತಲಿನ ಪರಸರವನ್ನು ಸುಧಾರಿಸುವ ಪ್ರಯತ್ನ ವಿದ್ಯಾರ್ಥಿಗಳಿಂದ ಆಗಬೇಕು ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಆಂತರಿಕ ಗುಣಮಟ್ಟ ಕೋಶದ ಸಂಚಾಲಕ ವಿ.ನಂದಕುಮಾರ್, ವಿಜ್ಞಾನ ಸಮಿತಿ ಸಂಚಾಲಕ ಸರ್ದಾರ್ ಹುಸೇನ್, ಅಧ್ಯಾಪಕ ಕಾರ್ಯದರ್ಶಿ ಡಾ.ಡಿ.ಕೆ.ರವಿಶಂಕರ್, ಸಮಿತಿ ಸದಸ್ಯರಾದ ಡಾ.ಸಿದ್ದೇಗೌಡ, ಎಸ್.ವಿ.ಪ್ರಭಾಕರ್, ಡಾ. ಎಂ.ಎಸ್.ಕುಮಾರ್, ಪೃಥ್ವಿರಾಜ್, ಗೋವಿಂದರಾಜು, ಮಾನಸ ಸೇರಿದಂತೆ ಅಧ್ಯಾಪಕರು, ವಿದ್ಯಾರ್ಥಿಗಳು ಹಾಗೂ ಕಛೇರಿ ಸಿಬ್ಬಂದಿ ಭಾಗವಹಿಸಿದ್ದರು.

## ಮಾ.3, 'ಭ್ರಷ್ಟ ಪಿಶಾಚಿಗಳು' ನಾಟಕ ಪ್ರದರ್ಶನ

ಮೈಸೂರು, ಫೆ. 29– ಮೈಸೂರಿನ ಸರಸ್ವತಿಪುರಂನಲ್ಲಿರುವ ಹೆರಿಟೇಜ್ ಹೌಸ್‌ನಲ್ಲಿ ಮಾ.3ರಂದು ಸಂಜೆ 6.30ಕ್ಕೆ ಚಂದಮಾಮ ಕಥೆಯನ್ನಾಧರಿಸಿದ 'ಭ್ರಷ್ಟ ಪಿಶಾಚಿಗಳು' ಮಕ್ಕಳ ನಾಟಕ ಪ್ರದರ್ಶನವಿದೆ. ಪ್ರಯೋಗ ರಂಗ ತರಬೇತಿ ಸಂಸ್ಥೆಯು, ನಗರದ ಭಾರತೀಯ ಪಾರಂಪರಿಕ ನಗರಗಳ ಒಕ್ಕೂಟ ಸಂಸ್ಥೆಯ ಸಹಯೋಗದೊಂದಿಗೆ ಈ ನಾಟಕವನ್ನು ಪ್ರಸ್ತುತಪಡಿಸುತ್ತಿದೆ. ಚಂದಮಾಮನ ಕಥೆ ಚಂದಿರನ ಅಂಗಳದಲ್ಲಿ ನಕ್ಷತ್ರಗಳ ಹೊಳಪಿನ ತಂಪಾದ ಗಾಳಿಯನ್ನು ಸೇವಿಸುತ್ತಾ, ನಾವು ಕೇಳುತ್ತಿದ್ದ ತಾತ ಅಜ್ಜಿಯ ಅಣಿ ಮುತ್ತುಗಳು. ಈ ಚಂದಮಾಮನ ಕಥೆಗಳ ಮೂಲ ನಮಗೆ ಗೊತ್ತಿಲ್ಲ. ಆದರೆ ಕಥೆಗಳಿಗೆ ಎಂದಿಗೂ ಸಾವಿಲ್ಲ. ಇಂತಹ ಕೆಲವು ಕಥೆಗಳು ರಂಗರೂಪವಾಗಿ ನಿಮ್ಮ ಮುಂದೆ ಪ್ರದರ್ಶನಕ್ಕೆ ಸಿದ್ಧವಾಗಿದೆ. ಪಾಸ್‌ಗಳಿಗೆ ಮೊ. 9972962868 ಸಂಪರ್ಕಿಸಬಹುದು.

# ಆಸ್ಪತ್ರೆ ಸೇವೆಗಳಿಗೆ ಏಕರೂಪ ದರ: ಕೇಂದ್ರಕ್ಕೆ ಸುಪ್ರೀಂ ತಾಕೀತು

ನವದೆಹಲಿ, ಫೆ.29– ಆಸ್ಪತ್ರೆ ಸೇವೆಗಳಿಗೆ ಏಕರೂಪ ದರ ನಿಗದಿ ನಿಗದಿ ಮಾಡಬೇಕು ಎಂದು ಸೂಚಿಸಿರುವ ಸುಪ್ರೀಂಕೋರ್ಟ್, ಒಂದು ತಿಂಗಳೊಳಗೆ ಈ ಕುರಿತು ಕ್ರಮ ಕೈಗೊಳ್ಳದೇ ಹೋದಲ್ಲಿ ನಾವೇ ಈ ಕುರಿತು ಆದೇಶ ಹೊರಡಿಸಬೇಕಾಗುತ್ತದೆ ಎಂದು ಕೇಂದ್ರ ಸರ್ಕಾರಕ್ಕೆ ಎಚ್ಚರಿಸಿದೆ. 'ವೆಟರನ್ಸ್ ಫೋರಂ ಫಾರ್ ಟ್ರಾನ್ಸ್‌ಪರೆನ್ಸಿ ಇನ್ ಪಬ್ಲಿಕ್ ಲೈಫ್' ಸರ್ಕಾರೇತರ ಸಂಸ್ಥೆಯೊಂದು, 2012ರ ಕ್ಲಿನಿಕಲ್ ಎಸ್ಟಾಬ್ಲಿಷ್‌ಮೆಂಟ್ ಕಾಯ್ದೆಯ 9ನೇ ವಿಧಿಯ ಅನ್ವಯ ವಿವಿಧ ಚಿಕಿತ್ಸೆಗಳಿಗೆ ಸೂಕ್ತ ದರ ನಿಗದಿ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಸೂಚಿಸಬೇಕು ಎಂದು ಕೋರಿತ್ತು.

ಇದರ ವಿಚಾರಣೆ ನಡೆಸಿ ಉದಾಹರಣೆ ಸಮೇತ ಆದೇಶ ನೀಡಿದ ಕೋರ್ಟ್, ಕ್ಯಾಟರಾಕ್ಟ್ (ಕಣ್ಣಿನ) ಶಸ್ತ್ರಚಿಕಿತ್ಸೆಗೆ ಸರ್ಕಾರಿ ಆಸ್ಪತ್ರೆಯಲ್ಲಿ 10 ಸಾವಿರ ರೂ. ವೆಚ್ಚ ತಗುಲಿದರೆ, ಖಾಸಗಿ ಆಸ್ಪತ್ರೆಗಳಲ್ಲಿ 30 ಸಾವಿರ ರೂಗಳಿಂದ 1.40 ಲಕ್ಷ ರೂ.ವರೆಗೂ ದರ ವಿಧಿಸಲಾಗುತ್ತಿದೆ. ಒಂದೇ ರೀತಿಯ ಸೇವೆಗೆ ಹೀಗೆ ದರ ತಾರತಮ್ಯ ಇದ್ದರೂ, ಇದನ್ನು ಸರ್ಕಾರ ತಡೆದಿಲ್ಲ, ಈ ತಾರತಮ್ಯ ತಡೆಯಲು 14 ವರ್ಷಗಳ ಹಿಂದಿನ ಕಾಯ್ದೆ ಜಾರಿಯಲ್ಲಿ ಸರ್ಕಾರ ವಿಫಲವಾಗಿದೆ ಎಂದು ಕಿಡಿಕಾರಿತು. ಈ ಕಾಯ್ದೆಯ ಅನ್ವಯ ದೇಶಾದ್ಯಂತ ಇರುವ ಎಲ್ಲಾ ಆಸ್ಪತ್ರೆ ಮತ್ತು ಚಿಕಿತ್ಸಾ ಕೇಂದ್ರಗಳು ತಮ್ಮಲ್ಲಿ ನೀಡುವ ವಿವಿಧ ಸೇವೆಗಳ ಶುಲ್ಕದ ಕುರಿತು ಪ್ರಾದೇಶಿಕ ಮತ್ತು ಆಂಗ್ಲ ಭಾಷೆಯಲ್ಲಿ ಸ್ಪಷ್ಟ ಮಾಹಿತಿಯನ್ನು ಎಲ್ಲರಿಗೂ ಕಾಣುವ ಸ್ಥಳದಲ್ಲಿ ಪ್ರದರ್ಶಿಸುವುದು ಕಡ್ಡಾಯ. ಇಂಥ ದರ ಕಾಲಕಾಲಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಿಗದಿ ಮಾಡುವ ಮಿತಿಯಲ್ಲೇ ಇರಬೇಕು ಎಂದು ಸೂಚಿಸುತ್ತದೆ.

ಆದರೆ ಈ ಅರ್ಜಿ ವಿಚಾರಣೆ ವೇಳೆ ತನ್ನ ಅಸಹಾಯಕತೆ ಪ್ರದರ್ಶಿಸಿದ್ದ ಕೇಂದ್ರ ಸರ್ಕಾರ, ಈ ಕುರಿತು ಹಲವು ಬಾರಿ ರಾಜ್ಯಗಳಿಗೆ ಮನವಿ ಮಾಡಿಕೊಂಡರೂ ಅವುಗಳು ಸೂಕ್ತವಾಗಿ ಸ್ಪಂದಿಸಿಲ್ಲ ಎಂದಿತ್ತು. ಈ ವೇಳೆ ಅರ್ಜಿದಾರರು, ಕೇಂದ್ರ ಸರ್ಕಾರ ತನ್ನ ವಿಶೇಷ ಅಧಿಕಾರ ಬಳಸಿ ದರ ನಿಗದಿ ಮಾಡಬಹುದು ಎಂದಿತ್ತು.

ಇದಕ್ಕೆ ಪ್ರತಿಕ್ರಿಯೆ ನೀಡಿದ ಸುಪ್ರೀಂಕೋರ್ಟ್, ನಾಗರಿಕರು ಆರೋಗ್ಯ ಸೇವೆಗಳ ಮೂಲಭೂತ ಹಕ್ಕು ಹೊಂದಿದ್ದಾರೆ. ಈ ವಿಷಯದಲ್ಲಿ ಕೇಂದ್ರ ಸರ್ಕಾರ ತನ್ನ ಹೊಣೆಯಿಂದ ತಪ್ಪಿಸಿಕೊಳ್ಳುವಂತಿಲ್ಲ. ಹೀಗಾಗಿ ಕೇಂದ್ರ ಆರೋಗ್ಯ ಇಲಾಖೆಯ ಕಾರ್ಯದರ್ಶಿಗಳು ಶೀಘ್ರವೇ ರಾಜ್ಯಗಳ ಆರೋಗ್ಯ ಕಾರ್ಯದರ್ಶಿಗಳ ಸಭೆ ಕರೆಯಬೇಕು. ಅಲ್ಲಿ ಏಕರೂಪ ದರ ನಿಗದಿ ಮಾಡಿ ಅದನ್ನು ಎಲ್ಲಾ ಆಸ್ಪತ್ರೆಗಳು ಕಡ್ಡಾಯವಾಗಿ ಪ್ರದರ್ಶಿಸುವಂತೆ ನೋಡಿಕೊಳ್ಳಬೇಕು. ಈ ಪ್ರಕ್ರಿಯೆ ಒಂದು ತಿಂಗಳಲ್ಲಿ ಮುಗಿಯಬೇಕು ಎಂದಿದೆ.

# ಮೈಸೂರು ಹಾಗೂ ಸುತ್ತಮುತ್ತ ಇಂದು...



## ಇಂದಿನ ಪಂಚಾಂಗ

**1.3.2024 ಶುಕ್ರವಾರ, ಮಳೆ ನಕ್ಷತ್ರ: ಶತಭಿಷ 20.2.2024 ರಿಂದ 03.03.2024 ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಸ್ವಾತಿ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ**

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ, ಬೆಳಗ್ಗೆ 9ರಿಂದ; ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ, ಬೆಳಗ್ಗೆ 6.30ರಿಂದ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಮೈಸೂರು ಜಿಲ್ಲಾ ಸಹಕಾರ ಯೂನಿಯನ್, ಸಹಕಾರ ಇಲಾಖೆ:** ಮೈಸೂರು ವಿಭಾಗದ ಪಟ್ಟಣ ಸಹಕಾರ ಬ್ಯಾಂಕುಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಹಿರಿಯ ಅಧಿಕಾರಿಗಳಿಗೆ ರಾಜ್ಯಮಟ್ಟದ ತರಬೇತಿ ಕಾರ್ಯಕ್ರಮ, ಉದ್ಘಾಟನೆ: ಶಾಸಕ ಜಿ.ಟಿ.ದೇವೇಗೌಡ, ಅಧ್ಯಕ್ಷತೆ: ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಹೆಚ್.ವಿ.ರಾಜೀವ್, ಮುಖ್ಯ ಅತಿಥಿಗಳು: ಮಹಾಮಂಡಳ ಉಪಾಧ್ಯಕ್ಷ ಜಗದೀಶ ಮಲ್ಲಿಕಾರ್ಜುನ ಕವಟಗಿಮಠ, ನಿರ್ದೇಶಕರಾದ ಬಿ.ಸಿ.ಲೋಕಪ್ಪಗೌಡ, ಜಯಕರಶೆಟ್ಟಿ ಬಿ.ಇಂದ್ರಾಳಿ, ನಾಮನಿರ್ದೇಶಿತ ನಿರ್ದೇಶಕ ಎನ್.ಗಂಗಣ್ಣ, ಸ್ಥಳ: ದಿ ಲೀ ರುಚಿ, ದಿ ಪ್ರಿನ್ಸ್, ಹುಣಸೂರು ರಸ್ತೆ, ಬೆಳಗ್ಗೆ 11ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ಅನಿರುದ್ಧಾಚಾರ್ ಪಾಂಡುರಂಗಿ ಅವರಿಂದ ಪದ್ಮಪುರಾಣ ಕುರಿತು ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮೀಪುರಂ, ಸಂಜೆ 5 ರಿಂದ.

■ **ಕರ್ನಾಟಕ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ, ಬೆಂಗಳೂರು, ಗಾರ್ಡ್ ಸಂಸ್ಥೆಯ ಎಂಎಸ್‌ಎಂ–ಟಿಐ ಯೋಜನೆ, ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕ:** ಸಮುದಾಯ ಸಂಗಮ ಕಾರ್ಯಕ್ರಮ ಹಾಗೂ ವಾರ್ಷಿಕೋತ್ಸವ ಸಮಾರಂಭ, ಉದ್ಘಾಟನೆ: ಹಿರಿಯ ಸಿವಿಲ್ ನ್ಯಾಯಾಧೀಶ ಬಿ.ಜಿ.ದಿನೇಶ್, ಅಧ್ಯಕ್ಷತೆ: ಗಾರ್ಡ್ ಸಂಸ್ಥೆ ಅಧ್ಯಕ್ಷ ಡಾ.ಎಸ್.ದಿವಾಕರ್, ಮುಖ್ಯ ಅತಿಥಿಗಳು: ಮಹಾನಗರಪಾಲಿಕೆ ಹೆಚ್ಚುವರಿ ಆಯುಕ್ತರಾದ ಕುಸುಮ ಕುಮಾರಿ, ವಿಭಾಗೀಯ ಸಹ ನಿರ್ದೇಶಕರ ಕಚೇರಿ ಉಪ ನಿರ್ದೇಶಕರಾದ ಡಾ.ಬಿ.ಮಲ್ಲಿಕಾ, ಜಿಲ್ಲಾ ಏಡ್ಸ್ ನಿಯಂತ್ರಣ ಅಧಿಕಾರಿ ಡಾ.ಮೊಹಮದ್ ಶಿರಾಜ್ ಅಹಮದ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಹೆಚ್.ಆರ್.ಸುರೇಶ್, ಸ್ಥಳ: ವೈದ್ಯರ ಭವನ ಸಭಾಂಗಣ, ಜಿಲ್ಲಾ ಆರೋಗ್ಯಾಧಿಕಾರಿಗಳ ಕಚೇರಿ ಆವರಣ, ಬೆಳಗ್ಗೆ 11ಕ್ಕೆ.

■ **ಶ್ರೀ ಶ್ರೀ ಶ್ರೀ 101 ಗಣಪತಿ ದೇವಸ್ಥಾನ ಟ್ರಸ್ಟ್:** ಶ್ರೀ ಸುಬ್ರಹ್ಮಣ್ಯಸ್ವಾಮಿ ಪ್ರತಿಷ್ಠಾ ಮಹೋತ್ಸವ, ಬ್ರಾಹ್ಮಿ ಮುಹೂರ್ತದಲ್ಲಿ ಪ್ರತಿಷ್ಠೆ, ನ್ಯಾಸಗಳು, ಪ್ರಾಣಪ್ರತಿಷ್ಠೆ ಪ್ರಧಾನ ಹೋಮ, ಪೂರ್ಣಾಹುತಿ, ಸಂಯೋಜನೆ, ಬೆಳಗ್ಗೆ 10.30ಕ್ಕೆ ಕುಂಭಾಭಿಷೇಕ, ಅಲಂಕಾರ, ನಿರೀಕ್ಷಣ, ಮಹಾನೈವೇದ್ಯ, ಸ್ಥಳ: ಗಣಪತಿ ದೇವಸ್ಥಾನ, ತ್ಯಾಗರಾಜ ವೃತ್ತ, ಕೆ.ಆರ್. ಮೊಹಲ್ಲಾ.

■ **ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ಕಲಾಸುರುಚಿ ಮತ್ತು ಅರಿವು ರಂಗ ಕಲಾವಿದರಿಂದ ನೋಬೆಲ್ ಪ್ರಶಸ್ತಿ ವಿಜೇತ ರಿಚರ್ಡ್ ಫೆನ್ಮನ್ ಕುರಿತು ನಾಟಕ ಪ್ರದರ್ಶನ, ಅಧ್ಯಕ್ಷತೆ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ.ಆರ್.ದೀಪು, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 5.30ಕ್ಕೆ.

■ **ಪ್ರಗತಿಪರ ಸಂಘಟನೆಗಳ ಒಕ್ಕೂಟ:** ಬೆಳಗ್ಗೆ 10.30ಕ್ಕೆ ಪ.ಮಲ್ಲೇಶ್–90, ಭಾರತ ಜನತಂತ್ರದ ಸಮಕಾಲೀನ ತಲ್ಲಣಗಳು ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ, ಪ್ರಾಸ್ತಾವಿಕ ನುಡಿಗಳು: ಸವಿತಾ ಪ.ಮಲ್ಲೇಶ್, ಉದ್ಘಾಟನೆ: ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆಟಲ್‌ವಾಡ್, ದಿಕ್ಸೂಚಿ ಭಾಷಣ: ಹಿರಿಯ ವಕೀಲ ಪ್ರೊ.ರವಿವರ್ಮಕುಮಾರ್, ಮ. 12ರಿಂದ ಗೋಷ್ಠಿ–1–ಜನತಂತ್ರದ ಆಶಯಗಳು, ಉಪಸ್ಥಿತರು: ಚಲನಚಿತ್ರ ನಟ ಪ್ರಕಾಶ್ ರೈ, ಸಾಮಾಜಿಕ ಕಾರ್ಯಕರ್ತ ಅನ್ಮೊಲ್ ಅವಿಜಿತ್; ಮ.1ರಿಂದ ಗೋಷ್ಠಿ–2–ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷಗಳು ಮತ್ತು ಮಾಧ್ಯಮಗಳು, ಉಪಸ್ಥಿತರು: ಹಿರಿಯ ಪತ್ರಕರ್ತರಾದ ಪರನ್‌ಜೋಯ್ ಗುಹಾ ಥಾಕೂರ್, ದಿನೇಶ್ ಅಮೀನ್ ಮಟ್ಟು, ಜಗದೀಶ್ ಕೊಪ್ಪ, ಮ. 2.45ರಿಂದ ಗೋಷ್ಠಿ–3–ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಯುವಜನತೆಯ ಭವಿಷ್ಯ, ಉಪಸ್ಥಿತರು: ಶಿಕ್ಷಣ ತಜ್ಞ ಡಾ.ವಿ.ಪಿ.ನಿರಂಜನಾರಾಧ್ಯ, ನಿವೃತ್ತ ಪ್ರಾಧ್ಯಾಪಕ ಪ್ರೊ.ಮುಜಾಫರ್ ಅಸ್ಸಾದಿ, ಮ.3.45ಕ್ಕೆ ಗೋಷ್ಠಿ–4–ಕರಾಳ ಕೃಷಿ ಕಾನೂನುಗಳ ವಿರುದ್ಧದ ಹೋರಾಟ ಮತ್ತು ರೈತ ಚಳುವಳಿ, ಉಪಸ್ಥಿತರು: ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ ಪ್ರಕಾಶ್ ಕಮ್ಮರಡಿ, ಪ್ರಗತಿಪರ ಕೃಷಿಕ ಕಿಶೋರ್ ಕುಮಾರ್, ಸಂಜೆ 5ರಿಂದ ಆಶಯ ನುಡಿ: ಮುಖ್ಯಮಂತ್ರಿ ಸಿದ್ದರಾಮಯ್ಯ, ಅಧ್ಯಕ್ಷತೆ: ಸಮಾಜವಾದಿ ಚಿಂತಕ ಬಿ.ಆರ್.ಪಾಟೀಲ್, ಸಂಜೆ 6.45ರಿಂದ ಮೈಸೂರಿನ ಜನಮನ ಸಾಂಸ್ಕೃತಿಕ ಸಂಘಟನೆ ಕಲಾವಿದರಿಂದ ಸಾಪೋಕ್ಲಿಷನ ಅಂತಿಗೊನೆ ನಾಟಕ ಪ್ರದರ್ಶನ, ಅನುವಾದ: ಪಿ.ಲಂಕೇಶ್, ನಿರ್ದೇಶನ: ಕೆ.ಆರ್.ಸುಮತಿ, ಸಂಗೀತ: ಚಿಂತನ್ ವಿಕಾಸ್, ಸ್ಥಳ: ಕಲಾಮಂದಿರ.

## ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬಣ್ಣದ ಬಾನಾಡಿಗಳು –ಬಾನುಲಿ ಸರಣಿ, ರಚನೆ– ಲೀಲಾ ಅಪ್ಪಾಜಿ, ಪ್ರಸ್ತುತಿ– ಜಿ.ಶಾಂತಕುಮಾರ್, 6.40 ಕರಾಮುವಿವಿ ಮುಕ್ತವಾಣಿ –ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ.ಭಾಗವಹಿಸುತ್ತಾರೆ. ಪ್ರೊ.ಕೆ.ಬಿ. ಪ್ರವೀಣ್, ಕುಲಸಚಿವರು. ಪ್ರಸ್ತುತಿ– ಎನ್.ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 KABI-ಕರ್ನಾಟಕ ಮೆದುಳು ಆರೋಗ್ಯ–NIMHANs ಪ್ರಾಯೋಜಿತ ಕಾರ್ಯಕ್ರಮ, 9.00 ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

**ಮಧ್ಯಾಹ್ನ:** 12.30 ದೇವರನಾಮ–ಸರಳ ದೇಸಾಯಿ, ಶೋಭ ಹುಲಿಗಲ್, 12.45 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ– ಉಮೇಶ್ ಎಸ್.ಎಸ್., 1.20 ಭಾವಗೀತೆ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಯು.ಪಿ. ರಾಜು–ಮ್ಯಾಂಡೋಲಿನ್, 4.00 ಮಹಿಳಾರಂಗ, 4.30 ವೃತ್ತಿ ಮಾರ್ಗದರ್ಶನ, 5.45 ಕರಾಮುವಿವಿ ಮುಕ್ತವಾಣಿ– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ, 6.50 ಕೃಷಿರಂಗ– ಕೃಷಿಲೋಕ, ಪ್ರಸ್ತುತಿ–ಆರ್.ಲೋಕೇಶ್ವರಿ, 8.00 ವಿಜ್ಞಾನ ಭಾರತಿ–ಮೈಕ್ರೋ ಪ್ಲಾಸ್ಟಿಕ್ ಕುರಿತು ಸುತ್ತೂರು ಎಸ್. ಮಾಲಿನಿ ಅವರಿಂದ ಮಾಹಿತಿ, ಸರ್ ಸಿ.ವಿ.ರಾಮನ್ ಮತ್ತು ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಬಗ್ಗೆ ಮಾತನಾಡುತ್ತಾರೆ ಅಭಿಷೇಖ್ ಎ.ಎಸ್., ಪ್ರಸ್ತುತಿ– ಜಿ.ಶಾಂತಕುಮಾರ್, 10.00 ಹಳ್ಳಿ ಹಾಡು, ಪ್ರಸ್ತುತಿ–ಡಾ.ಮೈಸೂರು ಉಮೇಶ್, 10.30 ಸವಿನೆನಪು

# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 1 ಶುಕ್ರವಾರ 2024

ಸಂಪುಟ: 44 | ಸಂಚಿಕೆ: 313 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4






# ಜಾತಿ ಗಣತಿ ವರದಿ ಸಲ್ಲಿಕೆ

## ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ವೀಕಾರ

● 2 ಬಾಕ್ಸ್‌ಗಳಲ್ಲಿ ತಂದು ವರದಿ ಒಪ್ಪಿಸಿದ ಜಯಪ್ರಕಾಶ್ ಹೆಗಡೆ ● ಕ್ಯಾಬಿನೆಟ್‌ನಲ್ಲಿ ಚರ್ಚಿಸಿ ಮುಂದಿನ ನಿರ್ಧಾರ: ಸಿಎಂ

ಬೆಂಗಳೂರು,ಫೆ.29– ಕಳೆದ 9 ವರ್ಷಗಳಿಂದ ನಿರಂತರವಾಗಿ ಸಾಮಾಜಿಕ ಹಾಗೂ ರಾಜಕೀಯವಾಗಿ ಸಂಚಲನ ಸೃಷ್ಟಿಸಿದ್ದ ಕರ್ನಾಟಕ ಜಾತಿಗಣತಿ ವರದಿ (ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ 2015ರ ದತ್ತಾಂಶಗಳ ಅಧ್ಯಯನ ವರದಿ 2024)ಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಸ್ವೀಕರಿಸಿದ್ದಾರೆ.

ಎರಡು ಬೃಹತ್ ಬಾಕ್ಸ್‌ಗಳಲ್ಲಿ ಜಾತಿ ಗಣತಿ ವರದಿಗಳ ಪ್ರತಿಯನ್ನು ವಿಧಾನ ಸೌಧಕ್ಕೆ ತರಲಾಗಿದ್ದು, ಅವುಗಳನ್ನು ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗಡೆ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಹಸ್ತಾಂತರ ಮಾಡಿದರು.



“ಜಾತಿ ಗಣತಿ ವರದಿ ಸ್ವೀಕರಿಸಿದ್ದೇನೆ. ವರದಿಯಲ್ಲಿ ಏನಿದೆ ಎಂದು ನಾನು ನೋಡಿಲ್ಲ. ಕ್ಯಾಬಿನೆಟ್‌ನಲ್ಲಿ ಜಾತಿಗಣತಿ ವರದಿ ಚರ್ಚೆ ಮಾಡುತ್ತೇವೆ. ಬಳಿಕ ಮುಂದಿನ ನಿರ್ಧಾರ ಕೈಗೊಳ್ಳುತ್ತೇವೆ. – ಸಿದ್ದರಾಮಯ್ಯ, ಮುಖ್ಯಮಂತ್ರಿ

“ಕಾಂತರಾಜು ಸಮಿತಿ ದತ್ತಾಂಶದ ಪ್ರಕಾರ ವರದಿ ಸಿದ್ಧಪಡಿಸಿದ್ದೇವೆ. ಜಾತಿಗಣತಿ ವರದಿಗೆ ಕಾರ್ಯದರ್ಶಿ, ಎಲ್ಲಾ ಸದಸ್ಯರ ಸಹಿಯೂ ಇದೆ. ವರದಿ ಬಗ್ಗೆ ಸಂಪುಟ ಸಭೆಯಲ್ಲಿ ಚರ್ಚೆ ಆಗಲಿದೆ. ಜಾತಿಗಣತಿ ವರದಿಯನ್ನು ಓದದೇ ಅವೈಜ್ಞಾನಿಕ ಎಂದು ಹೇಗೆ ಹೇಳುತ್ತೀರಿ. ನಾವು ಸಿದ್ಧಪಡಿಸಿದ ಜಾತಿ ಗಣತಿಯ ವರದಿ ಸೋರಿಕೆಯಾಗಿಲ್ಲ. – ಜಯಪ್ರಕಾಶ್ ಹೆಗ್ಡೆ, ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷ

**ಜಾತಿ ಗಣತಿ ವರದಿಯಲ್ಲಿ ಏನೇನಿದೆ:** ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗಡೆ ಅವರಿಂದ ಸಲ್ಲಿಕೆಯಾದ ಜಾತಿ ಗಣತಿ ವರದಿಯಲ್ಲಿ ಒಟ್ಟು 13 ಪ್ರತಿಗಳನ್ನು ಸಿದ್ಧಪಡಿಸಲಾಗಿದೆ. ಎಲ್ಲ ಪ್ರತಿಗಳು ಕೂಡ ದೊಡ್ಡ ಸಂಪುಟಗಳಾಗಿವೆ. ಕೆಲವು ಸಂಪುಟಗಳನ್ನು ಎರಡು–ಮೂರು ● 9ನೇ ಪುಟಕ್ಕೆ

## ವರದಿ ಬಿಡುಗಡೆ ಮಾಡದಂತೆ ಹೈಕೋರ್ಟ್‌ಗೆ ಅರ್ಜಿ: ಇಂದು ವಿಚಾರಣೆ

ಬೆಂಗಳೂರು,ಫೆ.29– ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ಸಿದ್ಧಪಡಿಸಿರುವ ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷೆ (ಜಾತಿ ಗಣತಿ)ಯ ವರದಿಯನ್ನು ಬಹಿರಂಗಪಡಿಸದಂತೆ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಕೋರಿ ಸಲ್ಲಿಕೆಯಾಗಿರುವ ಮಧ್ಯಂತರ ಮನವಿ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಶುಕ್ರವಾರ ನಡೆಸಲಿದೆ. ಜಾತಿ ಗಣತಿ ಬಹಿರಂಗಗೊಳಿಸಬೇಕು ಎಂದು ಕೋರಿ ಡಾ. ಮುಖ್ಯಮಂತ್ರಿ ಚಂದ್ರು ಅವರು 2021ರಲ್ಲಿ ಹೈಕೋರ್ಟ್‌ಗೆ ● 9ನೇ ಪುಟಕ್ಕೆ





## ಮೈಸೂರಿಂದ ಬೆಂಗಳೂರಿನತ್ತ ಚಲಿಸುತ್ತಿದ್ದ ರೈಲಿನಲ್ಲಿ ಕಾನ್‌ಸ್ಟೇಬಲ್‌ಗೆ ಇರಿತ

### ಆರು ಮಂದಿ ದುಷ್ಕರ್ಮಿಗಳ ಸೆರೆ

● ರೈಲುಗಳಲ್ಲಿ ಪುಂಡರ ಹಾವಳಿಯಿಂದ ನಲುಗಿದ ಪ್ರಯಾಣಿಕರು
● ಸಾಮಾನ್ಯ ಬೋಗಿಗಳಲ್ಲಿ ಮಹಿಳೆಯರಿಗೆ ಕಿರಿಕಿರಿ ಸಾಮಾನ್ಯ



ರೈಲಿನಲ್ಲಿ ಕಾನ್‌ಸ್ಟೇಬಲ್‌ಗೆ ಇರಿದ ಪ್ರಕರಣದಲ್ಲಿ ಬಂಧಿತರಾಗಿರುವವರು

ಮೈಸೂರು, ಫೆ.29(ಆರ್‌ಕೆ)– ಚಲಿಸುತ್ತಿದ್ದ ರೈಲಿನಲ್ಲಿ ಕಾನ್‌ಸ್ಟೇಬಲ್‌ಗೆ ಚಾಕುವಿನಿಂದ ಇರಿದಿದ್ದ 6 ಮಂದಿಯನ್ನು ರೈಲ್ವೇ ಪೊಲೀಸರು ಬಂಧಿಸಿದ್ದಾರೆ.

ಮೊಹಮದ್ ಇರ್ಫಾನ್(22), ದರ್ಶನ್(21), ಫೈಸಲ್‌ಖಾನ್(22), ಮೊಹಮದ್ ಇಮ್ರಾನ್(20), ಮೊಯಿನ್ ಪಾಷ(21), ಮಂಜು(24) ಬಂಧಿತರು. ಇವರೆಲ್ಲಾ ಬೆಂಗಳೂರಿನವರು. ಮಂಗಳವಾರ ಮೈಸೂರಿಂದ ಬೆಂಗಳೂರಿನತ್ತ ಪ್ರಯಾಣ ಬೆಳೆಸಿದ್ದ ಗೋಲ್‌ಗುಂಬಜ್ ಎಕ್ಸ್‌ಪ್ರೆಸ್ ರೈಲಿನ ಎಸ್–5 ಬೋಗಿಯಲ್ಲಿ ಭದ್ರತೆಗಾಗಿ ನಿಯೋಜನೆಗೊಂಡಿದ್ದ ಕಾನ್‌ಸ್ಟೇಬಲ್ ● 6ನೇ ಪುಟಕ್ಕೆ

## ಗ್ಯಾರಂಟಿಯನ್ನೂ ನೀಡಿದ್ದೇವೆ... ಅಭಿವೃದ್ಧಿಯನ್ನೂ ಮಾಡಿದ್ದೇವೆ

● ಬಜೆಟ್ ಮೇಲಿನ ಚರ್ಚೆಗೆ ಉತ್ತರದ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಮರ್ಥನೆ
● ಅಭಿವೃದ್ಧಿ ಬಿಟ್ಟು ಬರೀ ಲೂಟಿ ಮಾಡಿದ್ದಕ್ಕೆ ನೀವು ವಿರೋಧಿ ಪಾಳಯದಲ್ಲಿ ಕೂತಿದ್ದೀರಿ: ಹಿಗ್ಗಾಮುಗ್ಗಾ ಬಿಜೆಪಿಗೆ ತರಾಟೆ ● ಮಾತೆತ್ತಿದರೆ ಜೈ ಶ್ರೀರಾಮ ಅಂತೀರಾ; ನಾನೂ ನಮ್ಮೂರಲ್ಲಿ ಎರಡು ರಾಮಮಂದಿರ ಕಟ್ಟಿಸಿದ್ದೇನೆ...! ಜೈ ಸೀತಾರಾಮ್!

ಬೆಂಗಳೂರು, ಫೆ.29(ಕೆಎಂಶಿ)– ಗ್ಯಾರಂಟಿ ಯೋಜನೆ ಅನುಷ್ಠಾನದ ಜೊತೆಗೆ ಅಭಿವೃದ್ಧಿ ಕಾರ್ಯವನ್ನೂ ಮಾಡಿದ್ದೇವೆ. ಹಿಂದಿನ ಬಿಜೆಪಿ ಸರ್ಕಾರ ಅಭಿವೃದ್ಧಿ ಮಾಡದೆ ಬರೀ ಲೂಟಿ ಮಾಡಿ ಅದು ಪ್ರತಿಪಕ್ಷದಲ್ಲಿ ಕುಳಿತುಕೊಳ್ಳುವಂತಹ ಪರಿಸ್ಥಿತಿ ಬಂದಿದೆ ಎಂದು ವಿಧಾನಸಭೆಯಲ್ಲಿಂದು ವ್ಯಂಗ್ಯವಾಡಿದ್ದಾರೆ.

ಲೂಟಿ ಹೊಡೆದ ಬಿಜೆಪಿಗೆ ರಾಜ್ಯದ ಜನತೆ ಸರಿಯಾದ ಪಾಠ ಕಲಿಸಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ನಮಗೆ 135 ಸ್ಥಾನ ನೀಡಿದರೆ, ಅವರಿಗೆ ಕೇವಲ 66 ಸೀಟು ನೀಡಿ ಅಲ್ಲಿ ಕೂರಿಸಿದರು.



ಬಜೆಟ್ ಮೇಲಿನ ಚರ್ಚೆಗೆ ಉತ್ತರ ನೀಡಿದ ಮುಖ್ಯಮಂತ್ರಿ, ನಾವು ಕಳೆದ ಎಂಟು ತಿಂಗಳಲ್ಲಿ ಅಭಿವೃದ್ಧಿ ಮಾಡಿದ್ದರಿಂದಲೇ ನಮ್ಮ ಜಿಡಿಪಿ ದರ ಏರಿಕೆ ಕಂಡಿದೆ ಎಂದು ಸಮರ್ಥಿಸಿಕೊಂಡರು.

**ಸದಾ ಹಿಂಬಾಗಿಲಲ್ಲಿ ಅಧಿಕಾರ ಹಿಡಿದರು:** ಸದಾ ಹಿಂಬಾಗಿಲಿನಿಂದ ಅಧಿಕಾರ ಹಿಡಿಯುವ ಬಿಜೆಪಿ ಎಂದೂ ಪೂರ್ಣ ಬಹುಮತದೊಂದಿಗೆ ಅಧಿಕಾರಕ್ಕೆ ಬರಲಿಲ್ಲ. ಅಧಿಕಾರಕ್ಕೆ ಬಂದಾಗಲೆಲ್ಲಾ ಲೂಟಿಯೇ ಅವರ ಕಾಯಕ, ಇದರಿಂದ ರಾಜ್ಯದ ಆರ್ಥಿಕ ಪರಿಸ್ಥಿತಿ ತೀವ್ರವಾಗಿ ಹದಗೆಟ್ಟಿತ್ತು. ● 9ನೇ ಪುಟಕ್ಕೆ

## ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : "ಈ ರೋಗ ನಿಮ್ಮದಲ್ಲ. ಇದು ವಂಶಪಾರಂಪರಿಕವಾಗಿ ಬಂದಿದೆ"
ರೋಗಿ : "ಸದ್ಯ ಬದುಕಿದೆ. ಹಾಗಿದ್ರೆ ನನ್ನ ಅಜ್ಜನ್ನ ಎತ್ಕೊಂಡು ಬರ್ತೀನಿ, ಆಪರೇಷನ್ ಅವರಿಗೇ ಮಾಡಿಬಿಡಿ'

ಮೈಸೂರು ಮಿತ್ರ

ಶುಕ್ರವಾರ, 1 ಮಾರ್ಚ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

### ಅಮೃತವಾಹಿನಿ..........

ಬದುಕಿಗೆ ನೆಲೆ ಬರುವುದು ಬೆಲೆ ಬಾಳುವ
ಗುಣ ಅದಕ್ಕಿರುವಾಗ ಮಾತ್ರ – ಹೇಗಲ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಿರಿಯನಾದರೆ ಬುದ್ಧಿ ಹೇಳು, ಕಿರಿಯನಾದರೆ ಬುದ್ಧಿ ಕೇಳು

## ನಿಮ್ಮ ಪತ್ರಗಳು

### ಯಾರಿಗೆ ಮತ? ನಿರ್ಣಯದಲ್ಲಿ ಸೋಲದಿರಿ!

ಮಾನ್ಯರೆ,

ಯಾರು ಯಾರಿಗೆ ಹೇಳುವರು ಜಿಂದಾಬಾದ್? ಯಾರು ಯಾರ ಪರ ಇದ್ದಾರೆ? ಯಾರು ಯಾವ ಸಿದ್ಧಾಂತಕ್ಕೆ ನಿಷ್ಠೆ ಇಟ್ಟುಕೊಂಡಿದ್ದಾರೆ? ಭ್ರಷ್ಟರಲ್ಲದವರು ಯಾರಾದರೂ ಇದ್ದಾರೆಯೇ? ಎಂಬಂತಹ ಹಲವು ವಿಷಯಗಳನ್ನು ಅರಿಯಲಾಗದ ಸ್ಥಿತಿಯಲ್ಲಿ ಮತದಾರನಿದ್ದಾನೆ. ಕೆಲವೇ ದಿನಗಳಲ್ಲಿ ಪ್ರಬುದ್ಧ ಮತದಾರ ತನ್ನ ಬೆರಳಿಗೆ ಅಳಿಸಲಾಗದ ಶಾಯಿಯನ್ನು ಮತ ಚಲಾಯಿಸಿದ ಗುರುತಾಗಿ ಹಾಕಿಸಿಕೊಳ್ಳಲಿದ್ದಾನೆ. ಅವರನ್ನು ಬಿಟ್ರೆ ಇವರು, ಇವರನ್ನು ಬಿಟ್ರೆ ಅವರು ಅಥವಾ ಬಹುಮತದ ಆಯ್ಕೆಯಲ್ಲಿ ಯಡವಟ್ಟು ಆದಾಗ ಅವರು ಇವರು ಇಬ್ಬರೂ ಮಿಕ್ಸ್, ಆಯುಸ್ಸೇ ಇಲ್ಲದ ಅತಂತ್ರ ಸ್ಥಿತಿಯ ಸಮ್ಮಿಶ್ರ ಸರ್ಕಾರ, ಅಲ್ಲಿಗೆ ಉದ್ಧಾರವಾದರು ಮತಚಲಾಯಿಸಿದ ಮತದಾರರು!.

ಸಂವಿಧಾನದ ಅಡಿಯಲ್ಲೇ ನಡೆಯುವ ನಾವುಗಳು, ಅದನ್ನೂ ಯಾಮಾರಿಸಿ ಜನರಿಂದ ಜೈಕಾರ ಹಾಕಿಸಿಕೊಳ್ಳುವ ಮಟ್ಟದ ಬುದ್ಧಿವಂತಿಕೆಯನ್ನು ಬೆಳೆಸಿಕೊಂಡಿರುವುದು ದುರದೃಷ್ಟಕರ. ಮಾಡಬಾರದ್ದನ್ನು ಮಾಡಿ ಸಿಕ್ಕಿಬಿದ್ದು ಶಿಕ್ಷೆಗೆ ಒಳಪಡುವವನು ಕೋಟಿಗೊಬ್ಬ. ಕಣ್ಣೆದುರಿಗೇ ನಡೆದಿರುವ ತಪ್ಪನ್ನು ಸರಿ ಎಂಬಂತೆ ಸಮಜಾಯಿಷಿ ಕೊಡುವುದು ರಾಜಕೀಯದಲ್ಲಿ ಮಾತ್ರ ಸಾಧ್ಯ. ಜನರ ಗಮನವನ್ನು ಬೇರೆಡೆಗೆ ಸೆಳೆಯಲು ನಡೆದ ಒಂದು ಘಟನೆಯನ್ನು ಮುಚ್ಚಿ ಹಾಕಲು ಮತ್ತೊಂದರ ಮೊರೆ ಹೋಗುವುದು. ಒಟ್ಟಿನಲ್ಲಿ ರಾಜಕೀಯ ದೊಂಬರಾಟದಲ್ಲಿ ಬಡವನಾಗುವುದು ಜನಸಾಮಾನ್ಯ ಮಾತ್ರ, ರಾಜಕೀಯದ ಅರ್ಥವೇ: ಉಳ್ಳವರು ಮತ್ತಷ್ಟು ಬಲಿಷ್ಠರಾಗುವುದು, ತಂತ್ರ ಕುತಂತ್ರದಲ್ಲಿ ಮೇಲುಗೈ ಸಾಧಿಸಿದವರು ಅಧಿಕಾರದ ಗದ್ದುಗೆ ಹಿಡಿಯುವುದು, ಅಧಿಕಾರವನ್ನು ಕಾಯ್ದುಕೊಳ್ಳಲು ಮೈಯೆಲ್ಲಾ ಕಣ್ಣಾಗಿಸಿಕೊಂಡು ಬಹುಮತವನ್ನು ಕಾಪಾಡಿಕೊಳ್ಳುವುದೇ ಆಗಿದೆ. ರಾಜಕಾರಣಿಗಳ ಪಕ್ಷ ಯಾವುದಿದ್ದರೂ ಅವರ ಮಂತ್ರ; ನಾವು ಒಂದೇ ಅಧಿಕಾರಕ್ಕಾಗಿ ನಾವೆಲ್ಲರೂ ಒಂದೇ, ಗೆದ್ದವರ ಹಿಂದೆ ಸದಾ ಇರುತ್ತೇವೆ ನಾವು.

ಅನವಶ್ಯಕವಾಗಿ ಸಮಯ ಹಾಳು ಮಾಡುವ ವಿಷಯಗಳ ಚರ್ಚೆಯಲ್ಲಿ ಮತ್ತು ಗದ್ದಲ ಗಲಾಟೆಗಾಗಿ ವಿಧಾನಮಂಡಲದ ಕಾರ್ಯಕಲಾಪಗಳು ಹಾದಿ ತಪ್ಪುತ್ತಿವೆ. ಇದಕ್ಕಾಗಿ ಜನರ ತೆರಿಗೆ ಹಣ ವ್ಯರ್ಥವಾಗುತ್ತಿದ್ದು, ನಿಯಂತ್ರಿಸುವುದು ಅವಶ್ಯಕವಿದೆ. ಕಪ್ಪು ಶಾಯಿಗಾಗಿ ಬೆರಳೊಡ್ಡುವ ಮುನ್ನ ಯಾವುದೇ ಆಸೆ ಆಮಿಷಗಳಿಗೆ ಮರುಳಾಗದೆ ಎಲ್ಲಾ ಕೋನಗಳಿಂದ ಯೋಚಿಸಿ ಸಮರ್ಥರನ್ನು ಆಯ್ಕೆ ಮಾಡಿದರೆ (ಕೆಲವೊಮ್ಮೆ ಸಮರ್ಥರನ್ನು ಹುಡುಕುವುದು ಕಷ್ಟವೂ ಆಗಬಹುದು) ಸುಭದ್ರ ಹಾಗೂ ಜನರ ಪರವಾಗಿರುವ ಸರ್ಕಾರಗಳು ರಚನೆಯಾಗುವುದು. ಏನೂ ಆಗದಿದ್ದರೂ ತಕ್ಕಮಟ್ಟಿಗೆ ಭ್ರಷ್ಟಾಚಾರವನ್ನು ನಿಯಂತ್ರಿಸಲಿಕ್ಕೆ ಸಾಧ್ಯವಾಗಬಹುದು!. ಮತದಾರ ಹಾಕುವ ಅಮೂಲ್ಯವಾದ ಮತವು ಸದ್ವಿನಿಯೋಗ ಆಗುವಂತೆ ಮತದಾರರನ್ನು ಜಾಗೃತಗೊಳಿಸಬೇಕಾಗಿದೆ. ಪ್ರಶ್ನೆ ಇರುವುದು ಆ ಕೆಲಸ ಯಾರು ಮಾಡುವುರು?.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.

### ವಿದ್ಯುತ್ ದರ ಇಳಿಕೆ ಸ್ವಾಗತಾರ್ಹ

ಮಾನ್ಯರೆ,

ಕರ್ನಾಟಕ ರಾಜ್ಯದಲ್ಲಿ ಉಚಿತ ವಿದ್ಯುತ್ ಯೋಜನೆ ಜಾರಿಯಲ್ಲಿದ್ದರೂ ಈ ಯೋಜನೆಯಿಂದ ಹೊರಗಿದ್ದ ವಿದ್ಯುತ್ ಬಳಕೆದಾರರಿಗೆ ವಿದ್ಯುತ್ ದರ ಹೊರೆಯಾಗಿದ್ದರಲ್ಲಿ ಯಾವುದೇ ಸಂಶಯವಿಲ್ಲ. ಪ್ರಸ್ತುತ ಕರ್ನಾಟಕ ಸರ್ಕಾರ ಪ್ರತಿ ಯೂನಿಟ್ ವಿದ್ಯುತ್‌ನ ದರದಲ್ಲಿ 1.10 ರೂ. ಇಳಿಕೆ ಮಾಡಿರುವುದು ಉತ್ತಮ ಬೆಳವಣಿಗೆಯಾಗಿದೆ.

ಇದರನ್ವಯ ಹಿಂದಿನ ದರ ಪ್ರತಿ ಯುನಿಟ್‌ಗೆ ಅಂದರೆ 1–100 ಯನಿಟ್ ಒಳಗೆ ಬಳಕೆ ಮಾಡಿದರೆ ಪ್ರತಿ ಯುನಿಟ್‌ಗೆ 4.75 ರೂ ಮತ್ತು 100 ಕ್ಕಿಂತ ಹೆಚ್ಚು ಬಳಕೆ ಮಾಡಿದರೆ ಪ್ರತಿ ಯುನಿಟ್‌ಗೆ 7.00 ರೂಗಳಿತ್ತು ಪ್ರಸ್ತುತ ಎಲ್ಲಾ ಯುನಿಟ್‌ಗೆ 5.90 ರೂಗಳಾಗಿದೆ. ಆದರೆ ಸರ್ಕಾರದ ಈ ತೀರ್ಮಾನದಿಂದ ಮಾಸಿಕ 100 ಯುನಿಟ್‌ಗಿಂತ ಹೆಚ್ಚು ವಿದ್ಯುತ್ ಬಳಕೆ ಮಾಡುವವರಿಗೆ 1.10 ಕಡಿಮೆಯಾಗಿದೆ. ಇದು ಹೋಟೆಲ್, ಖಾಸಗಿ ಆಸ್ಪತ್ರೆ, ಕೈಗಾರಿಕೆಗಳು ಮುಂತಾದ ವಾಣಿಜ್ಯ ಬಳಕೆದಾರರಿಗೆ ಅನುಕೂಲವಾಗುವಂತೆ ಸಹ ದರವನ್ನು ಇಳಿಕೆ ಮಾಡಲಾಗಿದೆ. ಇದರ ಜೊತೆಗೆ 100 ಯುನಿಟ್‌ಗಿಂತ ಕಡಿಮೆ ವಿದ್ಯುತ್ ಬಳಕೆ ಮಾಡುವವರಿಗೆ 1.15 ರೂ.ಗಳ ಶುಲ್ಕ ಹೆಚ್ಚಾಗಿದ್ದು, ಇದು ಹಲವು ಕುಟುಂಬಗಳಿಗೆ ಹೊರೆಯಾಗಬಹುದಾಗಿದೆ. ಸರ್ಕಾರ ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು. ಒಟ್ಟಿನಲ್ಲಿ ವಿದ್ಯುತ್ ದರ ಇಳಿಕೆ ಸ್ವಾಗತಾರ್ಹ ಕ್ರಮವಾಗಿದೆ.

–ರಾಸುಮ ಭಟ್, ಸಂಶೋಧನಾ ವಿದ್ಯಾರ್ಥಿ, ಚಿಕ್ಕಮಗಳೂರು.

### ದೇಶದ್ರೋಹಿಗಳಿಗೆ ಕಠಿಣ ಶಿಕ್ಷೆಯಾಗಲಿ

ಮಾನ್ಯರೆ,

ರಾಜ್ಯಸಭೆ ಫಲಿತಾಂಶದ ಬಳಿಕ ವಿಧಾನಸೌಧದ ಒಳಗೆ ಕಾಂಗ್ರೆಸ್ ಕಾರ್ಯಕರ್ತರ ಸಂಭ್ರಮಾಚರಣೆಯಲ್ಲಿ ಗೆಲುವಿನ ನಗೆ ಬೀರಿದ ನಾಸೀರ್ ಹುಸೇನ್ ಬೆಂಬಲಿಗರು 'ಪಾಕಿಸ್ತಾನ್ ಜಿಂದಾಬಾದ್" ಎಂದು ಘೋಷಣೆಯನ್ನು ಕೂಗಿ ದೇಶದ್ರೋಹದ ಕೆಲಸವನ್ನು ಮಾಡಿದ್ದಾರೆ. ಅಲ್ಲದೆ ಮಾಧ್ಯಮದವರು ಕೇಳಿದ ಪ್ರಶ್ನೆಗೆ ಉದ್ಧಟತನ, ದರ್ಪದ, ದುರಹಂಕಾರದ ಮಾತುಗಳನ್ನಾಡಿದ ನಾಸಿರ್ ಹುಸೇನ್ ಬಗ್ಗೆ ಎಲ್ಲಾ ಕಡೆ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದ್ದು, ಇವರ ನಡೆಯನ್ನು ಸಾರ್ವಜನಿಕರು ಹಿಗ್ಗಾಮುಗ್ಗಾ ತರಾಟೆ ತೆಗೆದುಕೊಂಡು ಕೆಂಡಮಂಡಲರಾಗಿ ಖಂಡಿಸುತ್ತಿದ್ದಾರೆ. ಇವರನ್ನು ಗೆಲ್ಲಿಸಿರುವುದು ಕರ್ನಾಟಕದ ಎಂಎಲ್‌ಎಗಳು. ಅಧಿಕಾರ ಅನುಭವಿಸುತ್ತಿರುವುದು ಭಾರತದಲ್ಲಿ. ಕುಡಿಯುವ ನೀರು, ವಾಸಿಸುವ ಸ್ಥಳ, ತಿನ್ನುವ ಆಹಾರ, ಧರಿಸುವ ಬಟ್ಟೆ, ಸಂಬಳ ಮತ್ತು ವಿಶೇಷ ಭತ್ಯೆಗಳು ಭಾರತ ಸರ್ಕಾರದ ಸಾರ್ವಜನಿಕರ ತೆರಿಗೆ ಹಣ. ಇವೆಲ್ಲವೂ ಕೂಡ ಭಾರತ ದೇಶದ್ದೇ ಆಗಿದೆ. ಆದರೆ ಇವರ ಜೈಕಾರ ಮಾತ್ರ ಪರಮ ಶತ್ರು ದೇಶವಾದ ಪಾಕ್ ದೇಶಕ್ಕೆ ಮಾತ್ರ, ಇದೆಂತಹ ಸಂಸ್ಕೃತಿ ಕಾಂಗ್ರೆಸ್‌ನವರದು. ತಮಗೆ ಸ್ವಲ್ಪವೂ ಮಾನ ಮರ್ಯಾದೆ ಇಲ್ಲವೇ, ದೇಶದ ಬಗ್ಗೆ ಕಿಂಚಿತ್ತಾದರೂ ದೇಶಾಭಿಮಾನ ಬೇಡವೇ, ನೀವು ಇರುವುದು ಭಾರತದಲ್ಲಿ ಪಾಕಿಸ್ತಾನದಲ್ಲಿ ಅಲ್ಲ ಎಂಬುದನ್ನು ನಾಸಿರ್ ಹುಸೇನ್ ಮತ್ತು ಬೆಂಬಲಿಗರು ಮರೆತಿರಬೇಕು. ಇಂತಹ ಅನೇಕ ಘಟನೆಗಳು ಕರ್ನಾಟಕದಲ್ಲಿ ಆಗಾಗ ನಡೆಯುತ್ತಿದ್ದರೂ ಸರ್ಕಾರ ಮಾತ್ರ ಕಠಿಣ ಕ್ರಮ ತೆಗೆದುಕೊಳ್ಳಲು ಮೀನಾಮೇಷ ಎಣಿಸುತ್ತದೆ. ಇಂಥವರನ್ನು ಗೆದ್ದು ಕಳಿಸಿದರೆ ಮುಂದಿನ ದಿನಗಳಲ್ಲಿ ಭಾರತವನ್ನು ಪಾಕಿಸ್ತಾನವನ್ನೇ ಮಾಡಿ ಬಿಡುತ್ತಾರೆ, ಭಾರತ ಸಂವಿಧಾನದ ಘನತೆ, ಗೌರವಕ್ಕೆ ಧಕ್ಕೆ ತರುವ ಮತ್ತು ಮಸಿ ಬಳಿಯುವ ಕೆಲಸವನ್ನು ಕೆಲವು ಕಾಂಗ್ರೆಸ್ ಮುಖಂಡರು ಮತ್ತು ಬೆಂಬಲಿಗರು ಮಾಡುತ್ತಿದ್ದಾರೆ.

ರಾಜ್ಯ ಸರ್ಕಾರ ಒಂದು ಕಡೆ ಭಾರತ ಸಂವಿಧಾನದ ಆಚರಣೆ ಮಾಡುತ್ತಿರುವುದು, ಮತ್ತೊಂದು ಕಡೆ ಪಾಕಿಸ್ತಾನದ ಪರ ಘೋಷಣೆ ಕೂಗುವುದು, ಇದು ಕಾಂಗ್ರೆಸ್ ಸರ್ಕಾರದ ನಿಜವಾದ ಸಂಸ್ಕೃತಿಯಾಗಿದೆ. ಇಂತಹ ನಾಯಕರಿಗೆ ಮತ ನೀಡಿದವರು ಒಮ್ಮೆ ಆತ್ಮ ವಿಮರ್ಶೆಯನ್ನು ಮಾಡಿಕೊಳ್ಳಬೇಕು. ಎಂತಹ ವ್ಯಕ್ತಿಯನ್ನು ನಾವು ಆಯ್ಕೆ ಮಾಡಿದ್ದೇವೆ ಎಂದು ಯೋಚಿಸಬೇಕು, ಪಾಕಿಸ್ತಾನ ಜಿಂದಾಬಾದ್ ಎಂದು ಘೋಷಣೆ ಕೂಗಿದ ಬೆಂಬಲಿಗರು ಯಾರೇ ಆಗಿರಲಿ ಅವರಿಗೆ ತಕ್ಕ ಕಠಿಣ ಶಿಕ್ಷೆಯಾಗಬೇಕು.

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು,
ರಾಮಕೃಷ್ಣ ವಿದ್ಯಾಶಾಲೆ,
ಮೈಸೂರು. ಮೊ.: 9036389640

ಈ ಜೀವನ...

# ಪರೀಕ್ಷೆ ಸಂಕಟವಲ್ಲ ಸಂಭ್ರಮ...!

ಸಂಕ್ರಾಂತಿಯ ಸವಿ ಮಾಯವಾಗಿದೆ, ಹಳ್ಳಿಗಳಲ್ಲಿ ಹಬ್ಬ–ಉತ್ಸವ–ಜಾತ್ರೆಗಳು ಸಂಭ್ರಮದಿಂದ ಸಹಜವಾಗಿ ಜರುಗಿ ಎಲ್ಲವೂ ಮುಗಿಯುತ್ತಲಿದೆ. ಮಾಗಿಯ ಚಳಿ ಮರೆಯಾದ ಸಡಗರ, ಮಹಾಶಿವರಾತ್ರಿಯ ಬರುವಿಕೆಗೆ ಕೆಲವೇ ಸಮಯ ಬಾಕಿ ಉಳಿದಿದೆ. ಇವೆಲ್ಲದರ ನಡುವೆ ವಿದ್ಯಾರ್ಥಿಗಳಿಗೆ ಒಂದರ ಹಿಂದೆ ಮತ್ತೊಂದರಂತೆ ಪರೀಕ್ಷೆ ಎಂಬ ಜಾತ್ರೆ ಆರಂಭವಾಗಲಿದೆ. ಮಾರ್ಚ್ – ಏಪ್ರಿಲ್ ತಿಂಗಳು ಬಂದರೆ ಸಾಕು ವಿದ್ಯಾರ್ಥಿಗಳಿಗಿಂತ ಪೋಷಕರಲ್ಲೇ ಒತ್ತಡ, ಭಯ ಹೆಚ್ಚಾಗಿರುತ್ತದೆ. ಪರೀಕ್ಷೆ ಎಂದರೆ ಭಯ, ಆತಂಕ, ದುಗುಡ, ಒತ್ತಡಪಡುವ ಅಗತ್ಯವಿಲ್ಲ. ಶತ್ರುವಿನಂತೆ ಪರೀಕ್ಷೆಯನ್ನು ಎದುರಿಸದೇ ಮಿತ್ರನಂತೆ ಭಾವಿಸಿದರೆ ಖಂಡಿತವಾಗಿ ಅತ್ಯಂತ ಸಮರ್ಪಕವಾಗಿ ಪರೀಕ್ಷೆಯನ್ನು ಎದುರಿಸಲು ಸಾಧ್ಯವಿದೆ.

ಪರೀಕ್ಷೆ ಕಲಿಕೆಯನ್ನು, ಅಧ್ಯಯನಶೀಲತೆಯನ್ನು ಅಳೆಯುವ ಮಾನದಂಡ, ಬಿಸಿಲು ರಂಗೇರುತ್ತಿದೆ, ನೆಲವು ಕಾದು ಹಬೆಯಾಡುತ್ತಿದೆ, ನೆತ್ತಿ ಸುಡುತ್ತಿದೆ, ಧಗೆಯಲ್ಲಿ ಧಗ ಧಗಿಸಿ ಬೆವರಲ್ಲಿ ಮಜ್ಜನ ಮಾಡುವ ಮನಸ್ಸುಗಳು ತಂಗಾಳಿ ತಂಪನ್ನು ಬಯಸುತ್ತಾ ತಮ್ಮದೇ ಮನೋವ್ಯಾಪಾರದಲ್ಲಿ ಎಲ್ಲವ ಸಹಿಸುತ್ತಾ ಇರುವಾಗ ಮತ್ತೊಂದು ಅಗ್ನಿ ಪರೀಕ್ಷೆಯ ಕಾವು ಎದುರಾಗುತ್ತಿದೆ. ಭಯದ ನೆರಳನ್ನು ಹೊತ್ತು ತರುವುದು ಹತ್ತನೇ ತರಗತಿ (ಎಸ್.ಎಸ್.ಎಲ್.ಸಿ,) ಮತ್ತು ದ್ವಿತೀಯ ಪಿಯುಸಿಯ ವಾರ್ಷಿಕ ಪರೀಕ್ಷೆಗಳು. ಪರೀಕ್ಷೆಯ ವ್ಯಾಪ್ತಿ ವಿಶಾಲವಾದುದು, ಬದುಕಿನಲ್ಲಿ ಎದುರಾಗುವ ಪರೀಕ್ಷೆಗಳು ಪ್ರತಿಕ್ಷಣ ನಮ್ಮನ್ನು ಆವಹಿಸಿಕೊಂಡು ಹಾಗೂ ಆವರಿಸಿಕೊಂಡಿರುತ್ತದೆ. ಈ ಜೀವನದ ಪರೀಕ್ಷೆಗೆ ಯಾವುದೇ ಪಠ್ಯಕ್ರಮ, ಪಾಠ–ಪ್ರವಚನ, ಬೋಧನೆ, ಕಲಿಕಾಲಯ, ಶಿಸ್ತು ಪ್ರಾರ್ಥನೆ, ವೇಳಾಪಟ್ಟಿ ಎಂಬ ನಿರ್ದಿಷ್ಟ ಹಾಗೂ ಸೀಮಿತ ವ್ಯಾಪ್ತಿಯಿಂದ ದೂರವೇ ಉಳಿದಿರುತ್ತದೆ. ಈ ಹೇಳಿಕೆಗೆ ಪುಷ್ಟಿ ನೀಡುವ ಸಂಗತಿ ಎಂದರೆ ಸೀತಾ ಮಾತೆಯು ಎದುರಿಸಿದ ಅಗ್ನಿ ಪ್ರವೇಶದ ಪರೀಕ್ಷೆ. ಇಂತಹ ದೊಡ್ಡಪರೀಕ್ಷೆಯನ್ನೇನು ಎದುರಿಸುವ ಪರಿಸ್ಥಿತಿಗಳಾಗಲೀ, ಸನ್ನಿವೇಶಗಳಾಗಲೀ ಎದುರಿಸಬೇಕಾದ ಭಯದ ಛಾಯೆಯೇನು ಇಂದಿನವರೆಗೆ ಇಲ್ಲ. ಆದರೂ ಪರೀಕ್ಷೆಯ ಜ್ವರ ನಮ್ಮೆಲ್ಲರ ತನು ಮನವನ್ನು ಆವರಿಸಿ ಅದರ ಕಾವಿನ ಜಳ ಮೈಮೇಲೆ ಸುರಿದು, ಪೋಷಕರು ಹಾಗೂ ಪರೀಕ್ಷೆಯನ್ನು ಎದುರಿಸುವ ವಿದ್ಯಾರ್ಥಿಗಳನ್ನು ಅಗ್ನಿ ಕುಂಡದಲ್ಲಿ ಬೇಯಿಸುತ್ತದೆ.

ಪರೀಕ್ಷೆಯನ್ನು ಎದುರಿಸಲು ಕೆಲವು ಪೂರ್ವ ಸಿದ್ಧತೆಗಳನ್ನು ಮಾಡಿಕೊಂಡಿದ್ದಲ್ಲಿ ಸುಲಭವಾಗಿ ಹೆಚ್ಚು ಅಂಕಗಳನ್ನು ಪಡೆಯಲು, ಉತ್ತಮ ದರ್ಜೆಯನ್ನು ಗಳಿಸಲು ಸಾಧ್ಯವಾಗುತ್ತದೆ.

**ಸಮಯದ ಸರಿಯಾದ ಸದ್ಬಳಕೆ:** ಪರೀಕ್ಷೆಯ ಸಮಯ ಹತ್ತಿರ ಬಂದಂತೆ ಹಗಲು ರಾತ್ರಿ ಎನ್ನದೆ, ವಿಶ್ರಾಂತಿ ಇಲ್ಲದೆ ಒಂದೇ ಸಮನೆ ಓದುವಂತಹ ಮನೋಭಾವವನ್ನು ಕೆಲವು ವಿದ್ಯಾರ್ಥಿಗಳು ರೂಢಿಸಿಕೊಂಡಿರುತ್ತಾರೆ. ಇದು ಆರೋಗ್ಯದ ಮೇಲೆ ದುಷ್ಪರಿಣಾಮವನ್ನುಂಟು ಮಾಡುತ್ತದೆ. ಜೊತೆಗೆ ಪರೀಕ್ಷೆಯ ಬಗ್ಗೆ ಇನ್ನಿಲ್ಲದ ಒತ್ತಡವನ್ನು ತಂದೊಡ್ಡುತ್ತದೆ. ಆದ್ದರಿಂದ ಈಗ ಉಳಿದಿರುವ ಸಮಯ ಎಷ್ಟು? ಪರೀಕ್ಷೆಗೆ ಎಷ್ಟು ದಿನಗಳು ಬಾಕಿ ಉಳಿದಿವೆ? ಎಂಬುದನ್ನು ಸರಿಯಾಗಿ ಲೆಕ್ಕಾಚಾರ ಮಾಡಿಕೊಂಡು ಪ್ರತಿಯೊಂದು ವಿಷಯಕ್ಕೂ ಸರಿಯಾದ ಸಮಯವನ್ನು ಸರಿದೂಗಿಸಿಕೊಂಡಂತೆ ವೇಳಾಪಟ್ಟಿಯನ್ನು ಸಿದ್ಧಪಡಿಸಿ ಅದರಂತೆ ಅಭ್ಯಾಸ ಮಾಡಿದರೆ ಖಂಡಿತವಾಗಿಯೂ ಯಶಸ್ಸು ಸಿಗುತ್ತದೆ. ಯಾರು ಸಮಯವನ್ನು ಸರಿಯಾಗಿ ಸದ್ಬಳಕೆ ಮಾಡಿಕೊಳ್ಳುತ್ತಾರೋ ಅವರು ಖಂಡಿತವಾಗಿಯೂ ಯಶಸ್ಸನ್ನು ಗಳಿಸುತ್ತಾರೆ. ಆದ್ದರಿಂದ ಸಮಯವನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳುವಂತದ್ದು ಪ್ರತಿಯೊಬ್ಬ ವಿದ್ಯಾರ್ಥಿಯ ಕರ್ತವ್ಯವಾಗಿರುತ್ತದೆ. ಒಂದೇ ಸಮನೆ ಓದುವುದಕ್ಕಿಂತ ನಿರ್ದಿಷ್ಟ ಸಮಯದಲ್ಲಿ ವಿಷಯದ ಕಾಠಿಣ್ಯತೆಗೆ ಅನುಗುಣವಾಗಿ ಸಮಯದ ಪರಿಪಾಲನೆಯನ್ನು ರೂಢಿಸಿಕೊಂಡಿದ್ದಲ್ಲಿ ಖಂಡಿತವಾಗಿಯೂ ಪರೀಕ್ಷೆಯಲ್ಲಿ ಒಳ್ಳೆಯ ಅಂಕಗಳನ್ನು ಪಡೆದುಕೊಳ್ಳಬಹುದು. ಪ್ರಾರಂಭದಿಂದ ಏನನ್ನು ಓದದೆ ಪರೀಕ್ಷೆ ಹತ್ತಿರ ಬಂದಂತೆ ಹಗಲು ರಾತ್ರಿ ಎಂಬುದನ್ನು ಪರಿಗಣಿಸದೆ ಮಾನಸಿಕವಾಗಿ ಒತ್ತಡವನ್ನು ಅನುಭವಿಸುವ ಬದಲು ಆರೋಗ್ಯವನ್ನು ಕಾಪಾಡಿಕೊಂಡು ಸಮಯದ ಸದುಪಯೋಗಪಡಿಸಿಕೊಂಡರೆ ಉತ್ತಮ ದರ್ಜೆಯೊಂದಿಗೆ ಉತ್ತೀರ್ಣರಾಗಬಹುದು.

**ಹಳೆ ಪ್ರಶ್ನೆ ಪತ್ರಿಕೆಗಳನ್ನು ತಿರುವು ಹಾಕುವುದು:** ಸತತ ಪ್ರಯತ್ನದಿಂದ ಪ್ರತಿಫಲವನ್ನು ಪಡೆಯಬಹುದು ಎಂಬ ನಾಣ್ಣುಡಿಯಂತೆ ಪರೀಕ್ಷೆಗಳನ್ನು ಎದುರಿಸುವ ವಿದ್ಯಾರ್ಥಿಗಳು ಮೊದಲಿಗೆ ತಾವು ಎದುರಿಸುತ್ತಿರುವ ಪರೀಕ್ಷೆಗಳ ಹಳೆಯ ಪ್ರಶ್ನೆ ಪತ್ರಿಕೆಗಳನ್ನು ಗಮನಿಸುವುದು ಒಳಿತು. ಪ್ರಶ್ನೆ ಪತ್ರಿಕೆ ಯಾವ ಮಾದರಿಯಲ್ಲಿದೆ. ಯಾವುದಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಬೇಕು. ಯಾವ ಪ್ರಮುಖವಾದ ವಿಷಯಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಬೇಕು. ಎಂಬಿತ್ಯಾದಿ ವಿಷಯಗಳು ಹಳೆಯ ಪ್ರಶ್ನೆ ಪತ್ರಿಕೆಗಳನ್ನು ಬಿಡಿಸುವುದರಿಂದ ತಿಳಿಯುತ್ತದೆ. ಜೊತೆಗೆ ಹೆಚ್ಚೆಚ್ಚು ಪ್ರಶ್ನೆ ಪತ್ರಿಕೆಗಳನ್ನು ಓದಿ ಅವುಗಳ ಅಭ್ಯಾಸ ಮಾಡಿದ್ದೆ ಆದಲ್ಲಿ ಖಂಡಿತವಾಗಿಯೂ ಅತ್ಯಂತ ಸಮರ್ಥ ರೀತಿಯಲ್ಲಿ ನಾವೇ ಒಂದು ಮಾದರಿ ಪ್ರಶ್ನೆ ಪತ್ರಿಕೆಯನ್ನು ಸಿದ್ಧಪಡಿಸುವಷ್ಟು ಪ್ರೌಢಿಮೆ ಬೆಳೆಯಬಲ್ಲದು. ಕನಿಷ್ಠ 10 ಪ್ರಶ್ನೆ ಪತ್ರಿಕೆಗಳನ್ನು ಬಿಡಿಸಿದ್ದಲ್ಲಿ ನಿಮ್ಮಲ್ಲಿ ಅಚಲವಾದ ಆತ್ಮವಿಶ್ವಾಸ ಬೆಳೆಯಬಲ್ಲದು. ಪ್ರಶ್ನೆ ಯಾವ ಮಟ್ಟದಲ್ಲಿ



> ಪರೀಕ್ಷೆಗಳೇ ಇಲ್ಲವಾಗಿದ್ದರೆ ನಾವು ಏನು, ಯಾವ ಹಂತದಲ್ಲಿ ಇದ್ದೇವೆ, ನಮ್ಮ ಸಾಧನೆಯ ಬೆಳಕು ಅರಿವಿಗೆ ಬಾರದೆ ನಮ್ಮತನ ಸಂಕುಚಿತತೆ ಮನೆ ಮಾಡುತ್ತಿತ್ತು. ಹೀಗಾಗಿ ಬದುಕಿಗೆ ಕಷ್ಟಗಳೆಂಬ ಪರೀಕ್ಷೆಗಳು, ವಿದ್ಯಾಭ್ಯಾಸದಲ್ಲಿ ಕಲಿಕಾ ಪರೀಕ್ಷೆಗಳು ಅತಿ ಅಗತ್ಯ. ಆದರೆ ಅವುಗಳಿಂದಲೇ ಬದುಕು ಎಂದು ಭಯದಿಂದ ಇರುವುದಲ್ಲ. ಪರೀಕ್ಷೆಗಳು ಕೇವಲ ಕಲಿಕೆಯ ಪ್ರಗತಿಯನ್ನು ಅಳೆಯುವ ಮಾನ ದಂಡವಾದರೂ, ಅದರ ರೂಪಗಳು ಬದಲಾಗಿವೆ. ಇಂದು ಪರೀಕ್ಷೆ ಎಂದರೆ ಅದೊಂದು ಪೆಡಂಭೂತ, ಯುದ್ಧ, ಹೋರಾಡಿ ಜಯಿಸಬೇಕಾದ ಶತ್ರು ಇತ್ಯಾದಿ ಋಣಾತ್ಮಕ ಸಂಗತಿ ಇಲ್ಲವಾಗಿವೆ. ಪರೀಕ್ಷೆಯು ಸ್ನೇಹಿತನಂತೆ, ಆತ್ಮೀಯ ಬಂಧುವಿನಂತೆ, ಪರೀಕ್ಷೆಯ ಕೊನೇ ಹಂತದಲ್ಲಿರುವ ಈ ಕ್ಷಣದಲ್ಲಿ ಆತಂಕಕ್ಕೆ ಒಳಗಾಗದೆ ನಿರ್ಭೀತಿ, ನಿರಾತಂಕವಾಗಿ ಪರೀಕ್ಷೆ ಬರೆಯಬೇಕು.

ಬರುತ್ತದೆ. ಯಾವ ರೂಪದಲ್ಲಿ ಪ್ರಶ್ನೆಗಳನ್ನು ಕೇಳಲಾಗುತ್ತದೆ. ಅಂಕಗಳು ಹೇಗೆ ವಿಭಜಿತವಾಗಿರುತ್ತದೆ. ಎಲ್ಲವನ್ನು ಬರೆಯಲು ಸಮಯ ಎಷ್ಟು ಬೇಕಾಗುತ್ತದೆ. ಇತ್ಯಾದಿ ವಿಚಾರಗಳೆಲ್ಲ ಪ್ರಶ್ನೆ ಪತ್ರಿಕೆಗಳನ್ನು ಬಿಡಿಸುವಾಗ ತಿಳಿಯುತ್ತದೆ. ಆದ್ದರಿಂದ ಹಳೆಯ ಮಾದರಿ ಪ್ರಶ್ನೆ ಪತ್ರಿಕೆಗಳನ್ನು ಹೆಚ್ಚು ಹೆಚ್ಚು ಓದಿ ಅರ್ಥ ಮಾಡಿಕೊಂಡಿದ್ದೆ ಆದಲ್ಲಿ ಪರೀಕ್ಷೆಗಳಲ್ಲಿ ಯಶಸ್ವಿಯಾಗಬಹುದು.

**ಗುಂಪು ಚರ್ಚೆ:** ಗುಂಪು ಚರ್ಚೆಯ ಮೂಲಕ ಓದಿರುವಂತಹ ವಿಷಯಗಳು ಮತ್ತೊಬ್ಬರೊಂದಿಗೆ ಚರ್ಚೆ ಮಾಡಿ ವಿಷಯವನ್ನು ಮತ್ತಷ್ಟು ಗಟ್ಟಿಗೊಳಿಸಿಕೊಳ್ಳಬಹುದು. ಇಲ್ಲಿ ಗುಂಪು ಚರ್ಚೆ ಎಂದರೆ ಕೇವಲ ಕಾಲಹರಣಕ್ಕಾಗಿ ಒಂದೆಡೆ ಎಲ್ಲರೂ ಸೇರಿ ಬೇಡದ ಮಾತುಗಳನ್ನು ಚರ್ಚಿಸುವುದಲ್ಲ. ತಾವು ಓದಿರುವ ವಿಚಾರಗಳನ್ನು ಮತ್ತೊಬ್ಬರಿಗೆ ತಿಳಿಸುತ್ತಾ ಚರ್ಚಿಸುವುದರಿಂದ ವಿಚಾರಗಳ ವಿನಿಮಯವಾಗುತ್ತದೆ. ಜೊತೆಗೆ ಓದಿದ್ದು ನೆನಪಿನಲ್ಲಿ ಉಳಿಯುತ್ತದೆ. ಆದ್ದರಿಂದ ಉತ್ತಮ ಅಂಕ ಗಳಿಸಲು ಗುಂಪು ಚರ್ಚೆ ಉತ್ತಮ ಮಾರ್ಗವಾಗುತ್ತದೆ ,ಸರಿಯಾದ ರೀತಿ ಬಳಸಿಕೊಂಡಲ್ಲಿ ಮಾತ್ರ. ನಾವು ಓದಿರುವುದನ್ನು ಮತ್ತೊಬ್ಬರ ಹತ್ತಿರ ಚರ್ಚಿಸಿದರೆ ಅವರಿಗೆ ಲಾಭವಾಗುತ್ತದೆ ಎಂಬ ಮನೋಭಾವ ಕೆಲವು ವಿದ್ಯಾರ್ಥಿಗಳಲ್ಲಿರುತ್ತವೆ.ಆದರೆ ಇದು ತಪ್ಪು ತಿಳುವಳಿಕೆ. ಗುಂಪು ಚರ್ಚೆ ಮಾಡುವುದರಿಂದ ನಮಗೆ ತಿಳಿಯದೇ ಇದ್ದ ಅಥವಾ ತಪ್ಪಾಗಿ ತಿಳಿದುಕೊಂಡಿದ್ದ ವಿಷಯಗಳ ಬಗ್ಗೆ ಖಚಿತತೆ ಬರುತ್ತದೆ.ಜ್ಞಾನ ಹಂಚಿದಷ್ಟು ಹೆಚ್ಚಾಗುತ್ತದೆ. ಆದ್ದರಿಂದ ಗುಂಪು ಚರ್ಚೆಗಳು ಸರಿಯಾಗಿ ನಡೆದಿದ್ದಲ್ಲಿ ಖಂಡಿತವಾಗಿ ಹೆಚ್ಚಿನ ಅಂಕಗಳನ್ನು ಗಳಿಸಲು ಸಾಧ್ಯವಿದೆ.

**ಬರೆದು ಓದುವ ಅಭ್ಯಾಸ:** ಸಾಮಾನ್ಯವಾಗಿ ವಿದ್ಯಾರ್ಥಿಗಳಲ್ಲಿ ಓದುವ ಅಭ್ಯಾಸವಿದೆ ಹೊರತು ಬರೆದು ಓದುವ ಅಭ್ಯಾಸ ಇತ್ತೀಚಿನಗಳಲ್ಲಿ ತುಂಬಾ ಕಡಿಮೆಯಾಗಿದೆ. ಡಾ.ಕೆ.ಶಿವರಾಮ ಕಾರಂತರು ಓದು ಬರಹದ ಶತ್ರು ಎಂದು ಹೇಳುತ್ತಾರೆ. ಕೇವಲ ಓದುವಿಕೆಯಿಂದ ನೆನಪಿನಲ್ಲಿ ಉಳಿಯುವ ಸಾಧ್ಯತೆ ಕಡಿಮೆ ಇರುತ್ತದೆ. ಅದೇ ಓದಿದ್ದನ್ನು ಬರೆಯುವುದರ ಮೂಲಕ ಹೆಚ್ಚು ದಿನ ನೆನಪಿನಲ್ಲಿ ಇಡಬಹುದು. ಬಹುಶಃ ಈ ನಿಯಮವನ್ನು ಇತ್ತೀಚಿನ ವಿದ್ಯಾರ್ಥಿಗಳಿಗೆ ಹೇಳಿದರೆ ಅಯ್ಯೋ ಸಮಯ ಎಲ್ಲಿದೆ ಬಿಡಿ ಸರ್! ಓದಕ್ಕೆ ಆಗಲ್ಲ ಇನ್ನೂ ಬರೆಯುವುದಕ್ಕೆ ಸಮಯ ಸಿಗುವುದಾದರೂ ಹೇಗೆ? ಎಂಬ ತೇಲಿಕೆಯ ಉತ್ತರವನ್ನು ನೀಡುತ್ತಾರೆ. ಸಮಯ ಇಲ್ಲ ಎಂದು ಕಾರಣಗಳನ್ನು ನೀಡುವಂತಹ ವಿದ್ಯಾರ್ಥಿಗಳೇ ಹೆಚ್ಚು ಸಮಯವನ್ನು ಪೋಲು ಮಾಡುತ್ತಿರುತ್ತಾರೆ. ವಿದ್ಯೆ ಸಾಧಕನ ಸ್ವತ್ತೇ ಹೊರತು ಸೋಮಾರಿಯ ಸ್ವತ್ತಲ್ಲ. ಪ್ರಯತ್ನ ಪಟ್ಟರೆ ಪ್ರತಿಯೊಂದು ಸಾಧ್ಯ. ಸಾಧನೆ ಮಾಡಿದವರಿಗೂ,ಮಾಡದಿದ್ದವರಿಗೂ ಇದ್ದದ್ದು 24 ಗಂಟೆಗಳು ಮಾತ್ರ. ಯಾರು ಸೋಮಾರಿತನವನ್ನು ಬಿಟ್ಟು ಬರೆದು ಓದುವ, ಓದಿದ್ದನ್ನು ಬರೆದಿಡುವ ಅಭ್ಯಾಸ ಮಾಡಿಕೊಳ್ಳುತ್ತಾರೋ ಅವರು ಇತರಿಗಿಂತ ಹೆಚ್ಚಿನ ಅಂಕಗಳನ್ನು ಪಡೆಯಲು ಸಾಧ್ಯ.

**ವಿಶ್ರಾಂತಿಯ ಅಗತ್ಯ:** ಸಾಮಾನ್ಯವಾಗಿ ಪರೀಕ್ಷೆ ಹತ್ತಿರ ಬಂದಂತೆ ನಿರಂತರವಾಗಿ ಓದುವ ಅಭ್ಯಾಸವನ್ನು ಕೆಲವು ವಿದ್ಯಾರ್ಥಿಗಳು ರಾತ್ರಿ ಇಡೀ ಓದುವ ಅಭ್ಯಾಸವನ್ನು ರೂಢಿಕೊಂಡಿರುತ್ತಾರೆ. ಇದು ಒಳ್ಳೆಯ ಅಭ್ಯಾಸವಲ್ಲ. ಓದಿನ ಮಧ್ಯೆ ಸ್ವಲ್ಪ ವಿರಾಮವನ್ನು ನೀಡಬೇಕು. ಆ ವಿರಾಮದ ನಡುವಿನ ಸಂದರ್ಭದಲ್ಲಿ ಓದಿರುವುದನ್ನು ಮನನ ಮಾಡಿಕೊಳ್ಳುವ ಕಾರ್ಯ ನಡೆಯಬೇಕು. ಹೀಗಿದ್ದಾಗ ಮಾತ್ರ ಆರೋಗ್ಯವು ಸದೃಢವಾಗಿರುತ್ತದೆ.ವಿಶ್ರಾಂತಿ ನೀಡದೇ ಒಂದೇ ಸಮನೆ ನಿರಂತರವಾಗಿ ಓದುವುದರಿಂದ ತಲೆನೋವು, ಕಣ್ಣು ನೋವು ಹಾಗೂ ಇನ್ನಿತರ ಕಾಯಿಲೆಗಳಿಗೆ ತುತ್ತಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಓದಿನ ನಡುವೆ ವಿರಾಮ ಕೊಡುವುದು ಒಳಿತು. ಇಲ್ಲಿ ವಿರಾಮ ಅಥವಾ ವಿಶ್ರಾಂತಿ ಎಂದರೆ ಆ ಸಮಯದಲ್ಲಿ ಮೊಬೈಲನ್ನು, ದೂರದರ್ಶನವನ್ನು ನೋಡುತ್ತಾ ಸಮಯವನ್ನು ಕಳೆಯುವುದು ಎಂದರ್ಥವಲ್ಲ. ಓದಿರುವ ವಿಷಯವನ್ನು ಮನನ ಮಾಡಿಕೊಂಡು ಕಣ್ಣು ಮುಚ್ಚಿ ಅದನ್ನು ನೆನಪಿಸಿಕೊಳ್ಳುವಂಥದ್ದು. ಹೀಗಿದ್ದಾಗ ಓದಿದ್ದು ಹೆಚ್ಚು ನೆನಪಿನಲ್ಲಿ ಉಳಿಯಲು ಸಾಧ್ಯವಿದೆ.

**ಭಯ, ಒತ್ತಡದಿಂದ ಮುಕ್ತವಾಗುವಿಕೆ:** ಸಾಮಾನ್ಯವಾಗಿ ಭಯವೆಂಬ ಭೂತ ನಮ್ಮಲ್ಲಿರುವ ಆತ್ಮವಿಶ್ವಾಸವನ್ನು ಕುಗ್ಗಿಸುತ್ತದೆ. ಒತ್ತಡ ನಮ್ಮನ್ನು ಬಲಹೀನರನ್ನಾಗಿ ಮಾಡುತ್ತದೆ. ಆದ್ದರಿಂದ ಯಾವುದೇ ಭಯಕ್ಕೆ,ಉದ್ವೇಗ,ಒತ್ತಡಗಳಿಗೆ ಒಳಗಾಗಬಾರದು. ಜೀವನದಲ್ಲಿ ಓದು ಮುಖ್ಯ ನಿಜ, ಆದರೆ ಕೆಲವೊಮ್ಮೆ ನಾವಂದುಕೊಂಡಂತೆ ಪ್ರಶ್ನೆ ಪತ್ರಿಕೆ ಇಲ್ಲದಿದ್ದರೆ ನಿರೀಕ್ಷಿಸಿದಷ್ಟು ಅಂಕಗಳು ಬರದಿದ್ದರೆ, ಅದಕ್ಕೆ ಹೆಚ್ಚು ತಲೆ ಕೆಡಿಸಿಕೊಳ್ಳುವ ಅಗತ್ಯ ಇಲ್ಲ. ಏಕೆಂದರೆ ಇಲ್ಲಸಲ್ಲದ ಉದ್ವೇಗ, ಒತ್ತಡದಿಂದ ಆರೋಗ್ಯ ಹಾಳಾಗುತ್ತದೆ. ಪ್ರಯತ್ನ ಪ್ರಾಮಾಣಿಕವಾಗಿದ್ದರೆ ಪ್ರತಿಫಲವು ಪ್ರಾಮಾಣಿಕವಾಗಿ ಬರುತ್ತದೆ. ಆದ್ದರಿಂದ ಪ್ರಾಮಾಣಿಕ ಪ್ರಯತ್ನವನ್ನು ಮಾಡಿ ಖಂಡಿತ ವಾಗಿಯೂ ಒಳ್ಳೆಯ ಫಲಿತಾಂಶ ಸಿಕ್ಕೇ ಸಿಗುತ್ತದೆ. ಅನವಶ್ಯಕ ಒತ್ತಡಗಳಿಗೆ, ಭಯಕ್ಕೆ ಒಳಗಾಗುವ ಅಗತ್ಯ ಬೇಕಿರುವುದಿಲ್ಲ.

**ಮನೋಭಾವ:** ಪರೀಕ್ಷೆಗೆ ಇನ್ನು ಹತ್ತು ನಿಮಿಷಗಳು ಇದೆ ಎನ್ನುವಾಗಲೂ ಓದುವ ವಿದ್ಯಾರ್ಥಿಗಳು, ಪರೀಕ್ಷೆ ಮುಗಿದು ಬಂದ ಮೇಲೆ ತಾವು ಬರೆದ ಉತ್ತರಗಳ ಬಗ್ಗೆ ಚರ್ಚಿಸುತ್ತಾ, ಒಂದು ವೇಳೆ ತಾವು ತಪ್ಪಾಗಿ ಉತ್ತರ ಬರೆದಿದ್ದರೆ ಅದರ ಬಗ್ಗೆ ಯೋಚಿಸುತ್ತಾ ಕಾಲ ಕಳೆಯುತ್ತಾರೆ. ನನ್ನ ಪ್ರಕಾರ ಇವೆರಡೂ ಕೂಡ ಮನಸ್ಸಿನ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಉಂಟು ಮಾಡುವುದಿಂದ ಇದನ್ನು ಆದಷ್ಟು ಪಾಲಿಸದಿರುವುದು ಉತ್ತಮ.ಏಕೆಂದರೆ ಪರೀಕ್ಷೆಗೆ ಇನ್ನೇನೂ ಕೆಲವೇ ನಿಮಿಷಗಳು ಬಾಕಿ ಉಳಿದಿದೆ ಎಂದಾಗ ನಾವು ಓದದೆ ಬಿಟ್ಟಂತಹ ಪ್ರಶ್ನೆಗಳನ್ನು ಇತರರು ಓದುತ್ತಿದ್ದರೆ ಅಯ್ಯೋ ಅದನ್ನು ನಾನು ಓದಿಲ್ಲ ಎಂದುಕೊಂಡು ಓದಲು ಆಗ ಆರಂಭ ಮಾಡಿದರೆ ಅನಾವಶ್ಯಕವಾಗಿ ಒತ್ತಡ ಹೆಚ್ಚಾಗಿ ಈಗಾಗಲೇ ಓದಿರುವ ವಿಷಯದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ. ಪರೀಕ್ಷೆ ಮುಗಿದು ಉತ್ತರ ಪತ್ರಿಕೆ ಕೊಟ್ಟು ಬಂದ ಮೇಲೆ ಅದರ ಬಗ್ಗೆ ಚರ್ಚೆ ನಿಜಕ್ಕೂ ಹಾಸ್ಯಾಸ್ಪದ. ಯಾಕೆಂದರೆ ವಿದ್ಯಾರ್ಥಿ ಬರೆದಿರುವುದು ತಪ್ಪಾಗಿದ್ದರೂ ಅದನ್ನು ಸರಿಪಡಿಸಲಾಗದು. ಆದ್ದರಿಂದ ಇವೆರಡು ಮನೋಭಾವಗಳನ್ನು ಬದಲಿಸಿಕೊಂಡರೆ ಉತ್ತಮ ಎಂಬುದು ನನ್ನ ಅಭಿಪ್ರಾಯ.

**ತಾಳ್ಮೆ, ಸಮಾಧಾನ ಮುಖ್ಯ:** ಪ್ರಶ್ನೆ ಪತ್ರಿಕೆ ಕೊಟ್ಟ ಕೂಡಲೇ ಉತ್ತರವನ್ನು ಬರೆಯಲು ಆರಂಭಿಸುವ ಮೊದಲು ಸಮಾಧಾನದಿಂದ, ತಾಳ್ಮೆ ವಹಿಸಿ ಪ್ರಶ್ನೆಪತ್ರಿಕೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಮೊದಲು ಗೊತ್ತಿರುವ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರಿಸುವಂತಾದರೆ ಕೊನೆಯಲ್ಲಿ ಗೊತ್ತಿಲ್ಲದ ಪ್ರಶ್ನೆಗಳ ಕಡೆಗೆ ಗಮನ ಕೊಟ್ಟರೆ ಏನಾದರೂ ನೆನಪಾಗಿ ಬರೆಯಬಹುದು.ಅದನ್ನು ಬಿಟ್ಟು ಮೊದಲೇ ಉತ್ತರ ಬರೆಯಲು ಆರಂಭಿಸಿ ಯಾವುದೋ ನಾಲ್ಕೈದು ಅಂಕಗಳ ಪ್ರಶ್ನೆಗಳು ಗೊತ್ತಿಲ್ಲದಿದ್ದರೆ ಅದರ ಬಗ್ಗೆ ಅನವಶ್ಯಕ ಗೊಂದಲಕ್ಕೆ ಒಳಗಾಗಿ ಒತ್ತಡದಿಂದ ಗೊತ್ತಿರುವ ಪ್ರಶ್ನೆಗಳಿಗೂ ಸರಿಯಾಗಿ ಉತ್ತರಿಸಲಾಗದೆ ಅಂಕಗಳನ್ನು ಕಳೆದುಕೊಳ್ಳುವ ಸಾಧ್ಯತೆ ಇರುತ್ತದೆ. ಆದ್ದರಿಂದ ಪರೀಕ್ಷಾ ಸಮಯದಲ್ಲಿ ಅಷ್ಟೇ ಅಲ್ಲ ಪರೀಕ್ಷಾ ಕೇಂದ್ರದಲ್ಲಿಯೂ ತಾಳ್ಮೆ, ಸಮಾಧಾನ ಅಗತ್ಯ.

ಪರೀಕ್ಷೆಗಳೇ ಇಲ್ಲವಾಗಿದ್ದರೆ ನಾವು ಏನು, ಯಾವ ಹಂತದಲ್ಲಿ ಇದ್ದೇವೆ, ನಮ್ಮ ಸಾಧನೆಯ ಬೆಳಕು ಅರಿವಿಗೆ ಬಾರದೆ ನಮ್ಮತನ ಸಂಕುಚಿತತೆ ಮನೆ ಮಾಡುತ್ತಿತ್ತು. ಹೀಗಾಗಿ ಬದುಕಿಗೆ ಕಷ್ಟಗಳೆಂಬ ಪರೀಕ್ಷೆಗಳು, ವಿದ್ಯಾಭ್ಯಾಸದಲ್ಲಿ ಕಲಿಕಾ ಪರೀಕ್ಷೆಗಳು ಅತಿ ಅಗತ್ಯ. ಆದರೆ ಅವುಗಳಿಂದಲೇ ಬದುಕು ಎಂದು ಭಯದಿಂದ ಇರುವುದಲ್ಲ. ಪರೀಕ್ಷೆಗಳು ಕೇವಲ ಕಲಿಕೆಯ ಪ್ರಗತಿಯನ್ನು ಅಳೆಯುವ ಮಾನದಂಡವಾದರೂ, ಅದರ ರೂಪಗಳು ಬದಲಾಗಿವೆ. ಇಂದು ಪರೀಕ್ಷೆ ಎಂದರೆ ಅದೊಂದು ಪೆಡಂಭೂತ, ಯುದ್ಧ, ಹೋರಾಡಿ ಜಯಿಸಬೇಕಾದ ಶತ್ರು ಇತ್ಯಾದಿ ಋಣಾತ್ಮಕ ಸಂಗತಿ ಇಲ್ಲವಾಗಿವೆ.

ಪರೀಕ್ಷೆಯು ಸ್ನೇಹಿತನಂತೆ, ಆತ್ಮೀಯ ಬಂಧುವಿನಂತೆ, ಪರೀಕ್ಷೆಯ ಕೊನೆಯ ಹಂತದಲ್ಲಿರುವ ಈ ಕ್ಷಣದಲ್ಲಿ ಆತಂಕಕ್ಕೆ ಒಳಗಾಗದೆ ನಿರ್ಭೀತಿ, ನಿರಾತಂಕವಾಗಿ ಪರೀಕ್ಷೆ ಬರೆಯಬೇಕು. ವಿದ್ಯಾಭ್ಯಾಸದ ಹಂತದಲ್ಲಿನ ಪರೀಕ್ಷೆಯ ಅಂಕಗಳು ಒಂದು ಸಾಧನ ಮಾತ್ರವೇ ಹೊರತು ಅದೇ ಜೀವನವಲ್ಲ. ಜೀವನದಲ್ಲಿ ಇಂತಹ ಅನೇಕ ಪರೀಕ್ಷೆಗಳನ್ನು ಎದುರಿಸಬೇಕಾಗಿರುತ್ತದೆ. ಆದ್ದರಿಂದ ಈ ಪರೀಕ್ಷೆಯನ್ನು ತಲೆನೋವಾಗಿ, ಬಿಡಿಸಲಾಗದ ಕಗ್ಗಂಟಾಗಿ, ದೊಡ್ಡ ಶತ್ರುವಿನಂತೆ ಪರಿಭಾವಿಸದೇ ಮಿತ್ರನಂತೆ, ನೆಚ್ಚಿನ ಸ್ನೇಹಿತನೆಂದು ಪರಿಗಣಿಸಿದರೆ ಯಶಸ್ಸು ನಿಮ್ಮದಾಗುವುದರಲ್ಲಿ ಯಾವುದೇ ಸಂದೇಹವಿಲ್ಲ.

# ಮಾನಸಿಕ ಆರೋಗ್ಯಕ್ಕೂ ಮೈಸೂರು ಸಂಸ್ಥಾನದ ಕೊಡುಗೆ

## –ರಾಜವಂಶಸ್ಥ ಯದುವೀರ್ ಅಭಿಮತ

ಮೈಸೂರು, ಫೆ.29(ಎಂಕೆ)– 'ನಿಮ್ಹಾನ್ಸ್' ಸ್ಥಾಪನೆ ಮೂಲಕ ಮಾನಸಿಕ ಆರೋಗ್ಯ ಸೇರಿದಂತೆ ಸಾರ್ವಜನಿಕ ಆರೋಗ್ಯ ಕ್ಷೇತ್ರಕ್ಕೆ ಮೈಸೂರು ಸಂಸ್ಥಾನ ಅಪಾರ ಕೊಡುಗೆ ನೀಡಿದೆ ಎಂದು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಜೆ.ಕೆ.ಮೈದಾನದಲ್ಲಿರುವ ಮಿಲೇನಿಯಂ ಸಭಾಂಗಣದಲ್ಲಿ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಮನೋ ವೈದ್ಯಶಾಸ್ತ್ರ ವಿಭಾಗದ ಹಾಗೂ ಭಾರತೀಯ ಮನೋ ವೈದ್ಯಕೀಯ ಸಮಾಜದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 4ನೇ ಇಂಡೋ–ಯುರೋಪಿಯನ್ ಸಿಮ್ಪೋಸಿಯಂ ಕೋಅರ್ಶನ್ ಇನ್ ಮೆಂಟಲ್ ಹೆಲ್ತ್(ಮಾನಸಿಕ ಆರೋಗ್ಯ ರಕ್ಷಣೆಯಲ್ಲಿ ಬಲವಂತದ ಚಿಕಿತ್ಸೆ) ಕುರಿತ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಭಾರತ ದೇಶದಲ್ಲಿಯೇ ಒಂದು ಉತ್ತಮ ಆಡಳಿತ ಕೇಂದ್ರವಾಗಿದ್ದ ಮೈಸೂರು ರಾಜ್ಯ ತನ್ನ ಆಧ್ಯಾತ್ಮಿಕ ಹಿನ್ನೆಲೆ ಮೂಲಕ ಮಾನಸಿಕ ಆರೋಗ್ಯಕ್ಕೆ ಸಾಕಷ್ಟು ಕೊಡುಗೆ ನೀಡಿದೆ. ಸ್ವಾತಂತ್ರ್ಯಪೂರ್ವದಲ್ಲಿ



ನಗರದ ಜೆ.ಕೆ.ಮೈದಾನದಲ್ಲಿರುವ ಎಂಎಂಸಿಆರ್‌ಐ ಮಿಲೇನಿಯಂ ಸಭಾಂಗಣದಲ್ಲಿ ನಡೆದ 4ನೇ ಇಂಡೋ–ಯುರೋಪಿಯನ್ ಸಿಮ್ಪೋಸಿಯಂ ಕೋಅರ್ಶನ್ ಇನ್ ಮೆಂಟಲ್ ಹೆಲ್ತ್ ಕುರಿತ ವಿಚಾರ ಸಂಕಿರಣವನ್ನು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಿ, ಮಾತನಾಡಿದರು.

ಮೈಸೂರಿನಲ್ಲಿನ ಆರೋಗ್ಯ ವ್ಯವಸ್ಥೆಯೂ ಇಂಗ್ಲೆಂಡ್ ಅನ್ನು ಮೀರಿಸುವಂತಿತ್ತು. ಆಧುನಿಕ ಕಾಲಘಟ್ಟದಲ್ಲಿಯೂ ಸಾಮ್ರಾಜ್ಯದಲ್ಲಿ ಸ್ಥಾಪಿಸಲ್ಪಟ್ಟ ವೈದ್ಯಕೀಯ ಸಂಸ್ಥೆಗಳು ಜನರ ಆರೋಗ್ಯ ಸುಧಾರಣೆಗೆ ಸಾಕಷ್ಟು ಕೊಡುಗೆ ನೀಡಿದೆ. ನಿಮ್ಹಾನ್ಸ್ ಮಾನಸಿಕ ಆರೋಗ್ಯ ಸುಧಾರಣೆಯಲ್ಲಿ ರಾಷ್ಟ್ರೀಯ ಪ್ರಾಮುಖ್ಯತೆಯುಳ್ಳ ಕೇಂದ್ರವಾಗಿ ಬೆಳೆದಿದೆ ಎಂದರು. ಸ್ವೀಡನ್‌ನ ಕರೋಲಿನ್‌ಸ್ಕಾ ವಿಶ್ವವಿದ್ಯಾಲಯ ಮನೋವೈದ್ಯಶಾಸ್ತ್ರ ಪ್ರಾಧ್ಯಾಪಕ ಡಾ.ಟಾಮ್ ಪಾಮ್ಸ್ಟಿಯರ್ನಾ ಮಾತನಾಡಿ, ಮನೋವೈದ್ಯಕೀಯ ವಿಷಯಗಳು ಇಂದು ಎಲ್ಲರಿಗೂ ಸಂಬಂಧಿಸಿದ ಸಂಗತಿಯಾಗಿ ಬದಲಾಗಿದೆ. ಕೇವಲ ಸಮಸ್ಯೆಯುಳ್ಳವರಿಗೆ ಮಾತ್ರವಲ್ಲ. ಅವರ ಅವಲಂಬಿತರು, ಸುತ್ತಮುತ್ತಲಿನವರ ಪ್ರಶ್ನೆಯಾಗಿ ನಿಂತಿದೆ. ವ್ಯಾಪಕ ದೃಷ್ಟಿಕೋನದಲ್ಲಿ ಪ್ರತಿಯೊಂದು ವಿಷಯವನ್ನು ಅರ್ಥಮಾಡಿಕೊಳ್ಳಬೇಕು. ಜ್ಞಾನದ ಹಂಚಿಕೆ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಮಾನಸಿಕ ಆರೋಗ್ಯ ಕುರಿತ ಜ್ಞಾನ ಹಂಚಿಕೆ ಮಾಡಿಕೊಳ್ಳುವ ವಿಚಾರ ಸಂಕಿರಣ ರೂಪಿಸಲಾಗಿದೆ. ಇದರಿಂದ ಮನೋ ವೈದ್ಯಕೀಯ ಅಧ್ಯಯನ ನಡೆಸುವ ವಿದ್ಯಾರ್ಥಿಗಳಿಗೂ ಅನುಕೂಲವಾಗಲಿದೆ ಎಂದು ತಿಳಿಸಿದರು.

**ಬ್ರಿಕ್ಸ್‌ನಷ್ಟೇ ಬ್ರೈನ್ ಮುಖ್ಯ:** ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎಂ.ಎ.ಶೇಖರ್ ಮಾತನಾಡಿ, ಮೈಸೂರು ಮೆಡಿಕಲ್ ಕಾಲೇಜು ನೂರು ವರ್ಷ ಪೂರೈಸಿದ್ದು, ಇಲ್ಲಿಂದ ವೈದ್ಯಕೀಯ ಪದವಿ ಪಡೆದ ಸಾವಿರಾರು ವೈದ್ಯರು ವಿಶ್ವದೆಲ್ಲೆಡೆ ಚಿಕಿತ್ಸೆ ನೀಡುವ ಮೂಲಕ ತಾವು ಅಧ್ಯಯನ ನಡೆಸಿದ ಸಂಸ್ಥೆಯ ಪ್ರತಿಷ್ಠೆಯನ್ನು ಹೆಚ್ಚಿಸಿದ್ದಾರೆ. ಈ ಮೂಲಕ ಬ್ರಿಕ್ಸ್(ಇಟ್ಟಿಗೆ)ನಷ್ಟೇ ಬ್ರೈನ್ ಮುಖ್ಯವೆಂಬುದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕಾಗಿದೆ. ಬ್ರೈನ್ ಚೆನ್ನಾಗಿದ್ದರಷ್ಟೇ ಗುಣಮಟ್ಟದ ಸೇವೆಯನ್ನು ನೀಡಲು ಸಾಧ್ಯ ಎಂದು ತಿಳಿಸಿದರು. ಸಂಘಟನಾ ಮುಖ್ಯಸ್ಥ ಡಾ.ಪೀಟರ್ ಲ್ಪೆಂಗ್, ಕಾರ್ಯದರ್ಶಿ ಡಾ.ಬಿ.ಎನ್.ರವೀಶ್, ಕೆ.ಆರ್.ಆಸ್ಪತ್ರೆ ಸರ್ಜರಿ ವಿಭಾಗದ ಡಾ. ದಿನೇಶ್ ಮತ್ತಿತರರು ಉಪಸ್ಥಿತರಿದ್ದರು.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com*

# ಇದು ಅಂಬೇಡ್ಕರ್ ಸಂವಿಧಾನ ಜಾಗೃತಿ ಜಾಥಾವಲ್ಲ!: ಕಾಂಗ್ರೆಸ್‌ಪ್ರೇರಿತ ಸಿದ್ದರಾಮಯ್ಯ, ಮಹದೇವಪ್ಪ ಜಾಥಾ

●ಸಂವಿಧಾನ ಆಪತ್ತಿನಲ್ಲಿಲ್ಲ; ಕಾಂಗ್ರೆಸ್ ಪಕ್ಷವೇ ಆಪತ್ತಿನಲ್ಲಿದೆ; ಇದು ಕಾಂಗ್ರೆಸ್‌ನವರ ಸ್ಟಂಟ್, ಗಿಮಿಕ್ ಅಷ್ಟೇ ●ಸಂಸದ ಶ್ರೀನಿವಾಸ ಪ್ರಸಾದ್ ಲೇವಡಿ ●ಖರ್ಗೆ ಮುರುಕಲು ಪಕ್ಷದ ಖುರ್ಚಿ ಅಧ್ಯಕ್ಷ ●ರಾಹುಲ್ ಗಾಂಧಿ ಬಗ್ಗೆ ಹೇಳಲು ನಾನು ಜ್ಯೋತಿಷಿಯಲ್ಲ ●7 ತಿಂಗಳಲ್ಲಿ ಸಿದ್ದರಾಮಯ್ಯ ಮ್ಯಾಜಿಕ್ ಮಾಡಿದ್ದಾರೆಯೇ ●ನನ್ನ ಅಳಿಯಂದಿರಿಗೆ ಬಿಜೆಪಿ ಟಿಕೆಟ್ ಸಿಗದಿದ್ದರೆ ಬೇಸರವಿಲ್ಲ



ಚಾಮರಾಜನಗರ ಸಂಸದ ಶ್ರೀನಿವಾಸ ಪ್ರಸಾದ್ ಗುರುವಾರ ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಫೆ.29(ಬಿಎಲ್‌ಯು)– ಕರ್ನಾಟಕದಲ್ಲಿ ನಡೆದ ಸಂವಿಧಾನ ಜಾಗೃತಿ ಜಾಥಾ ಅಂಬೇಡ್ಕರ್ ಸಂವಿಧಾನ ಜಾಥಾವಾಗದೆ ಕಾಂಗ್ರೆಸ್ ಪ್ರೇರಿತ, ಸಿದ್ದರಾಮಯ್ಯ, ಡಾ.ಮಹದೇವಪ್ಪ ಜಾಥಾ ಎಂದು ಸಂಸದ ಶ್ರೀನಿವಾಸ ಪ್ರಸಾದ್ ಲೇವಡಿ ಮಾಡಿದ್ದಾರೆ.

ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಐಕ್ಯತಾ ಸಮಾವೇಶದಲ್ಲಿ ಸಿದ್ದರಾಮಯ್ಯ ಆವೇಶಭರಿತವಾಗಿ ಭಾಷಣ ಮಾಡಿದ್ದು ಸಂವಿಧಾನ ಜಾಗೃತಿ ಜಾಥಾವೇ ಎಂದು ಪ್ರಶ್ನಿಸಿದರು.

**ಸಂವಿಧಾನ ಆಪತ್ತಿನಲ್ಲಿಲ್ಲ:** ಸಂವಿಧಾನ ಆಪತ್ತಿನಲ್ಲಿ ಇಲ್ಲ, ಕಾಂಗ್ರೆಸ್ ಪಕ್ಷವೇ ಆಪತ್ತಿನಲ್ಲಿದೆ. ಕೇವಲ ಮತಕ್ಕಾಗಿ ಸಂವಿಧಾನ ಆಪತ್ತಿನಲ್ಲಿದೆ ಎಂದು ಕಾಂಗ್ರೆಸ್‌ನವರು ಗಿಮಿಕ್ ಹಾಗೂ ಸ್ಟಂಟ್ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಸಂವಿಧಾನಕ್ಕೆ ಆಪತ್ತು ಬಂದರೆ ನಾವೆಲ್ಲಾ ಸುಮ್ಮನಿರುತ್ತೇವೆಯೇ ಎಂದು ಪ್ರಶ್ನಿಸಿದ ಶ್ರೀನಿವಾಸ ಪ್ರಸಾದ್, ಸಂವಿಧಾನದ ಹೆಸರಿನಲ್ಲಿ ಕಾಂಗ್ರೆಸ್ ರಾಜಕಾರಣ ಮಾಡುತ್ತಿದ್ದು, ರಾಜಕೀಯ ಲಾಭಕ್ಕೆ ಸಂವಿಧಾನಕ್ಕೆ ಆಪತ್ತು ಬಂದಿದೆ ಎಂದು ಬಿಂಬಿಸುತ್ತಿದ್ದಾರೆ ಎಂದು ಕಿಡಿಕಾರಿದರು.

**ತುರ್ತು ಪರಿಸ್ಥಿತಿ ವೇಳೆ ಸಂವಿಧಾನ ದಮನ ಮಾಡಿದರು:** ಸಂವಿಧಾನ ಆಪತ್ತಿನಲ್ಲಿದೆ ಎಂದು ರಾಜಕೀಯ ಲಾಭಕ್ಕೆ ಮಲ್ಲಿಕಾರ್ಜುನ ಖರ್ಗೆ ಸುಳ್ಳು ಹೇಳುತ್ತಿದ್ದಾರೆ. ಹಾಗಾದಾರೆ ಇಂದಿರಾ ಗಾಂಧಿ ತುರ್ತು ಪರಿಸ್ಥಿತಿ ಹೇರಿದ್ದಾಗ ಇವರೇಕೇ ಪ್ರಶ್ನಿಸಲಿಲ್ಲ ಎಂದು ಪ್ರಶ್ನಿಸಿದ ಶ್ರೀನಿವಾಸ ಪ್ರಸಾದ್, ತುರ್ತು ಪರಿಸ್ಥಿತಿ ಸಮಯದಲ್ಲಿ ಸಂವಿಧಾನದ ನಿಯಮಗಳನ್ನು ಗಾಳಿಗೆ ತೂರಿದ್ದರು. ಪ್ರತಿಯೊಬ್ಬರ ಸ್ವಾತಂತ್ರ್ಯ ದಮನ ಮಾಡಿದ್ದರು. ಆಗ ಇದೇ ಮಲ್ಲಿಕಾರ್ಜುನ ಖರ್ಗೆ ಏಕೆ ದನಿ ಎತ್ತಲಿಲ್ಲ ಎಂದು ಕೇಳಿದರು.

ಸ್ವಾರ್ಥ ರಾಜಕಾರಣಕ್ಕಾಗಿ, ಅಧಿಕಾರಕ್ಕೆ ಅಂಟಿ ಕುಳಿತಿರುವ ಇವರು ಮುರುಕಲು ಕುರ್ಚಿ ಪಕ್ಷದ ಅಧ್ಯಕ್ಷ ಎಂದು ಮಲ್ಲಿಕಾರ್ಜುನ ಖರ್ಗೆಯನ್ನು ಶ್ರೀನಿವಾಸ ಪ್ರಸಾದ್ ಗೇಲಿ ಮಾಡಿದರು.

**ಜ್ಯೋತಿಷಿಯಾಗಿದ್ದರೆ ಹೇಳುತ್ತಿದ್ದೆ:** ಪ್ರಾಯಶಃ ನಾನು ಜ್ಯೋತಿಷಿಯಾಗಿದ್ದರೆ ರಾಹುಲ್ ಗಾಂಧಿ ಪ್ರಧಾನಮಂತ್ರಿ ಆಗುತ್ತಾರೆಯೋ, ಇಲ್ಲವೋ ಎಂದು ಭವಿಷ್ಯ ನುಡಿಯುತ್ತಿದ್ದೆ ಎಂದು ಶ್ರೀನಿವಾಸ ಪ್ರಸಾದ್ ಹಾಸ್ಯ ಚಟಾಕಿ ಹಾರಿಸಿದರು.

ಆದರೆ ಒಂದಂತೂ ನಿಜ. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಅಧಿಕಾರಕ್ಕೆ ಬರುತ್ತದೆ ಎಂದು ಶ್ರೀನಿವಾಸ ಪ್ರಸಾದ್ ವಿಶ್ವಾಸ ವ್ಯಕ್ತಪಡಿಸಿದರು.

ಇನ್ನು ಅಧಿಕಾರಕ್ಕೆ ಬಂದು 7 ತಿಂಗಳುಗಳಲ್ಲಿ, ಆಗಲೇ ಬಡತನ ರೇಖೆಗಿಂತ ಕೆಳಗಿರುವವರನ್ನು ಮೇಲಕ್ಕೆತ್ತಿದ್ದೇವೆ ಎಂದು ಸಿದ್ದರಾಮಯ್ಯನವರು ಸುಳ್ಳು ಹೇಳುತ್ತಿದ್ದಾರೆ. ಇಷ್ಟು ಕಡಿಮೆ ಸಮಯದಲ್ಲಿ ಇವರು ಮ್ಯಾಜಿಕ್ ಮಾಡಿದ್ದಾರೆಯೇ ಎಂದು ಪ್ರಶ್ನಿಸಿದರು.

**ಚುನಾವಣೆ ವ್ಯವಹಾರವಾಗಿದೆ:** ನಾವು ಚುನಾವಣೆಗೆ ಸ್ಪರ್ಧೆ ಮಾಡಿದಾಗ ಹೆಚ್ಚು ಹಣ ಖರ್ಚಾಗುತ್ತಿರಲಿಲ್ಲ. ಆದರೆ ಈಗ ಕೋಟ್ಯಾಂತರ ರೂಪಾಯಿ ಹಣ ಬೇಕು. ರಿಯಲ್ ಎಸ್ಟೇಟ್ ಉದ್ಯಮಿಗಳು, ಬಿಲ್ಡರ್‌ಗಳು ಚುನಾವಣೆಯಲ್ಲಿ ಸ್ಪರ್ಧೆ ಮಾಡುತ್ತಿದ್ದು, ಹಣ ಹಾಕಿ ಹಣ ತೆಗೆಯುವ ವ್ಯವಹಾರವಾಗಿ ಚುನಾವಣೆಯನ್ನು ಪರಿಗಣಿಸಿದ್ದಾರೆ ಎಂದು ಶ್ರೀನಿವಾಸ ಪ್ರಸಾದ್ ಬೇಸರ ವ್ಯಕ್ತಪಡಿಸಿದರು.

**ಅಳಿಯಂದಿರಿಗೆ ಟಿಕೆಟ್ ಸಿಗದಿದ್ದರೆ ನನಗೆ ಬೇಸರವಿಲ್ಲ:** ಚಾಮರಾಜನಗರ ಲೋಕಸಭಾ ಕ್ಷೇತ್ರದ ಚುನಾವಣೆಗೆ ನನ್ನ ಅಳಿಯಂದಿರು ಆಕಾಂಕ್ಷಿಗಳಾಗಿದ್ದು, ಒಂದು ವೇಳೆ ಬಿಜೆಪಿ ಹೈಕಮಾಂಡ್ ಟಿಕೆಟ್ ನೀಡದಿದ್ದರೆ ನನಗೆ ಬೇಸರವಿಲ್ಲ. ಆದರೆ ನಾನಂತೂ ಟಿಕೆಟ್ ನೀಡುವಂತೆ ಯಾರಿಗೂ ಶಿಫಾರಸು ಮಾಡುವುದಿಲ್ಲ ಎಂದು ಶ್ರೀನಿವಾಸ ಪ್ರಸಾದ್ ಸ್ಪಷ್ಟಪಡಿಸಿದರು.

ಯಾರಿಗೆ ಟಿಕೆಟ್ ನೀಡಬೇಕು ಎಂಬ ಬಗ್ಗೆ ಬಿಜೆಪಿ ಈಗಾಗಲೇ ರಾಜ್ಯಾದ್ಯಂತ ಸಮೀಕ್ಷೆ ನಡೆಸಿದೆ. ರಾಜ್ಯ ಹಾಗೂ ಸ್ಥಳೀಯ ನಾಯಕರಿಂದ ವರದಿ ಕೂಡ ತರಿಸಿಕೊಂಡಿದ್ದಾರೆ. ಹೀಗಿರುವಾಗ ಏಕಾಏಕಿ ನಾನೇಳಿದವರಿಗೆ ಟಿಕೆಟ್ ಕೊಡಿ ಎಂದು ಶಿಫಾರಸು ಮಾಡಿದರೆ ಕೊಡುತ್ತಾರೆಯೇ ಎಂದು ಶ್ರೀನಿವಾಸ ಪ್ರಸಾದ್ ಪ್ರಶ್ನಿಸಿದರು.

ಹಾಲಿ 25 ಸಂಸದರಲ್ಲಿ ಸಿದ್ದೇಶ್ವರ್, ಬಿ.ಎನ್.ಬಚ್ಚೇಗೌಡ, ಸದಾನಂದಗೌಡ ಸೇರಿದಂತೆ ಏಳೆಂಟು ಮಂದಿ ಚುನಾವಣೆಯಲ್ಲಿ ಸ್ಪರ್ಧೆ ಮಾಡುವುದಿಲ್ಲ ಎಂದು ಹೇಳಿದ್ದಾರೆ. ಒಳ್ಳೆಯ ಕೆಲಸ ಮಾಡಿರುವ ಕಾರಣ ನನಗೆ ಟಿಕೆಟ್ ಸಿಗುತ್ತೆ ಎಂದು ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಕೂಡ ಹೇಳಿದ್ದಾರೆ. ಯಾರಿಗೆ ಟಿಕೆಟ್ ನೀಡಲಾಗುವುದು, ಯಾರಿಗೆ ಟಿಕೆಟ್ ನೀಡುವುದಿಲ್ಲ ಎಂಬ ಬಗ್ಗೆ ಬಿಜೆಪಿ ಹೈಕಮಾಂಡ್ ಅಂತಿಮವಾಗಿ ಏನು ತೀರ್ಮಾನ ಮಾಡುತ್ತದೆಯೋ ಕಾದು ನೋಡೋಣ ಎಂದರು.

ನಿವೃತ್ತ ಎಡಿಜಿಪಿ ಭಾಸ್ಕರ್ ರಾವ್, ಅಭಿನಂದನಾ ಸಮಿತಿ ಸದಸ್ಯರಾದ ನಂದಕುಮಾರ್, ಶಿವಕುಮಾರ್, ಶಿವಕುಮಾರ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

> “ಕಾಂಗ್ರೆಸ್ ಪಕ್ಷಕ್ಕೆ ಈ ದುಸ್ಥಿತಿ ಬರುತ್ತದೆ ಎಂದು ನಾನು ಊಹೆ ಕೂಡ ಮಾಡಿರಲಿಲ್ಲ. ಕಾಂಗ್ರೆಸ್‌ನಲ್ಲಿ ಸರಿಯಾದ ನಾಯಕ ಇಲ್ಲದಿರುವುದೇ ಈ ಪರಿಸ್ಥಿತಿಗೆ ಕಾರಣ. ಸೋನಿಯಾ ಗಾಂಧಿ ಲೋಕಸಭಾ ಚುನಾವಣೆ ಬಿಟ್ಟು ರಾಜಸ್ಥಾನದಿಂದ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ. ಇನ್ನು ರಾಯ್ ಬರೇಲಿ ಬಿಟ್ಟು ವೈಯನಾಡಿಗೆ ಬಂದ ರಾಹುಲ್ ಗಾಂಧಿ ಈಗ ತೆಲಂಗಾಣದಲ್ಲಿ ಸ್ಪರ್ಧೆ ಮಾಡುವುದಾಗಿ ಹೇಳಿದ್ದಾರೆ. ಇದು ಕಾಂಗ್ರೆಸ್‌ಗೆ ಬಂದಿರುವ ಹೀನಾಯ ಸ್ಥಿತಿ. –ಶ್ರೀನಿವಾಸಪ್ರಸಾದ್

# ಸಂಸದ ಶ್ರೀನಿವಾಸ ಪ್ರಸಾದ್ ಅವರ ರಾಜಕೀಯ ಸುವರ್ಣ ಮಹೋತ್ಸವ–50

## ಮಾರ್ಚ್ 17ರಂದು ಅವಿಸ್ಮರಣೀಯ ಸಮಾರಂಭ; ‘ಸ್ವಾಭಿಮಾನಿ ನೆನಪುಗಳು’ ಅಭಿನಂದನಾ ಗ್ರಂಥ ಬಿಡುಗಡೆ

●ತೊಂದರೆ ನೀಡಿದ ಪಟ್ಟಭದ್ರರ ಬಗ್ಗೆ ಬರೆದಿದ್ದೇನೆ ●ಏಳು ಬೀಳು ಕಂಡು ಜರ್ಝರಿತನಾಗಿದ್ದೇನೆ

ಮೈಸೂರು,ಫೆ.29(ಬಿಎಲ್‌ಯು)–ಚಾಮರಾಜನಗರ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ ರಾಜಕೀಯ ಪಯಣದ 50 ವರ್ಷ ಹಿನ್ನೆಲೆಯಲ್ಲಿ ಅವರ ಚುನಾವಣಾ ರಾಜಕೀಯ ಸವರ್ಣ ಮಹೋತ್ಸವದ ಅಭಿನಂದನಾ ಸಮಾರಂಭ ಮಾರ್ಚ್ 17ರಂದು ಮೈಸೂರಿನಲ್ಲಿ ನಡೆಯಲಿದೆ.

ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಸ್ವತಃ ಶ್ರೀನಿವಾಸ ಪ್ರಸಾದ್ ಅವರೇ ಈ ಬಗ್ಗೆ ವಿವರ ನೀಡಿದರು. ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಭಾಂಗಣದಲ್ಲಿ ಅಂದು ಬೆಳಿಗ್ಗೆ 11 ಗಂಟೆಗೆ ನಡೆಯುವ ಸಮಾರಂಭವನ್ನು ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಉದ್ಘಾಟಿಸಲಿದ್ದಾರೆ. ಮಾಜಿ ಮುಖ್ಯಮಂತ್ರಿ ಡಾ.ಎಂ.ವೀರಪ್ಪ ಮೊಯ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದು, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ.ಚಂದ್ರಶೇಖರ ಕಂಬಾರ ಅವರು ನಾನು ಬರೆದಿರುವ ‘ಸ್ವಾಭಿಮಾನಿ ನೆನಪುಗಳು’ ಅಭಿನಂದನಾ ಗ್ರಂಥ ಬಿಡುಗಡೆ ಮಾಡುವರು ಎಂದು ಹೇಳಿದರು.

ಮಾಜಿ ಸಚಿವ, ಸ್ಪೀಕರ್ ಕಾಗೋಡು ತಿಮ್ಮಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದು, ಅಭಿನಂದನಾ ಸಮಿತಿ ಅಧ್ಯಕ್ಷರೂ ಆದ ಮಾಜಿ ಸಚಿವ ಪಿ.ಜಿ.ಆರ್.ಸಿಂಧ್ಯಾ ಉಪಸ್ಥಿತರಿರುವರು. ಚುನಾವಣಾ ರಾಜಕಾರಣ ಆರಂಭಿಸಿ 50 ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ಗಣ್ಯರು ಅಂದು ನನ್ನ ಅಭಿನಂದಿಸಲಿದ್ದಾರೆ ಎಂದು ಶ್ರೀನಿವಾಸ ಪ್ರಸಾದ್ ತಿಳಿಸಿದರು.

ನನ್ನ ಬಗ್ಗೆ ಗರಿಷ್ಠ ತಿಳುವಳಿಕೆ ಇರುವ ಹಾಗೂ ರಾಜಕೀಯದಲ್ಲಿ ಹೆಚ್ಚು ಅನುಭವ ಇದ್ದು, ರಾಜಕಾರಣದಿಂದ ದೂರ ಇರುವ ಈ ಗಣ್ಯರನ್ನು ಸಮಾರಂಭಕ್ಕೆ ಆಹ್ವಾನಿಸಲಾಗಿದೆ ಎಂದು ಸಂಸದರು ಸ್ಪಷ್ಟಪಡಿಸಿದರು.

ನಾನು 1974, ಮಾರ್ಚ್ 17ರಂದು ಚುನಾವಣಾ ರಾಜಕಾರಣ ಆರಂಭಿಸಿದೆ. ಈ ಮಾರ್ಚ್ 17ಕ್ಕೆ 50 ವರ್ಷವಾಗುವ ಹಿನ್ನೆಲೆಯಲ್ಲಿ ಚುನಾವಣಾ ರಾಜಕೀಯದ ಸುವರ್ಣ ಮಹೋತ್ಸವ ಆಯೋಜಿಸಲಾಗಿದೆ. ಈ ತನಕ 9 ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧೆ ಮಾಡಿ 6 ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದೇನೆ. 5 ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ 2 ಚುನಾವಣೆಯಲ್ಲಿ ಗೆದ್ದಿದ್ದೇನೆ. ಈ ಮೂಲಕ 14 ಚುನಾವಣೆಯಲ್ಲಿ ಸ್ಪರ್ಧೆ ಮಾಡಿರುವ ನಾನು 5 ವರ್ಷ ಕೇಂದ್ರ ಸಚಿವನಾಗಿ, 3 ವರ್ಷ ರಾಜ್ಯ ಸರ್ಕಾರದಲ್ಲಿ ಕಂದಾಯ ಸಚಿವನಾಗಿ ಕಾರ್ಯನಿರ್ವಹಿಸಿದ್ದೇನೆ ಎಂದು ವಿವರಿಸಿದರು.

ಚುನಾವಣೆಯಲ್ಲಿ ನಾನು ಕಂಡಿರುವ ಏಳು ಬೀಳು, ಪಟ್ಟಭದ್ರ ಹಿತಾಸಕ್ತಿಗಳು ನನಗೆ ನೀಡಿರುವ ತೊಂದರೆ ಸೇರಿದಂತೆ ಹಲವು ಮಾಹಿತಿಗಳನ್ನು ನಾನು ಬರೆದಿರುವ ಸ್ವಾಭಿಮಾನಿ ನೆನಪುಗಳು ಪುಸ್ತಕದಲ್ಲಿ ವಿವರಿಸಿದ್ದೇನೆ. ಇದಲ್ಲದೆ ಪಾರ್ಲಿಮೆಂಟ್‌ನಲ್ಲಿ ನಾನು ಈ ತನಕ ಮಾತನಾಡಿರುವ ವಿಚಾರ, ಎತ್ತಿರುವ ಪ್ರಶ್ನೆಗಳು ಸೇರಿದಂತೆ ಹಲವು ವಿವರಗಳನ್ನು 1,500 ಪುಟಗಳ ಪುಸ್ತಕಗಳಲ್ಲಿ ವಿವರಿಸುತ್ತೇನೆ. ಸ್ವಲ್ಪ ಮಟ್ಟಿಗೆ ಆರೋಗ್ಯ ಸಮಸ್ಯೆ ಸುಧಾರಿಸಿದ ಮೇಲೆ ಈ ಪುಸ್ತಕ ಬರೆಯುತ್ತೇನೆ ಎಂದು ಶ್ರೀನಿವಾಸ ಪ್ರಸಾದ್ ಮಾಹಿತಿ ನೀಡಿದರು.

ಅಂದು ನಡೆಯುವ ಸಮಾರಂಭದಲ್ಲಿ ಚುನಾವಣಾ ರಾಜಕೀಯದಿಂದ ನಿವೃತ್ತಿ ಘೋಷಣೆ ಮಾಡುತ್ತೇನೆ. ತರುವಾಯ ಯಾವುದೇ ಪಕ್ಷದಲ್ಲೂ ಗುರುತಿಸಿಕೊಳ್ಳುವುದಿಲ್ಲ. ಆದರೆ ಮುಂದಿನ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಪಕ್ಷ ಬೆಂಬಲಿಸುವಂತೆ ಸಲಹೆ ನೀಡುತ್ತೇನೆ ಎಂದು ಸ್ಪಷ್ಟನೆ ನೀಡಿದರು.

> “50 ವರ್ಷದ ರಾಜಕಾರಣದಲ್ಲಿ ಪಾರದರ್ಶಕ ಹಾಗೂ ಪ್ರಾಮಾಣಿಕವಾಗಿ ಕೆಲಸ ಮಾಡಿದ ಆತ್ಮ ತೃಪ್ತಿ ನನಗಿದೆ. ನಾನು ಇಲ್ಲಿ ತನಕ ಗುರುತಿಸಿಕೊಂಡಿರುವ ಎಲ್ಲಾ ರಾಜಕೀಯ ಪಕ್ಷಗಳಿಗೆ ಆಸ್ತಿ ಆಗಿದ್ದೇನೆಯೇ ಹೊರತು, ಹೊರೆಯಾಗಿರಲಿಲ್ಲ. ನನಗೆ ಆರೋಗ್ಯ ಸರಿಯಿಲ್ಲ. ರಾಜಕಾರಣದಲ್ಲಿ ಏಳು ಬೀಳು ಕಂಡು ಜರ್ಜಿತನಾಗಿದ್ದೇನೆ. ನನಗೆ ರಾಜಕಾರಣ ಸಾಕು. ಆದ ಕಾರಣ ಅಂದು ರಾಜಕೀಯದಿಂದ ನಿವೃತ್ತಿ ಘೋಷಣೆ ಮಾಡುತ್ತೇನೆ. –ಶ್ರೀನಿವಾಸ ಪ್ರಸಾದ್

# ಇಂದಿನಿಂದ ದ್ವಿತೀಯ ಪಿಯುಸಿ ಪರೀಕ್ಷೆ

## ಮೈಸೂರು ನಗರದ 26 ಕೇಂದ್ರಗಳು ಸೇರಿ ಜಿಲ್ಲೆಯ 49 ಕೇಂದ್ರಗಳು, 34000 ಮಂದಿ ವಿದ್ಯಾರ್ಥಿಗಳು ನೋಂದಣಿ



ಶುಕ್ರವಾರದಿಂದ ಆರಂಭವಾಗುವ ದ್ವಿತೀಯ ಪಿಯುಸಿ ಪರೀಕ್ಷಾ ಕೇಂದ್ರಗಳಲ್ಲಿ ನೋಂದಣಿ ಸಂಖ್ಯೆ ಬರೆದು ಅಧಿಕಾರಿಗಳು ಸಿದ್ಧತೆ ಮಾಡಿದ್ದಾರೆ.

ಮೈಸೂರು,ಫೆ29(ಆರ್‌ಕೆ)– ಮಾರ್ಚ್ 1 ರಿಂದ 22ರವರೆಗೆ ಮೈಸೂರು ನಗರ ಮತ್ತು ಜಿಲ್ಲೆ ಸೇರಿದಂತೆ ರಾಜ್ಯಾದ್ಯಂತ 2023–24ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳು ನಡೆಯಲಿವೆ.

ಮೈಸೂರು ನಗರದ 26 ಕೇಂದ್ರಗಳು ಸೇರಿ ಜಿಲ್ಲೆಯ 49 ಕೇಂದ್ರಗಳಲ್ಲಿ ಪರೀಕ್ಷೆಗೆ ಸರ್ವ ಸಿದ್ಧತೆ ಮಾಡಲಾಗಿದ್ದು, 31,628 ಹೊಸಬರು, 1,332 ಖಾಸಗಿ ಹಾಗೂ 1,866 ಪುನರಾವರ್ತಿತ ಸೇರಿ ಜಿಲ್ಲೆಯಲ್ಲಿ ಒಟ್ಟು 34, 826 ಮಂದಿ ವಿದ್ಯಾರ್ಥಿಗಳು ನೊಂದಣಿಯಾಗಿದ್ದಾರೆ. ಹೊಸ ವಿದ್ಯಾರ್ಥಿಗಳ ಪೈಕಿ 14,050 ಬಾಲಕರು ಹಾಗೂ 17,578 ಬಾಲಕಿಯರು ದ್ವಿತೀಯ ಪಿಯುಸಿ ಪರೀಕ್ಷೆ ಬರೆಯುತ್ತಿದ್ದಾರೆ ಎಂದು ಪದವಿ ಪೂರ್ವ ಮತ್ತು ವೃತ್ತಿ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಎಂ.ಮರಿಸ್ವಾಮಿ ತಿಳಿಸಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಅತೀ ಹೆಚ್ಚು 13,982, ವಾಣಿಜ್ಯ 10,679 ಹಾಗೂ ಕಲಾ ವಿಭಾಗದಲ್ಲಿ 6,967 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದಾರೆ. ಎಲ್ಲಾ ಪರೀಕ್ಷಾ ಕೇಂದ್ರಗಳಿಗೆ 10 ಮಾರ್ಗಗಳ ಮೂಲಕ ಜಿಪಿಎಸ್ ಹೊಂದಿರುವ ವಾಹನಗಳಲ್ಲಿ ಪೊಲೀಸ್ ಭದ್ರತೆಯೊಂದಿಗೆ ಪ್ರಶ್ನೆ ಮತ್ತು ಉತ್ತರ ಪತ್ರಿಕೆಗಳನ್ನು ಸುರಕ್ಷಿತವಾಗಿ ರವಾನಿಸಿ ಜಿಲ್ಲಾ ಖಜಾನೆಗೆ ತಲುಪಿಸಲು ವ್ಯವಸ್ಥೆ ಮಾಡಲಾಗಿದೆ.

ಪ್ರತೀ ಪರೀಕ್ಷಾ ಕೇಂದ್ರಗಳಲ್ಲಿ ನೋಂದಣಿ ಸಂಖ್ಯೆ ಬರೆದು ಮೂಲ ಸೌಕರ್ಯ ಕಲ್ಪಿಸಲಾಗಿದೆಯಲ್ಲದೆ, ಪೊಲೀಸ್ ಬಂದೋಬಸ್ತ್ ಮಾಡಿ ಕಟ್ಟೆಚ್ಚರ ವಹಿಸಲಾಗಿದೆ. ಕೇಂದ್ರಗಳ ಸುತ್ತ 200 ಮೀಟರ್ ವ್ಯಾಪ್ತಿ ಯಲ್ಲಿ ಸೆಕ್ಷನ್ 144 ರೀತ್ಯಾ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆಯಲ್ಲದೆ ಸಮೀಪದ ಜೆರಾಕ್ಸ್ ಅಂಗಡಿ ಬಂದ್ ಮಾಡುವಂತೆ ಸೂಚಿಸಲಾಗಿದೆ ಎಂದು ಮರಿಸ್ವಾಮಿ ತಿಳಿಸಿದ್ದಾರೆ.

# ಪಾಕ್ ಪರ ಘೋಷಣೆ ಕೂಗಿರುವುದು ಅಕ್ಷಮ್ಯ ಅಪರಾಧ

## ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರ್‌ರಾವ್



ಮೈಸೂರಿನ ಜಲದರ್ಶಿನಿ ಸರ್ಕಾರಿ ಅತಿಥಿ ಗೃಹದಲ್ಲಿ ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರ್‌ರಾವ್, ಸಂಸದ ವಿ.ಶ್ರೀನಿವಾಸಪ್ರಸಾದ್ ಅವರನ್ನು ಅಭಿನಂದಿಸಿದರು.

ಮೈಸೂರು, ಫೆ.29(ಜಿಎ)–ವಿಧಾನ ಸೌಧದಲ್ಲಿ ಪಾಕಿಸ್ಥಾನ ಪರ ಘೋಷಣೆ ಕೂಗಿದವರು ದೇಶ ದ್ರೋಹಿಗಳು. ಈ ದೇಶದ ಅನ್ನ ತಿಂದು, ನೀರು ಕುಡಿದ ಪಕ್ಕದ ದೇಶದ ಪರ ಘೋಷಣೆ ಕೂಗಿದ್ದು ಅಕ್ಷಮ್ಯ ಅಪರಾಧ ಎಂದು ಬಿಜೆಪಿ ಮುಖಂಡರೂ ಆದ ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರ್‌ರಾವ್ ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರಿನ ಜಲದರ್ಶಿನಿ ಸರ್ಕಾರಿ ಅತಿಥಿ ಗೃಹದಲ್ಲಿ ಚಾಮರಾಜನಗರ ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಅವರನ್ನು ಭೇಟಿ ಮಾಡಿ ಅವರು 50 ವರ್ಷಗಳ ರಾಜಕೀಯ ಜೀವನದ ಬಗ್ಗೆ ಚರ್ಚಿಸಿ, ಅಭಿನಂದಿಸಿದರು.

ನಂತರ ಭಾಸ್ಕರ್‌ರಾವ್ ಮಾಧ್ಯಮಗಳೊಂದಿಗೆ ಮಾತನಾಡಿ, ವಿ.ಶ್ರೀನಿವಾಸ್ ಪ್ರಸಾದ್ ಅವರು ಹಲವಾರು ವರ್ಷಗಳಿಂದ ನನಗೆ ಪರಿಚಯ ಅವರ ನಮ್ಮ ನಡುವೇ ಅವಿನಾಭಾವ ಸಂಬಂಧವಿದ್ದು, ಅವರು ರಾಜಕೀಯ ಕ್ಷೇತ್ರದ 50 ವರ್ಷ ಪೂರೈಸಿರುವುದು ಸಂತಸದ ವಿಚಾರ ಎಂದು ಹೇಳಿದರು.

ಇದೇ ವೇಳೆ ವಿಧಾನಸೌಧದಲ್ಲಿ ಪಾಕಿಸ್ಥಾನ ಪರ ಘೋಷಣೆ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ಇದು ದೇಶ ದ್ರೋಹದ ಕೆಲಸ. ದೇಶದ ಸೈನಿಕರು ತಮ್ಮ ಜೀವಗಳನ್ನು ತ್ಯಾಗ ಮಾಡಿ ದೇಶದ ಗಡಿ ಕಾಯುತ್ತಿದ್ದಾರೆ. ಅವರ ಪರ ಘೋಷಣೆ ಕೂಗುವ ಬದಲು ನೆರೆಯ ಶತ್ರು ರಾಷ್ಟ್ರದ ಪರ ಘೋಷಣೆ ಕೂಗಿ ನಮ್ಮ ಸೈನಿಕರಿಗೆ ಅವಮಾನ ಮಾಡಿದ್ದಾರೆ. ಘೋಷಣೆ ಕೂಗಿದವರನ್ನು ಸಮರ್ಥಿಸುವ ರೀತಿ ಕಾಂಗ್ರೆಸ್ ನಾಯಕರ ಹೇಳಿಕೆ ಸರಿಯಲ್ಲ. ಬಿಜೆಪಿ ವಿರೋಧಿಸುವ ಭರದಲ್ಲಿ ಕಾಂಗ್ರೆಸ್‌ನವರು ದೇಶದ ಭದ್ರತೆ ಮತ್ತು ಹಿತವನ್ನು ಕಡೆಗಣಿಸುತ್ತಿದ್ದಾರೆ. ಕಾಂಗ್ರೆಸ್ ಇದ್ದರಿಂದ ಜನರಿಂದಲೂ ದೂರಾಗುತ್ತಿದ್ದಾರೆ ಎಂದು ದೂರಿದರು.

# ರೈತರಿಗೆ ತರಬೇತಿ

ಮೈಸೂರು,ಫೆ.29–ಜಿಲ್ಲಾ ಕೃಷಿ ತರಬೇತಿ ಕೇಂದ್ರದ ನಾಗನಹಳ್ಳಿಯಲ್ಲಿ ಮಾ. 6ರಂದು ‘ಚಿಯಾ ಬೆಳೆಯ ಬೇಸಾಯ ಕ್ರಮಗಳು ಹಾಗೂ ಮಾರುಕಟ್ಟೆ ವಿಷಯದ ಬಗ್ಗೆ ರೈತ ಅಥವಾ ರೈತ ಮಹಿಳೆಯರಿಗೆ ಒಂದು ದಿನದ ಹೊರಾಂಗಣ ತರಬೇತಿಯನ್ನು ಹೆಚ್.ಡಿ.ಕೋಟೆ ತಾಲೂಕಿನ ಹೊಸಹಳ್ಳಿ ಗ್ರಾಮದಲ್ಲಿ ಆಯೋಜಿಸಲಾಗಿದೆ. ಆಸಕ್ತ ರೈತ ಅಥವಾ ರೈತ ಮಹಿಳೆಯರು ತಮ್ಮ ಹೆಸರನ್ನು ತರಬೇತಿ ಕೇಂದ್ರದ ಕೃಷಿ ಅಧಿಕಾರಿ ಮೊ.ಸಂ:9164397510ಗೆ ಕರೆಮಾಡಿ ತಮ್ಮ ಹೆಸರನ್ನು ನೋಂದಾಯಿಸಿ ಕೊಳ್ಳಬೇಕು. ಮೈಸೂರು ಜಿಲ್ಲೆಯ 50 ರೈತ ಅಥವಾ ರೈತ ಮಹಿಳೆಯರಿಗೆ ಮಾತ್ರ ಅವಕಾಶವಿದ್ದು, ಮೊದಲು ನೋಂದಣಿ ಮಾಡಿದವರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ನಾಗನಹಳ್ಳಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಉಪ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪಿಯು ಪರೀಕ್ಷಾ ಕೇಂದ್ರಗಳ ಸುತ್ತಲೂ ನಿಷೇಧಾಜ್ಞೆ ಜಾರಿ

ಮೈಸೂರು,ಫೆ29–ಮಾ.1ರಿಂದ ಮಾ.22 ರವರೆಗೆ ಮೈಸೂರಿನ 26 ಪರೀಕ್ಷಾ ಕೇಂದ್ರಗಳಲ್ಲಿ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳು ನಡೆಯಲಿವೆ. ಮಹಾರಾಜ ಸರ್ಕಾರಿ ಪಿಯು ಕಾಲೇಜು ಜೆಎಲ್‌ಬಿ ರಸ್ತೆ, ಮಹಾರಾಣಿ ಸರ್ಕಾರಿ ಪಿಯು ಕಾಲೇಜು ನಾರಾಯಣ ಶಾಸ್ತ್ರಿ ರಸ್ತೆ, ಡಿ.ಬನುಮಯ್ಯ ಪಿಯು ಕಾಲೇಜು ಹೊಸ ಸಯ್ಯಾಜಿರಾವ್ ರಸ್ತೆ, ಸದ್ವಿದ್ಯಾ ಪಿಯು ಕಾಲೇಜು, ಮರಿಮಲ್ಲಪ್ಪ ಪಿಯು ಕಾಲೇಜು, ಗೋಪಾಲಸ್ವಾಮಿ ಎಸ್‌ವಿ ಪಿಯು ಕಾಲೇಜು ಲಕ್ಷ್ಮೀಪುರಂ, ಜೆಎಸ್‌ಎಸ್ ಪಿಯು ಕಾಲೇಜು, ಜೆಎಸ್‌ಎಸ್ ಪಿಯು ಕಾಲೇಜ್ ಫಾರ್ ವಿಮೆನ್ ಸರಸ್ವತಿಪುರಂ, ಶ್ರೀ ಆದಿ ಚುಂಚನಗಿರಿ ಪಿಯು ಕಾಲೇಜು ಕುವೆಂಪುನಗರ, ಸರ್ಕಾರಿ ಪಿಯು ಕಾಲೇಜು ಕುವೆಂಪುನಗರ, ಎಂಎಂಕೆ ಮತ್ತು ಎಸ್‌ಡಿಎಂ ಗರ್ಲ್ಸ್ ಪಿಯು ಕಾಲೇಜು ಕೃಷ್ಣಮೂರ್ತಿಪುರಂ, ಶಾರದ ವಿಲಾಸ ಪಿಯು ಕಾಲೇಜು ಕೃಷ್ಣಮೂರ್ತಿಪುರಂ, ವಿಜಯ ವಿಠಲ ಪಿಯು ಕಾಲೇಜು ಸರಸ್ವತಿಪುರಂ, ರಾಮಕೃಷ್ಣ ವಿದ್ಯಾ ಕೇಂದ್ರ ಪಿಯು ಕಾಲೇಜು ಕುವೆಂಪುನಗರ, ವಿದ್ಯಾವರ್ಧಕ ಪಿಯು ಕಾಲೇಜು ಶೇಷಾದ್ರಿ ಐಯ್ಯರ್ ರಸ್ತೆ, ಸರ್ಕಾರಿ ಪಿಯು ಕಾಲೇಜು ಫಾರ್ ಗರ್ಲ್ಸ್ ಪೀಪಲ್ಸ್ ಪಾರ್ಕ್ ನಜರಬಾದ್, ಬೈಫರ್ಕೆಟೆಡ್ ಮಹಾರಾಜ ಸರ್ಕಾರಿ ಪಿಯು ಕಾಲೇಜು ನಜ್ಹರ್‌ಬಾದ್, ವಾಣಿವಿಲಾಸ ಅರಸ್ ಪಿಯು ಕಾಜೇಜು ನಜ್ಹರ್‌ಬಾದ್, ಟೆರೀಷಿಯನ್ ಪಿಯು ಕಾಲೇಜು ನಜರ್‌ಬಾದ್, ಸೆಂಟ್ ಫಿಲೋಮಿನಾ ಪಿಯು ಕಾಲೇಜು ಬನ್ನಿಮಂಟಪ, ಮಾತೃಮಂಡಳಿ ಗರ್ಲ್ಸ್ ಪಿಯು ಕಾಲೇಜು ವಿ.ವಿ.ಮೊಹಲ್ಲಾ, ಎಸ್‌ಬಿಆರ್‌ಆರ್ ಮಹಾಜನ ಪಿಯು ಕಾಲೇಜು ಜಯ ಲಕ್ಷ್ಮೀಪುರಂ, ಸರ್ಕಾರಿ ಪಿಯು ಕಾಲೇಜು ಒಂಟಿಕೊಪ್ಪಲ್, ವಿವೇಕಾನಂದ ಪಿಯು ಕಾಲೇಜು ಜಯಲಕ್ಷ್ಮೀಪುರಂ, ಸದ್ವಿದ್ಯಾ ಸೆಮಿರೆಸ್ ಪಿಯು ಕಾಲೇಜು ವಿಜಯನಗರ, ಸರ್ಕಾರಿ ಪಿಯು ಕಾಲೇಜು ಮಂಚೇಗೌಡನ ಕೊಪ್ಪಲು ಈ ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ಮಾ.01 ರಿಂದ ಮಾ.22ರವರೆಗೆ ಬೆಳಗ್ಗೆ 6 ಗಂಟೆಯಿಂದ ಸಂಜೆ 6 ಗಂಟೆವರೆಗೆ ಕಲಂ 144 ರೀತ್ಯಾ ನಿಷೇಧಾಜ್ಞೆಯನ್ನು ಜಾರಿಗೊಳಿಸಲಾಗಿದೆ.

ಪರೀಕ್ಷಾ ದಿನದಂದು ಪರೀಕ್ಷಾ ಕೇಂದ್ರದ ಸುತ್ತಲೂ ಪರೀಕ್ಷಾರ್ಥಿಗಳು ಹಾಗೂ ಪರೀಕ್ಷಾ ಸಿಬ್ಬಂದಿಗಳನ್ನು ಹೊರತುಪಡಿಸಿ ಅನಧಿಕೃತ ವ್ಯಕ್ತಿಗಳು ಸಂಚರಿಸಬಾರದು. ಯಾರೂ ಆಕ್ಷೇಪಾರ್ಹ ವಸ್ತುಗಳನ್ನು ಒಯ್ಯಬಾರದು. ಪರೀಕ್ಷಾ ಕೇಂದ್ರಗಳ ಸುತ್ತ ಮುತ್ತಲಿರುವ ಜೆರಾಕ್ಸ್ ಅಂಗಡಿಗಳನ್ನು ಮುಚ್ಚುವಂತೆ ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಾತಿ ಗಣತಿ ವರದಿ ಕಾರ್ಯರೂಪಕ್ಕೆ ಆಗ್ರಹ




ಸುಬ್ರಹ್ಮಣ್ಯ

ಮೈಸೂರು, ಫೆ.29(ಬಿಎಲ್‌ಯು)– ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಸಲ್ಲಿಸಿರುವ ಜಾತಿವಾರು ಜನಗಣತಿ ವರದಿ ಸ್ವೀಕರಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಈಗ ಸುಮ್ಮನಾಗದೆ, ಪರಿಶೀಲನೆ ನಡೆಸಿ ಶೀಘ್ರವೇ ಕಾರ್ಯರೂಪಕ್ಕೆ ತರಬೇಕು ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಆಗ್ರಹಿಸಿದ್ದಾರೆ.

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿವಾರು ಜನಗಣತಿ) ಸಲ್ಲಿಸಿರುವ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಹಾಗೂ ವರದಿ ಸ್ವೀಕರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಈ ವೇಳೆ ಅವರು ಅಭಿನಂದನೆ ಸಲ್ಲಿಸಿದ್ದಾರೆ.

ಹಿಂದುಳಿದ ವರ್ಗಗಳ ಆಯೋಗವು 2015ರಲ್ಲಿ ಸಮೀಕ್ಷೆ ನಡೆಸಿದೆ. ಇದರಿಂದ ಸಮುದಾಯಗಳ ಈಗಿನ ಸ್ಥಿತಿಗಳಿಗೆ ಸಂಬಂಧಿಸಿದಂತೆ ವೈಜ್ಞಾನಿಕ ವಿಶ್ಲೇಷಣೆ ನಡೆಸಿ, ಜನಸಂಖ್ಯೆ ಪ್ರಮಾಣ ತಿಳಿಯುವುದು ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ನೇತೃತ್ವದ ಅಂದಿನ ಸರ್ಕಾರ ಸಮೀಕ್ಷೆಗೆ ಸೂಚನೆ ನೀಡಿತ್ತು ಎಂದಿದ್ದಾರೆ. ಜಯಪ್ರಕಾಶ್ ಹೆಗ್ಡೆ ಅವರ ಅಧಿಕಾರಾವಧಿ ಗುರುವಾರ ಕೊನೆಗೊಳ್ಳುವ ಹಿನ್ನೆಲೆಯಲ್ಲಿ ಜಾತಿ ಗಣತಿಗೆ ಸಂಬಂಧಿಸಿದ ಕಾಂತರಾಜು ಸಮಿತಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ ಎಂದು ಹೇಳಿದ್ದಾರೆ. ವರದಿ ಪರಿಶೀಲನೆ ನಡೆಸಿ, ಸಿದ್ದರಾಮಯ್ಯ ಇದನ್ನು ಕಾರ್ಯರೂಪಕ್ಕೆ ತಂದರೆ ಹಿಂದುಳಿದ ವರ್ಗಗಳ ಸಮುದಾಯಗಳಿಗೆ ಮತ್ತಷ್ಟು ಅನುಕೂಲವಾಗಲಿದೆ ಎಂದು ಸುಬ್ರಹ್ಮಣ್ಯ ಅಭಿಪ್ರಾಯಪಟ್ಟಿದ್ದಾರೆ.

# ಇಂದು ಸಿಎಂ ಮೈಸೂರು ಪ್ರವಾಸ



ಮೈಸೂರು,ಫೆ.29– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾ.1ರಂದು ಮೈಸೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದು, ಮದ್ಯಾಹ್ನ 2.40 ಗಂಟೆಗೆ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸುವರು.

ನಂತರ ಸಂಜೆ 4 ಗಂಟೆಗೆ ಕಲಾಮಂದಿರದಲ್ಲಿ ಮೈಸೂರಿನ ಪ್ರಗತಿಪರ ಸಂಘಟನೆಗಳ ಒಕ್ಕೂಟಗಳ ವತಿಯಿಂದ ಆಯೋಜಿಸಿರುವ ‘ಪ.ಮಲ್ಲೇಶ್–90 ಭಾರತ ಜನತಂತ್ರದ ಸಮಕಾಲೀನ ತಲ್ಲಣಗಳು’ ರಾಷ್ಟ್ರೀಯ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು, ಸಂಜೆ 5 ಗಂಟೆಗೆ ದಿ. ಶ್ರೀ ರಾಕೇಶ್ ಸಿದ್ದರಾಮಯ್ಯನವರ ಸ್ಮರಣಾರ್ಥ ಎನ್.ಆರ್.ಮೊಹಲ್ಲಾದಲ್ಲಿ ನಿರ್ಮಿಸಿರುವ ಶ್ರೀನಿವಾಸ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಉದ್ಘಾಟನಾ ಸಮಾರಂಭಲ್ಲಿ ಪಾಲ್ಗೊಳ್ಳುವರು. ಸಂಜೆ 6 ಗಂಟೆಗೆ ಯರಗನಹಳ್ಳಿಯಲ್ಲಿರುವ ನಿವೃತ್ತ ಶಿಕ್ಷಕರ ಸದನ ಕಟ್ಟಡದ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಮಾ.2ರಂದು ಬೆಳಗ್ಗೆ 9.30ಕ್ಕೆ ಜಲಪುರಿಯಲ್ಲಿರುವ ಪೊಲೀಸ್ ಅರೋಗ್ಯ ಕೇಂದ್ರ ಕಟ್ಟಡದ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

# ಮೈಸೂರಲ್ಲಿ ನಾಳೆ ಅಶ್ವಮೇಧ ಬಸ್ ಸೇವೆಗೆ ಚಾಲನೆ

ಮೈಸೂರು, ಫೆ29(ಆರ್‌ಕೆ)–ಮೈಸೂರಿನ ಅರಮನೆ ಉತ್ತರ ದ್ವಾರದ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಮಾರ್ಚ್2ರಂದು ಬೆಳಿಗ್ಗೆ 11 ಗಂಟೆಗೆ ಕೆಎಸ್‌ಆರ್‌ಟಿಸಿಯ ‘ಅಶ್ವಮೇಧ’ ಬಸ್‌ಗಳ ಸೇವೆಗೆ ಚಾಲನೆ ನೀಡಲಾಗುವುದು ಎಂದು ಸಾರಿಗೆ ಸಂಸ್ಥೆ ಮೈಸೂರು ನಗರ ವಿಭಾಗಿಯ ನಿಯಂತ್ರಕ ವೀರೇಶ್ ತಿಳಿಸಿದ್ದಾರೆ. ಸಾರಿಗೆ ಸಂಸ್ಥೆಯಿಂದ ಮೈಸೂರು ನಗರ ಘಟಕಕ್ಕೆ 10 ಮತ್ತು ಗ್ರಾಮಾಂತರ ವಿಭಾಗಕ್ಕೆ 15 ‘ಅಶ್ವಮೇಧ’ ಬಸ್‌ಗಳನ್ನು ಮೊದಲ ಹಂತದಲ್ಲಿ ಒದಗಿಸಲಾಗಿದ್ದು, ಅತೀ ಶೀಘ್ರ ಇನ್ನೂ 50 ಬಸ್‌ಗಳನ್ನು ಮಂಜೂರು ಮಾಡಲಾಗುತ್ತದೆ ಎಂದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ಅವರು ಹಸಿರು ನಿಶಾನೆ ತೋರುವ ಮೂಲಕ ಹೊಸ ಮಾದರಿಯ ಬಸ್‌ಗಳ ಸಂಚಾರಕ್ಕೆ ಚಾಲನೆ ನೀಡಲಿದ್ದು, ಸಂಸದರು, ಶಾಸಕರು, ವಿಧಾನಪರಿಷತ್ ಸದಸ್ಯರು ಈ ಸಂದರ್ಭ ಉಪಸ್ಥಿತರಿರುವರು ಎಂದು ವೀರೇಶ್ ತಿಳಿಸಿದರು.

## ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮೈಸೂರು ಜಿಪಂ ಕಚೇರಿಯಲ್ಲಿ

# ಸರ್ಕಾರಿ ಮಹಿಳಾ ಉದ್ಯೋಗಿಗಳಿಗೆ ಆರೋಗ್ಯ ತಪಾಸಣೆ



ಮೈಸೂರಿನ ಜಿಪಂ ಕಚೇರಿಯಲ್ಲಿ ಸರ್ಕಾರಿ ಮಹಿಳಾ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿತ್ತು. ಜಿ.ಪಂ. ಸಿಇಒ ಕೆ.ಎಂ.ಗಾಯತ್ರಿ, ಉಪ ಕಾರ್ಯದರ್ಶಿ ಕೃಷ್ಣಂರಾಜು, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಎಸ್ಪಿ ಸೀಮಾ ಲಾಟ್ಕರ್ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಫೆ29(ಆರ್‌ಕೆ)– ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಜಿಲ್ಲಾ ಪಂಚಾಯಿತಿ ಕಚೇರಿಯಲ್ಲಿ ಇಂದು ಜಿಲ್ಲೆಯ ಸರ್ಕಾರಿ ಇಲಾಖೆಗಳ ಮಹಿಳಾ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿತ್ತು.

ಜಿಪಂ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಆಯೋಜಿಸಿದ್ದ ಶಿಬಿರವನ್ನು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಉದ್ಘಾಟಿಸಿದರು. ನಂತರ ಮಾತನಾಡಿದ ಅವರು, ಮಹಿಳೆಯರಿಗೆ 35 ವರ್ಷಗಳ ಬಳಿಕ ತಾಯ್ತನದ ತರುವಾಯ ಹಲವು ಆರೋಗ್ಯದ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ ಯಾದ್ದರಿಂದ ಆಗಿಂದಾಗ್ಗೆ ವೈದ್ಯರ ಬಳಿ ಆರೋಗ್ಯ ತಪಾಸಣೆ ಮಾಡಿಸಿ ಚಿಕಿತ್ಸೆ ಪಡೆಯಬೇಕು ಎಂದರು.

ಆರೋಗ್ಯದ ಮೇಲಿನ ತಾತ್ಸಾರ, ಕೆಲಸದ ಒತ್ತಡ, ಆಹಾರ ಪದ್ಧತಿ, ಜೀವನ ಶೈಲಿಯಿಂದಾಗಿ ಇತ್ತೀಚಿನ ದಿನಗಳಲ್ಲಿ ಸಕ್ಕರೆ ಖಾಯಿಲೆ, ರಕ್ತದೊತ್ತಡ, ಹೃದಯಾಘಾತ, ಕ್ಯಾನ್ಸರ್‌ನಂತಹ ರೋಗಗಳು ಕಡಿಮೆ ವಯಸ್ಸಿನಲ್ಲೇ ಬಾಧಿಸುವುದೆಂದು, ಮಹಿಳೆ ಆರೋಗ್ಯವಾಗಿದ್ದರೆ ಇಡೀ ಕುಟುಂಬದ ಸದಸ್ಯರು ಆರೋಗ್ಯದಿಂದಿರುವಂತೆ ನೋಡಿಕೊಳ್ಳುತ್ತಾರೆ ಎಂದರು.

ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ ಮಾತನಾಡಿ, ಸರ್ಕಾರದ ವಿವಿಧ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಮಹಿಳಾ ಅಧಿಕಾರಿಗಳು ಹಾಗೂ ಸಿಬ್ಬಂದಿ ತಮ್ಮ ದೈನಂದಿನ ಒತ್ತಡದಿಂದಾಗಿ ತಮ್ಮ ಆರೋಗ್ಯದ ಕಡೆ ಗಮನ ಹರಿಸುವುದಿಲ್ಲವಾದ್ದರಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಂದು ಮಹಿಳಾ ಸರ್ಕಾರಿ ನೌಕರರಿಗೆ ಆರೋಗ್ಯದ ತಪಾಸಣೆ ಮಾಡಿಸುವ ಮೂಲಕ ಅರ್ಥಪೂರ್ಣವಾಗಿ ಆಚರಿಸುತ್ತಿದ್ದೇವೆ ಎಂದರು.

ಎಸ್ಪಿ ಸಿಮಾ ಲಾಟ್ಕರ್, ಜಿಪಂ ಉಪ ಕಾರ್ಯದರ್ಶಿ (ಅಭಿವೃದ್ಧಿ) ಡಾ.ಎಂ.ಕೃಷ್ಣಂರಾಜು, ಉಪಕಾರ್ಯದರ್ಶಿ(ಆಡಳಿತ) ಬಿ.ಸವಿತಾ, ಆರ್‌ಸಿಹೆಚ್ ಅಧಿಕಾರಿ ಡಾ.ಎಂ.ಎಸ್.ಜಯಂತ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಮಹದೇವ್ ಪ್ರಸಾದ್ ಸೇರಿದಂತೆ ಹಲವು ಅಧಿಕಾರಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಮಧ್ಯಾಹ್ನ 3ಗಂಟೆವರೆಗೆ ನಡೆದ ಶಿಬಿರದಲ್ಲಿ 250ಕ್ಕೂ ಹೆಚ್ಚು ಸರ್ಕಾರಿ ಇಲಾಖಾ ಮಹಿಳಾ ಅಧಿಕಾರಿಗಳು ಹಾಗೂ ಸಿಬ್ಬಂದಿ ಆರೋಗ್ಯ ತಪಾಸಣೆ ಮಾಡಿಸಿಕೊಂಡು ಚಿಕಿತ್ಸೆ ಪಡೆದರು.

> “ಹೊರಗಿನಿಂದ ಆರೋಗ್ಯವಂತರಾಗಿ ಕಂಡರೂ, ದೇಹದಲ್ಲಿರುವ ನಾನಾ ಸಮಸ್ಯೆಗೆ ಚಿಕಿತ್ಸೆ ಪಡೆಯುವಲ್ಲಿ ವಿಫಲವಾಗುತ್ತಿರುವುದರಿಂದ ಮುಂದಿನ ದಿನಗಳಲ್ಲಿ ಅದು ದೊಡ್ಡ ಸಮಸ್ಯೆಯಾಗಿ ಪರಿಣಮಿಸುತ್ತದೆ ಆದ್ದರಿಂದ ನಿಯತ ಕಾಲಿಕವಾಗಿ ಎಲ್ಲರೂ ಆರೋಗ್ಯ ತಪಾಸಣೆ ಮಾಡಿಸಿಕೊಂಡು ಚಿಕಿತ್ಸೆ ಪಡೆಯಬೇಕು. –ಕೆ.ಎಂ.ಗಾಯತ್ರಿ, ಜಿಪಂ ಸಿಇಒ

ಮೈಸೂರು ಮಿತ್ರ ಶುಕ್ರವಾರ 1 ಮಾರ್ಚ್ 2024

# ಮೈಷುಗರ್‌ಗೆ ಸಿ.ಡಿ.ಗಂಗಾಧರ್ ಅಧ್ಯಕ್ಷ

- ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದ ಗಂಗಾಧರ್
- ಮುಡಾ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಹೆಚ್ಚಿದ ಪೈಪೋಟಿ
- ಸ್ಥಳೀಯ ಸಂಸ್ಥೆ ನಿರ್ದೇಶಕ ಸ್ಥಾನ ಪಡೆಯಲು ಹಲವರಿಂದ ಕಸರತ್ತು



ಸಿ.ಡಿ.ಗಂಗಾಧರ್

ಮಂಡ್ಯ,ಫೆ.29– ತೀವ್ರ ಕುತೂಹಲ ಕೆರಳಿಸಿದ್ದ ನಿಗಮ ಮಂಡಳಿ ನೇಮಕಾತಿಯ ಎರಡನೇ ಪಟ್ಟಿ ಹೊರಬಿದ್ದಿದ್ದು, ಮಂಡ್ಯ ಮೈಷುಗರ್ ಅಧ್ಯಕ್ಷ ಸ್ಥಾನ ಹಿರಿಯ ಕಾಂಗ್ರೆಸ್ ಮುಖಂಡ ಹಾಗೂ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್ ಪಾಲಾದರೆ, ಉಳಿದ ಪ್ರಮುಖ ನಿಗಮ ಮಂಡಳಿಯಾದ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸ್ಥಾನ ಹಾಗೂ ಗಂಗಾಧರ್‌ರಿಂದ ತೆರವಾಗಲಿರುವ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಭಾರೀ ಪೈಪೋಟಿ ಆರಂಭವಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿರುವ 44 ಮಂದಿ ನಿಗಮ ಮಂಡಳಿ ಸ್ಥಾನಗಳ ಪೈಕಿ ಪ್ರಮುಖ ನಿಗಮ ಮಂಡಳಿಯಾದ ಮೈಷುಗರ್ ಅಧ್ಯಕ್ಷ ಸ್ಥಾನಕ್ಕೆ ಹಲವು ಮಂದಿಯ ಹೆಸರು ಕೇಳಿ ಬಂದಿತ್ತಾದರೂ ಸತತ ಆರೇಳು ವರ್ಷಗಳಿಂದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದ ಹಿರಿಯ ಕಾಂಗ್ರೆಸ್ ಮುಖಂಡ ಸಿ.ಡಿ.ಗಂಗಾಧರ್ ಪಾಲಾಗಿದೆ.

ಕ್ಯಾಬಿನೆಟ್ ದರ್ಜೆ ಸ್ಥಾನಮಾನವಾದ ಮೈಷುಗರ್ ಅಧ್ಯಕ್ಷರಾಗಿ ಮಂಡ್ಯ ಜಿಲ್ಲೆಯ ಹಲವು ಮಂದಿ ನಾಯಕರು ಕಾರ್ಯ ನಿರ್ವಹಿಸಿದ್ದು, ಇದೀಗ ಮಂಡ್ಯ ತಾಲೂಕಿನ ಚಂದಗಾಲು ಗ್ರಾಮದ ಗಂಗಾಧರ್ ಅಧ್ಯಕ್ಷರಾಗಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅವರ ಪರಮಾಪ್ತರಾದ ಗಂಗಾಧರ್ ಅವರ ಹೆಸರನ್ನು ಚಲುವರಾಯಸ್ವಾಮಿ ಅವರು ಸಿಎಂ ಸಿದ್ದರಾಮಯ್ಯಗೆ ಶಿಫಾರಸು ಮಾಡಿದ್ದರು. ಈ ನಿಟ್ಟಿನಲ್ಲಿ ಅವರಿಗೆ ಮೈಷುಗರ್ ಅಧ್ಯಕ್ಷ ಸ್ಥಾನದ ಮಹತ್ವದ ಜವಾಬ್ದಾರಿ ಸಿಕ್ಕಿದೆ.

**ಮುಡಾಗೆ ಯಾರು?:** ಮತ್ತೊಂದು ಪ್ರತಿಷ್ಠಿತ ನಿಗಮ ಮಂಡಳಿಯಾದ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನು ಈ ಬಾರಿಯೇ ಘೋಷಿಸುವ ಸಾಧ್ಯತೆ ಇತ್ತು. ಆದರೆ ಕಾರಣಾಂತರಗಳಿಂದ ಹೆಸರು ಘೋಷಣೆ ಮುಂದೆ ಹೋಗಿದ್ದು, ಈಗಾಗಲೇ ಮೊದಲ ಪಟ್ಟಿಯಲ್ಲಿ ಒಕ್ಕಲಿಗ ಸಮುದಾಯಕ್ಕೆ ಸೇರಿದ ಶಾಸಕ ರಮೇಶ್ ಬಂಡಿಸಿದ್ದೇಗೌಡಗೆ ಚೆಸ್ಕಾಂ ಹಾಗೂ ಈ ಬಾರಿ ಗಂಗಾಧರ್ ಮೈಷುಗರ್ ಸ್ಥಾನ ದೊರೆತಿರುವುದರಿಂದ ಮುಡಾ ಅಧ್ಯಕ್ಷ ಸ್ಥಾನ ಅಲ್ಪಸಂಖ್ಯಾತರ ಪಾಲಾಗಲಿದೆ ಎಂದು ಜಿಲ್ಲಾ ಕಾಂಗ್ರೆಸ್ ಮೂಲಗಳು ಹೇಳುತ್ತಿದ್ದು, ಡಿಸಿಎಂ ಡಿ.ಕೆ.ಶಿವಕುಮಾರ್ ಆಪ್ತ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಸಾದುಲ್ಲಾಖಾನ್ ಹೆಸರು ಅಂತಿಮವಾಗಿದೆ ಎಂದು ಹೇಳಲಾಗುತ್ತಿದೆ.

**ಡಿಸಿಸಿ ಅಧ್ಯಕ್ಷ ಸ್ಥಾನ ಯಾರಿಗೆ?:** ಇನ್ನು ಹಾಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ. ಗಂಗಾಧರ್ ಮೈಷುಗರ್ ಅಧ್ಯಕ್ಷರಾಗಿರುವುದರಿಂದ ಅವರಿಂದ ತೆರವಾಗುವ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಹಲವರ ನಡುವೆ ಪೈಪೋಟಿ ಇದ್ದು, ಹಾಲಿ ಜಿಲ್ಲಾ ಕಾಂಗ್ರೆಸ್ ಕಾರ್ಯಾಧ್ಯಕ್ಷ ಎಂ.ಎಸ್.ಚಿದಂಬರ್ ಹೆಸರು ಪ್ರಬಲವಾಗಿ ಕೇಳಿ ಬರುತ್ತಿದ್ದು, ಅವರ ಹೆಸರೇ ಅಂತಿಮವಾಗುವ ಸಾಧ್ಯತೆ ಇದೆ.

**ಸ್ಥಳೀಯ ಸಂಸ್ಥೆ ನಿರ್ದೇಶಕ ಸ್ಥಾನಕ್ಕೂ ಹಲವರ ಪೈಪೋಟಿ:** ಸ್ಥಳೀಯ ಸಂಸ್ಥೆ ನಿರ್ದೇಶಕ ಸ್ಥಾನಗಳ ಪೈಕಿ ಕಳೆದ ಆರು ತಿಂಗಳ ಹಿಂದಷ್ಟೇ ಪ್ರಮುಖ ನಿರ್ದೇಶಕ ಸ್ಥಾನವಾದ ಡಿಸಿಸಿ ಬ್ಯಾಂಕ್ ನಿರ್ದೇಶಕ ಹುದ್ದೆಗೆ ಶಾಸಕ ರಮೇಶ್ ಬಂಡಿಸಿದ್ದೇಗೌಡರನ್ನು ತಾತ್ಕಾಲಿಕವಾಗಿ ನೇಮಿಸಲಾಗಿತ್ತು ಇದೀಗ ರಮೇಶ್ ಚೆಸ್ಕಾಂ ಅಧ್ಯಕ್ಷರಾಗಿರುವುದರಿಂದ ಆ ಹುದ್ದೆಗೆ ರಾಜೀನಾಮೆ ನೀಡುವ ಸಾಧ್ಯತೆ ಇದ್ದು, ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಸುರೇಶ್ ಹಾಗೂ ಜಿ.ಪಂ. ಮಾಜಿ ಅಧ್ಯಕ್ಷ ಕಂಠಿ ಸುರೇಶ್ ನಡುವೆ ಈ ಸ್ಥಾನಕ್ಕೆ ಪೈಪೋಟಿ ಇದೆ.

ಉಳಿದಂತೆ ನಗರಸಭೆ, ಪುರಸಭೆ, ಪಪಂ, ಸಹಕಾರ ಬ್ಯಾಂಕ್‌ಗಳು, ಎಪಿಎಂಸಿ ಇನ್ನಿತರೆ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷಗಾದಿಗೆ ಹತ್ತಾರು ಮಂದಿ ಪೈಪೋಟಿ ನಡೆಸುತ್ತಿದ್ದು, ಅವುಗಳ ನೇಮಕ ಇನ್ನಷ್ಟೇ ಆಗಬೇಕಿದೆ.

# ದೇಶ, ಭಾಷೆ, ನೆಲದ ವಿಚಾರದಲ್ಲಿ ರಾಜಿ ಇಲ್ಲ

## ಕೃಷಿಕ ಸಮಾಜದ ಕಟ್ಟಡ ಉದ್ಘಾಟಿಸಿ ಸಚಿವ ಎನ್.ಚಲುವರಾಯಸ್ವಾಮಿ ಸ್ಪಷ್ಟನೆ

ಶ್ರೀರಂಗಪಟ್ಟಣ, ಫೆ.29– ದೇಶ, ಭಾಷೆ, ನೆಲದ ವಿಚಾರ ಬಂದರೆ ಯಾವ ಪಕ್ಷವಾಗಲೀ, ಯಾರೇ ಆಗಲೀ ರಾಜಿಯಾಗುವ ಪ್ರಶ್ನೆಯೇ ಇಲ್ಲ. ಸೂಕ್ತ ತನಿಖೆ ನಡೆಸಿ ಕ್ರಮ ಕೈಗೊಳ್ಳುತ್ತೇವೆ ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಭರವಸೆ ನೀಡಿದ್ದಾರೆ.



ಕೃಷಿಕ ಸಮಾಜದ ನೂತನ ಕಟ್ಟಡವನ್ನು ಉದ್ಘಾಟಿಸುತ್ತಿರುವ ಚಲುವರಾಯಸ್ವಾಮಿ.

ಪಟ್ಟಣದ ಕೃಷಿ ಇಲಾಖೆ ಬಳಿ ಪಾಲಹಳ್ಳಿ ಎಸ್.ಜೆ ನಾಗರತ್ನ ಗಿರಿಗೌಡ ಸ್ಮರಣಾರ್ಥ ನಿರ್ಮಾಣಗೊಂಡಿರುವ ತಾಲೂಕು ಕೃಷಿಕ ಸಮಾಜದ ನೂತನ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದ ಅವರು, ದೇಶ ದ್ರೋಹಿಗಳ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಈಗಾಗಲೇ ಗೃಹ ಸಚಿವರು ತಿಳಿಸಿದ್ದಾರೆ. ಬಿಜೆಪಿ ಪಕ್ಷದವರಿಗೆ ತಪ್ಪಿತಸ್ಥರಿಗೆ ಶಿಕ್ಷೆ ಆಗುವುಕ್ಕಿಂತ ಈ ಸನ್ನಿವೇಶವನ್ನು ರಾಜಕೀಯವಾಗಿ ಬಳಸಿಕೊಳ್ಳಲು ಮುಂದಾಗುತ್ತಿದ್ದಾರೆ ಎಂದು ಕಿಡಿಕಾರಿದರು.

**ಎಂಪಿ ಚುನಾವಣೆಗೆ ಸ್ಟಾರ್ ಚಂದ್ರು ಮಂಡ್ಯ ಕಣಕ್ಕೆ:** ಮುಂದಿನ ಲೋಕಸಭಾ ಚುನಾವಣೆಗೆ ಸ್ಟಾರ್ ಚಂದ್ರು ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಲಿದ್ದು, ಈ ಹಿಂದೆ ವಿಧಾನಪರಿಷತ್ತು ಸದಸ್ಯರಾಗಿ ಆಯ್ಕೆಯಾಗಿರುವ ದಿನೇಶ್ ಗೂಳಿಗೌಡ ಕೂಡ ಹೊಸ ಮುಖನೇ ಆಗಿದ್ದರು. ಅವರು ನನಗೂ ಪರಿಚಯ ಇರಲಿಲ್ಲ. ಸ್ಟಾರ್ ಚಂದ್ರು ನಮ್ಮ ಜೊತೆಯಲ್ಲಿ ಇಲ್ಲದಿದ್ದರೂ ಪಕ್ಷಕ್ಕಾಗಿ ದುಡಿದಿದ್ದಾರೆ. ಅವರ ಅಣ್ಣ ಗೌರಿಬಿದನೂರಲ್ಲಿ ಶಾಸಕರಾಗಿ ನಮ್ಮ ಜೊತೆ ಇದ್ದಾರೆ ಎಂದರು.

ಕಾಂಗ್ರೆಸ್‌ನಿಂದಲೇ ಟಿಕೆಟ್ ಕೊಡಬೇಕಿತ್ತು. ಆದರೆ ಹಿರಿಯ ನಾಯಕರು ಇದ್ದ ಕಾರಣ ಅವರಿಗೆ ಟಿಕೆಟ್ ಕೈ ತಪ್ಪಿ ಸ್ವತಂತ್ರ ಅಭ್ಯರ್ಥಿಯಾಗಿ ಗೆದ್ದರೂ ನಮ್ಮ ಜೊತೆ ಇದ್ದಾರೆ. ನಮ್ಮ ಪಕ್ಷಕ್ಕೆ ಅವರ ಕುಟುಂಬ ಸಪೋರ್ಟ್ ಮಾಡಿದೆ ಎಂದು ಸ್ಟಾರ್ ಚಂದ್ರು ಪರ ಮುಖಂಡರೊಂದಿಗೆ ಪ್ರಚಾರ ನಡೆಸಿದರು. ಈ ವೇಳೆ ಶಾಸಕ ಹಾಗೂ ಸೆಸ್ಕ್ ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡ, ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಮಧು ಜಿ.ಮಾದೇಗೌಡ, ಲೋಕಸಭಾ ಸಂಭಾವ್ಯ ಅಭ್ಯರ್ಥಿ ಸ್ಟಾರ್ ಚಂದ್ರು, ಕೃಷಿಕ ಸಮಾಜದ ಅಧ್ಯಕ್ಷ ಡಾ.ಪಿ.ಗಿರಿಗೌಡ, ಪುರಸಭೆ ಸದಸ್ಯ ಎಂ.ಎಲ್.ದಿನೇಶ್ ಸೇರಿದಂತೆ ಕೃಷಿ ಅಧಿಕಾರಿಗಳು, ಸ್ಥಳೀಯ ಮುಖಂಡರು ಹಾಗೂ ಕೃಷಿಕ ಸಮಾಜದ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಕಟ್ಟೇರಿ ಡೇರಿ ಜೆಡಿಎಸ್–ಬಿಜೆಪಿ ಮೈತ್ರಿ ಪಾಲು



ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿಗಳಾದ ಅಧ್ಯಕ್ಷ ಕೆ.ಎನ್.ಅನಂತು, ಉಪಾಧ್ಯಕ್ಷೆ ಶಶಿಕಲಾ ಶ್ರೀಕಂಠ ಅವರನ್ನು ಅಭಿನಂದಿಸುತ್ತಿರುವುದು.

ಪಾಂಡವಪುರ, ಫೆ.29– ತಾಲೂಕಿನ ಕಟ್ಟೇರಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿ ಕೆ.ಎನ್.ಅನಂತು, ಉಪಾಧ್ಯಕ್ಷರಾಗಿ ಶಶಿಕಲಾ ಶ್ರೀಕಂಠ ಅವಿರೋಧವಾಗಿ ಆಯ್ಕೆಯಾದರು.

11 ನಿರ್ದೇಶಕರ ಸಂಖ್ಯಾಬಲ ಹೊಂದಿರುವ ಡೇರಿಯಲ್ಲಿ 8 ಜೆಡಿಎಸ್–ಬಿಜೆಪಿ ಬೆಂಬಲಿತರು, 3 ರೈತಸಂಘ–ಕಾಂಗ್ರೆಸ್ ಬೆಂಬಲಿತ ನಿರ್ದೇಶಕರಿದ್ದಾರೆ. ಅಧ್ಯಕ್ಷ ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಜೆಡಿಎಸ್–ಬಿಜೆಪಿ ಬೆಂಬಲಿತ ಅಭ್ಯರ್ಥಿ ಕೆಎನ್.ಅನಂತು, ಉಪಾಧ್ಯಕ್ಷ ಸ್ಥಾನಕ್ಕೆ ಶಶಿಕಲಾ ಶ್ರೀಕಂಠ ಹೊರತುಪಡಿಸಿ ಯಾರೂ ನಾಮಪತ್ರವನ್ನು ಸಲ್ಲಿಸಿದ ಹಿನ್ನೆಲೆಯಲ್ಲಿ ಸಂಘದ ಅಧ್ಯಕ್ಷರನ್ನಾಗಿ ಕೆ.ಎನ್. ಅನಂತು, ಉಪಾಧ್ಯಕ್ಷರಾಗಿ ಶಶಿಕಲಾ ಶ್ರೀಕಂಠ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ಎಚ್.ಎಂ.ಶೋಭಾ ಅವರು ಘೋಷಿಸಿದರು.

ಅಧ್ಯಕ್ಷ ಕೆ.ಎನ್.ಅನಂತು, ಉಪಾಧ್ಯಕ್ಷೆ ಶಶಿಕಲಾ ಶ್ರೀಕಂಠ ಅವರನ್ನು ಎಲ್ಲಾ ನಿರ್ದೇಶಕರು ಅಭಿನಂದಿಸಿದರು. ನಿರ್ದೇಶಕರಾದ ಕೆ.ವಿ.ರಘು, ಕೆ.ಜೆ.ರಾಮ ಚಂದ್ರು, ಕೆ.ಎಸ್.ಸತೀಶ್, ಕೆ.ಎಸ್.ರಜಿನಿ, ಕೆ.ಬಿ.ಅನಿಲ್‌ಕುಮಾರ್, ಕೆ.ಪಿ.ನಾಗರಾಜು, ಕಾರ್ಯದರ್ಶಿ ದೇವರಾಜು, ಸಿಬ್ಬಂದಿ ಸುದೀಪ್, ಮುಖಂಡರಾದ ಕೆ.ಎಂ.ನಾಗೇಗೌಡ, ಗ್ರಾಪಂ ಸದಸ್ಯ ಕೆ.ಜೆ.ರಾಜೇಂದ್ರ ಕುಮಾರ್, ಚಂದ್ರಶೇಖರ್, ಕಾಳೇಗೌಡ, ಇಂದ್ರ ಕುಮಾರ್, ಪ್ರಸನ್ನ, ಕೃಷ್ಣೇಗೌಡ, ಶಶಿಕುಮಾರ್, ನಿರಂಜನ್‌ಬಾಬು ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

## ಮಾ.5, ಮಹಿಳೆಯರಿಗೆ ಕ್ರೀಡಾಕೂಟ

**ಮಂಡ್ಯ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೆಹರು ಯುವಕೇಂದ್ರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕಾವೇರಿ ಜಿಲ್ಲಾ ಸ್ತ್ರೀ ಶಕ್ತಿ ಒಕ್ಕೂಟ ಹಾಗೂ ಜಿಲ್ಲೆಯಲ್ಲಿರುವ ಎಲ್ಲಾ ಮಹಿಳಾ ಸಂಘ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ಮಾ.5 ರಂದು ಬೆಳಿಗ್ಗೆ 9 ಗಂಟೆಗೆ ಮಹಿಳಾ ಕ್ರೀಡಾಕೂಟ ಸ್ಪರ್ಧೆಯನ್ನು ಮಂಡ್ಯ ಸರ್ ಎಂ.ವಿಶ್ವೇಶರಯ್ಯ ಒಳಾಂಗಣ ಕ್ರೀಡಾಂಗಣದ ಆವರಣದಲ್ಲಿ ಆಯೋಜಿಸಲಾಗಿದೆ.

## ನಾಳೆಯಿಂದ ಬೂದನೂರು ಉತ್ಸವ

**ಮಂಡ್ಯ:** ಬೂದನೂರು ಉತ್ಸವವು ಮಾ.2 ಮತ್ತು 3ರಂದು ನಡೆಯಲಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಪ್ರಾಸೋದ್ಯಮ ಇಲಾಖೆಯ ಸಹಯೋಗದಲ್ಲಿ ಮಾ.2 ಶನಿವಾರ ಹಾಗೂ 3 ಭಾನುವಾರದಂದು ಬೂದನೂರು ಉತ್ಸವ ಕಾರ್ಯಕ್ರಮವನ್ನು ಸಂಜೆ 5 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ನಗರ ಅಭಿವೃದ್ಧಿ ಸಚಿವ ಬೈರತಿ ಸುರೇಶ್, ಸಹಕಾರ ಸಚಿವ ರಾಜಣ್ಣ, ಶಾಸಕರಾದ ಮರಿತಿಬ್ಬೇಗೌಡ, ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ಪಿ.ಎಂ. ನರೇಂದ್ರಸ್ವಾಮಿ, ರಮೇಶ್ ಬಂಡಿಸಿದ್ದೇಗೌಡ, ದರ್ಶನ್ ಪುಟ್ಟಣ್ಣಯ್ಯ, ಕೆ.ಎಂ.ಉದಯ್, ಎಚ್.ಟಿ.ಮಂಜು ಅವರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿದೆ.

ಮಾ.3 ರಂದು ಸಂಜೆ 5 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳ ಸಮಾರೋಪ ಸಮಾರಂಭ ಕಾರ್ಯಕ್ರಮವು ನಡೆಯಲಿದೆ. 6 ಗಂಟೆಗೆ ಶಾಲಾ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದೆ. 6.15ಕ್ಕೆ ಸ್ಥಳೀಯ ಕಲಾ ತಂಡದವರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದೆ. 7.30 ಗಂಟೆಗೆ ಅರ್ಜುನ್ ಜನ್ಯ ಮತ್ತು ತಂಡದವರಿಂದ ರಸಮಂಜರಿ ಕಾರ್ಯಕ್ರಮ ನಡೆಯಲಿದೆ.

# ಅಪ್ರಾಪ್ತೆ ಮೇಲೆ ಅತ್ಯಾಚಾರ: ಆರೋಪಿಗೆ 17 ವರ್ಷ ಶಿಕ್ಷೆ

ಮಂಡ್ಯ, ಫೆ.29– ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರವೆಸಗಿದ ಆರೋಪಿಗೆ 17 ವರ್ಷ ಶಿಕ್ಷೆ ಹಾಗೂ ಎಪ್ಪತ್ತು ಸಾವಿರ ರೂ. ದಂಡ ವಿಧಿಸಿ ಮಂಡ್ಯ ಅಧಿಕ ಸೆಷನ್ ಮತ್ತು ತ್ವರಿತಗತಿ ನ್ಯಾಯಾಲಯದ ವಿಶೇಷ ನ್ಯಾಯಾಧೀಶರಾದ ಕೆ.ಎ. ನಾಗಜ್ಯೋತಿ ಅವರು ತೀರ್ಪು ನೀಡಿದ್ದಾರೆ.

ನಾಗಮಂಗಲ ತಾಲೂಕಿನ ಕೆ.ಹೊಸಳ್ಳಿ ಗ್ರಾಮ. ಹಾಲಿ ವಾಸ: ಮಂಡ್ಯ ತಾಲೂಕಿನ ಸಾತನೂರು ಗ್ರಾಮದ ಲೇಟ್ ಗಂಗಾಧರ ಅವರ ಪುತ್ರ ಸಂಪತ್ ಕೆ.ಜಿ. ಶಿಕ್ಷೆಗೆ ಒಳಗಾದ ಆರೋಪಿ. ಆರೋಪಿ ಸಂಪತ್ 13 ವರ್ಷದ ಅಪ್ರಾಪ್ತ ಬಾಲಕಿ ಶಾಲೆಗೆ ಹೋಗಿ ಬರುವುದನ್ನು ನೋಡಿಕೊಂಡಿದ್ದು, ಎಂದಿನಂತೆ ಅಪ್ರಾಪ್ತ ಬಾಲಕಿ 2015 ನ.6 ರಂದು ಬೆಳಿಗ್ಗೆ ಶಾಲೆಗೆ ಹೋಗಿ ವಾಪಸ್ ಬರುವಾಗ ಮಂಡ್ಯದ ಕಾಳಿಕಾಂಬ ದೇವಸ್ಥಾನದ ಹತ್ತಿರ ಮೋಟಾರ್ ಸೈಕಲ್‌ನಲ್ಲಿ ಬಂದು ತಂಗಿಗೆ ಸೈಕಲ್ ತೆಗೆದುಕೊಂಡಿದ್ದೇನೆ. ಅದನ್ನು ಮನೆಗೆ ತೆಗೆದುಕೊಂಡು ಹೋಗಲು ಸಹಾಯ ಮಾಡು ಎಂದು ಹೇಳಿ ಸೈಕಲನ್ನು ದೇವಸ್ಥಾನದ ಕಾಂಪೌಂಡ್ ಒಳಗೆ ನಿಲ್ಲಿಸಿ ಬಾಲಕಿಯನ್ನು ಬಲವಂತದಿಂದ ಮಂಡ್ಯ ದಿಂದ ಸುಮಾರು 8–10 ಕಿ.ಮೀ. ದೂರದಲ್ಲಿರುವ ಕೆರಗೋಡು ಹೋಬಳಿ ಹಂಪಾಪುರದ ಬಳಿ ಇರುವ ಅರಣ್ಯ ಪ್ರದೇಶಕ್ಕೆ ಕರೆದೊಯ್ದು ಚಾಕು ತೋರಿಸಿ ಹೆದರಿಸಿ ಅಪ್ರಾಪ್ತ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ್ದ. ಮನೆಯವರ ದೂರಿನ ಮೇರೆಗೆ ಅಂದಿನ ಪಿಎಸ್‌ಐ ಮಂಡ್ಯ ಪೂರ್ವ ಪೊಲೀಸ್ ಠಾಣೆಯಲ್ಲಿ ಮೊ.ನಂ.68/2016 ಕಲಂ 394 ಪ್ರಕರಣ ದಾಖಲಿಸಿ ಆರೋಪಿಯನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದಾಗ ಈ ಪ್ರಕರಣ ಬೆಳಕಿಗೆ ಬಂದಿತು.

ನಂತರ ಪ್ರಕರಣವನ್ನು ಕೆರಗೋಡು ಪೊಲೀಸ್ ಠಾಣೆಗೆ ವರ್ಗಾಯಿಸಿ ಪೋಕ್ಸೋ ಕಾಯ್ದೆ ಅಡಿ ಅಂದಿನ ಸರ್ಕಲ್ ಇನ್‌ಸ್ಪೆಕ್ಟರ್ ಸುರೇಶ್‌ಕುಮಾರ್.ಬಿ.ಕೆ. ತನಿಖೆಯನ್ನು ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾ ರೋಪಣ ಪತ್ರವನ್ನು ಸಲ್ಲಿಸಿದ್ದರು.

ವಿಶೇಷ ನ್ಯಾಯಾಧೀಶರಾದ ನಾಗಜ್ಯೋತಿ. ಕೆ.ಎಂ. ಅವರ ಮುಂದೆ ವಿಚಾರಣೆ ನಡೆದು ಆರೋಪ ಸಾಬೀತಾದ ಹಿನ್ನೆಲೆ ಅಂತಿಮ ತೀರ್ಪನ್ನು ಪ್ರಕಟಿಸಿ ಆರೋಪಿ ಸಂಪತ್‌ಗೆ ಶಿಕ್ಷೆಯನ್ನು ವಿಧಿಸಿ ತೀರ್ಪು ನೀಡಿರುತ್ತಾರೆ.

ಅಭಿಯೋಜನೆಯ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕರಾದ ಹೆಬ್ಬಕವಾಡಿ ನಾಗರಾಜು ವಾದ ಮಂಡಿಸಿದ್ದರು ಎಂದು ಮಂಡ್ಯ 2ನೇ ವಿಶೇಷ ಶೀಘ್ರಗತಿ ನ್ಯಾಯಾಲಯದ ವಿಶೇಷ ಸರ್ಕಾರಿ ಅಭಿಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬಲಮುರಿಯಲ್ಲಿ ಬೆಂಗಳೂರಿನ ಯುವಕ ಜಲ ಸಮಾಧಿ

**ಶ್ರೀರಂಗಪಟ್ಟಣ:** ಬೆಳಗೊಳ ಗ್ರಾಮದ ಬಳಿಯ ಬಲಮುರಿ ಪ್ರವಾಸಿ ತಾಣದಲ್ಲಿ ಕಾವೇರಿ ನದಿಯಲ್ಲಿ ಈಜಲು ಹೋದ ಯುವಕನೋರ್ವ ಸಾವನ್ನಪ್ಪಿರುವ ಘಟನೆ ಸಂಭವಿಸಿದೆ.

ವಿನಯ್.ಎಸ್(22) ಎಂಬಾತನೇ ನೀರಿನಲ್ಲಿ ಮುಳಗಿ ಸಾವನಪ್ಪಿದ ಯುವಕ. ಬೆಂಗಳೂರು ಬನ್ನೇರುಘಟ್ಟ ನಿವಾಸಿ ವಿನಯ್.ಎಸ್ ವೃತ್ತಿಯಲ್ಲಿ ಫ್ಲಿಪ್ ಕಾರ್ಟ್‌ನಲ್ಲಿ ಕೆಲಸ ಮಾಡುತ್ತಿದ್ದು, ಗುರುವಾರ ಸಂಜೆ ತನ್ನ ನಾಲ್ವರು ಸ್ನೇಹಿತರ ಜೊತೆ ಬಲಮರಿ ಪ್ರವಾಸಿ ತಾಣಕ್ಕೆ ಬಂದು ಇಲ್ಲಿನ ಕಾವೇರಿ ನದಿಯಲ್ಲಿ ಈಜುತ್ತಿದ್ದ ಸಂದರ್ಭದಲ್ಲಿ ಮುಳಗಿ ಸಾವನಪ್ಪಿದ್ದು, ಈತನ ಸ್ನೇಹಿತರು ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ಕೆ.ಆರ್.ಸಾಗರ ಪೊಲೀಸರು ಬೇಟಿ ನೀಡಿ ಪರಿಶೀಲನೆ ನಡೆಸಿದರು. ಮೃತ ವಿನಯ್ ತಂದೆ ಶೇಖರ್ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಗುರುವಾರ ಬೆಳಗ್ಗೆ ಈಜುಗಾರರ ಸಹಾಯದಿಂದ ಶವವನ್ನು ಹೊರ ತೆಗೆದು ಮೈಸೂರು ಮೆಡಿಕಲ್ ಕಾಲೇಜು ಶವಾಗಾರದಲ್ಲಿ ಶವಪರೀಕ್ಷೆ ನಡೆಸಿ ಮೃತರ ಸಂಬಂಧಿಕರಿಗೆ ನೀಡಲಾಯಿತು.



ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ನೇಮಕಗೊಂಡಿರುವ ಮೈಸೂರು ಜಿಪಂ ಮಾಜಿ ಅಧ್ಯಕ್ಷ ಕೆ. ಮರೀಗೌಡರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಗುರುವಾರ ಬೆಂಗಳೂರಿನಲ್ಲಿ ಭೇಟಿ ಮಾಡಿ, ಅಭಿನಂದಿಸಿ, ಕೃತಜ್ಞತೆ ಸಲ್ಲಿಸಿದರು.

# ಹಿಂದುಳಿದ ವರ್ಗಗಳ ಆಯೋಗದ ವರದಿಗೆ ಆಡಳಿತ ಪಕ್ಷದಲ್ಲೇ ಅಪಸ್ವರ

ಬೆಂಗಳೂರು, ಫೆ.29–ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಅವರು ಗುರುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲ್ಲಿಸಿರುವ ಜಾತಿ ಗಣತಿ ವರದಿಗೆ ಆಡಳಿತಾರೂಢ ಕಾಂಗ್ರೆಸ್‌ನ ಕೆಲ ಸಚಿವರಿಂದಲೇ ಆಕ್ಷೇಪ ವ್ಯಕ್ತವಾಗಿದೆ.

ಜಾತಿ ಗಣತಿ ವರದಿಗೆ ವೀರಶೈವ ಲಿಂಗಾಯತರು, ಒಕ್ಕಲಿಗರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು. ಬಿಜೆಪಿ ಮತ್ತು ಜೆಡಿಎಸ್ ಕೂಡ ಈ ವರದಿಯನ್ನು ವಿರೋಧಿಸಿದ್ದವು. ಕಾಂತರಾಜು ಅವರ ನೇತೃತ್ವದಲ್ಲಿ ನಡೆದ ಜಾತೀವಾರು ಸಮೀಕ್ಷೆ ಅವೈಜ್ಞಾನಿಕವಾಗಿದೆ. ಇದರಿಂದಾಗಿ ವೀರಶೈವ ಲಿಂಗಾಯತರು ಮತ್ತು ಒಕ್ಕಲಿಗರಿಗೆ ಅನ್ಯಾಯವಾಗುತ್ತದೆ ಎಂಬುದು ಅವರ ವಾದವಾಗಿತ್ತು. ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷರಾಗಿರುವ ಕಾಂಗ್ರೆಸ್‌ನ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರು ತೀವ್ರ ವಿರೋಧ ವ್ಯಕ್ತಪಡಿಸಿದ್ದರು.

ಇಂದು ಮುಖ್ಯಮಂತ್ರಿಗಳು ವರದಿಯನ್ನು ಸ್ವೀಕರಿಸಿದ ಬೆನ್ನಲ್ಲೇ ಸಚಿವರಾದ ವಿನಯ್ ಕುಲಕರ್ಣಿ, ಎಂ.ಬಿ.ಪಾಟೀಲ್ ಮತ್ತು ಲಕ್ಷ್ಮೀ ಹೆಬ್ಬಾಳ್ಕರ್ ಈ ವರದಿ ಅನುಷ್ಠಾನಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಮತ್ತೊಂದೆಡೆ ಸಚಿವರಾದ ಪ್ರಿಯಾಂಕ್ ಖರ್ಗೆ ಮತ್ತು ಶಿವರಾಜ್ ತಂಗಡಗಿ ಅವರು ವರದಿಯಲ್ಲಿ ಏನಿದೆ ಎಂಬುದೇ ಗೊತ್ತಿಲ್ಲದಿರುವಾಗ ಅದನ್ನು ವಿರೋಧಿಸುವುದು ಸರಿಯಲ್ಲ. ವರದಿಯಲ್ಲಿರುವ ಅಂಶಗಳನ್ನು ತಿಳಿದುಕೊಂಡು ಅದರಲ್ಲಿ ಅವೈಜ್ಞಾನಿಕವಾಗಿ ಅಂಶಗಳಿದ್ದರೆ ಸರಿಪಡಿಸಬಹುದು ಎಂದಿದ್ದಾರೆ.

ಮೂರನೇ ಪುಟದಿಂದ

## ಆರು ಮಂದಿ ದುಷ್ಕರ್ಮಿಗಳ ಸೆರೆ

ಸತೀಶ್‌ಚಂದ್ರ ಅವರ ಮೇಲೆರಗಿದ ಈ ದುಷ್ಕರ್ಮಿಗಳು ಕ್ಷುಲ್ಲಕ ಕಾರಣಕ್ಕೆ ಚಾಕುವಿನಿಂದ ಇರಿದು ಗಾಯಗೊಳಿಸಿದ್ದರು. ಗಾಯಗೊಂಡು ರಕ್ತಸುರಿಯುತ್ತಿದ್ದರೂ ಇಬ್ಬರನ್ನು ಹಿಡಿಯುವಲ್ಲಿ ಸತೀಶ್‌ಚಂದ್ರ ಯಶಸ್ವಿಯಾಗಿದ್ದರು. ನಂತರ 24 ಗಂಟೆಯೊಳಗೆ ರೈಲ್ವೇ ಪೊಲೀಸರು ಪರಾರಿಯಾಗಿದ್ದ ಇತರ ನಾಲ್ವರನ್ನು ಬಂಧಿಸಿದ್ದಾರೆ.

ರೈಲಿನ ಎಸ್–5 ಬೋಗಿಯ ಶೌಚಾಲಯದ ಬಳಿ ನಿಂತು ಈ 6 ಮಂದಿ ಯುವಕರು ಪ್ರಯಾಣೀಕರ ಹೊಂಚುಹಾಕುತ್ತಿದ್ದರು. ಇವರಲ್ಲಿ ಇಬ್ಬರು ಫುಟ್‌ಬೋರ್ಡ್ ಮೇಲೆ ನಿಂತು ಧೂಮಪಾನ ಮಾಡುತ್ತಿರುವುದು ಹಾಗೂ ಉಳಿದವರು ಪ್ರಯಾಣಿಕರ ಚಲನ–ವಲನಗಳ ಗಮನಿಸುತ್ತಿರುವುದನ್ನು ಸತೀಶ್‌ಚಂದ್ರ ನೋಡಿದ್ದಾರೆ.

ಇವರಲ್ಲಿ ಇಬ್ಬರು ಶೌಚಾಲಯಕ್ಕೆ ಹೋಗುವ ಪ್ರಯಾಣಿಕರಿಗೆ ಕಿರಿಕಿರಿ ಉಂಟು ಮಾಡುತ್ತಿದ್ದರಿಂದ ಅವರ ಬಳಿ ಹೋಗಿ, ನಾನು ಕಾನ್‌ಸ್ಟೇಬಲ್ ಸತೀಶ್‌ಚಂದ್ರ ಎಂದು ಪರಿಚಯಿಸಿಕೊಂಡು ಸಹ ಪ್ರಯಾಣಿಕರಿಗೆ ತೊಂದರೆ ಕೊಡಬೇಡಿ ಎಂದು ಸಲಹೆ ನೀಡಿದ್ದಾರೆ. ಆ ವೇಳೆ ಯುವಕರು ಅವರೊಂದಿಗೆ ವಾದಕ್ಕಿಳಿದು, ಮಾತಿನ ಚಕಮಕಿ ನಡೆಸಿ ಕೊನೆಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಅಸಭ್ಯವಾಗಿ ವರ್ತಿಸ ತೊಡಗಿದಾಗ ಪ್ರಯಾಣಿಕರು ಸತೀಶ್‌ಚಂದ್ರ ಪರ ನಿಂತಿದ್ದಾರೆ. ಆ ವೇಳೆಗಾಗಲೇ ರೈಲು ಮದ್ದೂರು ತಲುಪುತ್ತಿದ್ದಂತೆ ಪರಿಸ್ಥಿತಿ ಕೈಮೀರುತ್ತಿದ್ದರಿಂದ ಮದ್ದೂರು ರೈಲ್ವೇ ಪೊಲೀಸರಿಗೆ ವಿಷಯ ಮುಟ್ಟಿಸಿದರು. ಎಚ್ಚೆತ್ತ ಖದೀಮರು ಪರಾರಿಯಾಗಲೆತ್ನಿಸಿದರು. ಆ ಪೈಕಿ ಓರ್ವ ತನ್ನ ಬಳಿ ಇದ್ದ ಚಾಕುವಿನಿಂದ ಸತೀಶ್‌ಚಂದ್ರ ಅವರ ಬೆನ್ನಿನ ಭಾಗಕ್ಕೆ ಇರಿದು ಓಡಿ ಹೋಗಲೆತ್ನಿಸಿದ್ದಾನೆ, ಗಾಯಗೊಂಡು ರಕ್ತ ಸುರಿಯುತ್ತಿದ್ದರೂ ಪ್ರಯಾಣಿಕರ ಸಹಾಯದಿಂದ ಇಬ್ಬರನ್ನು ಹಿಡಿದು ಮದ್ದೂರು ರೈಲ್ವೇ ಪೊಲೀಸರಿಗೆ ಒಪ್ಪಿಸುವಲ್ಲಿ ಸತೀಶ್‌ಚಂದ್ರ ಯಶಸ್ವಿಯಾದರು. ಗಾಯಗೊಂಡ ಕಾನ್‌ಸ್ಟೇಬಲ್ ಸತೀಶ್‌ಚಂದ್ರರನ್ನು ಮದ್ದೂರಿನ ಕೆ.ಗುರುಶಾಂತಪ್ಪ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಪ್ರಕರಣ ದಾಖಲಿಸಿಕೊಂಡ ಮೈಸೂರು ರೈಲ್ವೇ ಪೊಲೀಸರು, ಪರಾರಿಯಾಗಿದ್ದ ನಾಲ್ವರನ್ನು 24 ಗಂಟೆಯೊಳಗೆ ಬಂಧಿಸಿದ್ದಾರೆ. ತೀವ್ರ ವಿಚಾರಣೆಗೊಳಪಡಿಸಿದ ಬಳಿಕ ನ್ಯಾಯಾಧೀಶರ ಮುಂದೆ ಹಾಜರು ಪಡಿಸಲಾಗಿ 6 ಮಂದಿಯನ್ನು ಮಾರ್ಚ್ 11 ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

### ಕೆಪಿಎಂಇ ಕಾಯ್ದೆ ಉಲ್ಲಂಘನೆ ಹಿನ್ನೆಲೆಯಲ್ಲಿ

# ಸರ್ಕಾರಿ ಆಸ್ಪತ್ರೆಗಳ 200 ಮೀಟರ್ ಅಂತರದ ಖಾಸಗಿ ಲ್ಯಾಬ್ ಮುಚ್ಚಿಸಿ

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತರ ಆದೇಶ

- ಮಾರ್ಚ್ 30ರೊಳಗೆ ವರದಿ ನೀಡಲು ಸೂಚನೆ
- ಇನ್ನು ಮುಂದೆ ಕಟ್ಟು ನಿಟ್ಟಿನ ನಿಯಮ ಪಾಲಿಸಲು ಕಟ್ಟಾಜ್ಞೆ

ಮೈಸೂರು, ಫೆ.29(ಬಿಎಲ್‌ಯು)– ಮೈಸೂರು, ಮಂಡ್ಯ, ಚಾಮರಾಜನಗರ ಸೇರಿದಂತೆ ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳ 200 ಮೀಟರ್ ಅಂತರದಲ್ಲಿರುವ ಖಾಸಗಿ ಚಿಕಿತ್ಸಾ ಪ್ರಯೋಗಾಲಯಗಳಿದ್ದರೆ, ಕೆಪಿಎಂಇ ಕಾಯ್ದೆ ಉಲ್ಲಂಘನೆ ಆಗುವುದರಿಂದ ಮಾರ್ಚ್ 30ರೊಳಗೆ ಇವುಗಳನ್ನು ಮುಚ್ಚಿಸುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತರು ಆದೇಶ ನೀಡಿದ್ದಾರೆ.

ಸರ್ಕಾರಿ ಆಸ್ಪತ್ರೆಯಿಂದ 200 ಮೀಟರ್ ಅಂತರದಲ್ಲಿ ಯಾವುದೇ ಹೊಸ ಖಾಸಗಿ ಚಿಕಿತ್ಸಾ ಪ್ರಯೋಗಾಲಯಕ್ಕೆ ಅನುಮತಿ ನೀಡುವಂತಿಲ್ಲ. ಆದರೂ ಕೆಲವು ಕಡೆ ಖಾಸಗಿ ಲ್ಯಾಬೋರೇಟರಿಗಳನ್ನು ತೆರೆಯಲಾಗಿದೆ. ಈ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದ ಹಿನ್ನೆಲೆ ಸರ್ಕಾರ ಈ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ.

ಈ ಸಂಬಂಧ ಸುತ್ತೋಲೆ ಹೊರಡಿಸಿರುವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತರು ಯಾವ ನಿಯಮದಡಿ, ಯಾವ ರೀತಿಯ ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದ್ದಾರೆ.

ಕೆಪಿಎಂಇ(ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯ್ದೆ) ತಿದ್ದುಪಡಿ ಅಧಿನಿಯಮ, 2017ರ ಸೆಕ್ಷನ್ 6ರ ಪ್ರಕಾರ ಏಪ್ರಿಲ್ 4, 2019 ರಿಂದ ಜಾರಿಗೆ ಬರುವಂತೆ ಸರ್ಕಾರಿ ಆಸ್ಪತ್ರೆಗಳು(ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ಸ್ಥಳೀಯ ನಿಯಮಗಳ ಒಡೆತನ ಹೊಂದಿರುವ, ನಿಯಂತ್ರಣ ಹೊಂದಿರುವ, ಸೊಸೈಟಿ ಅಥವಾ ನ್ಯಾಸ, ಸ್ವಾಯತ್ತ ಸಂಸ್ಥೆಯಿಂದ ಪರಿವರ್ತಿಸಲಾದ ಅಥವಾ ನಿರ್ವಹಿಸಲಾದ ಆಸ್ಪತ್ರೆ) 200 ಮೀಟರ್ ಅಂತರದೊಳಗೆ ಯಾವುದೇ ಹೊಸ ಖಾಸಗಿ ಚಿಕಿತ್ಸಾ ಪ್ರಯೋಗಾಲಯಕ್ಕೆ ಅನುಮತಿ ನೀಡುವಂತಿಲ್ಲ. ಆದರೂ ಬಹಳಷ್ಟು ಕಡೆ ಖಾಸಗಿ ಲ್ಯಾಬೋರೇಟರಿಗಳು ತಲೆ ಎತ್ತಿವೆ ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಈ ಬಗ್ಗೆ ಪರಿಶೀಲನೆ ನಡೆಸಿ ಕೆಪಿಎಂಇ ಅಧಿನಿಯಮ 2007ರ ಸೆಕ್ಷನ್(22)ರ ಪ್ರಕಾರ ಸರ್ಕಾರಿ ಆಸ್ಪತ್ರೆಗಳ 200 ಮೀಟರ್ ಅಂತರದಲ್ಲಿರುವ ಖಾಸಗಿ ಲ್ಯಾಬೋರೇಟರಿಗಳನ್ನು ಮುಚ್ಚಿಸುವಂತೆ ಜಿಲ್ಲಾಧಿಕಾರಿಗಳು (ಅಧ್ಯಕ್ಷರು, ನೋಂದಣಿ ಮತ್ತು ಕುಂದು ಕೊರತೆ ನಿವಾರಣಾ ಪ್ರಾಧಿಕಾರ) ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಈಗಾಗಲೇ ಆದೇಶ ನೀಡಲಾಗಿತ್ತು. ಆದರೆ ಈ ತನಕ ಸರ್ಕಾರ ನೀಡಿದ್ದ ಆದೇಶದಂತೆ ಯಾವುದೇ ಜಿಲ್ಲೆಯಲ್ಲೂ, ಯಾವ ಲ್ಯಾಬೋರೇಟರಿಗಳಲ್ಲಿ ಕ್ರಮ ಕೈಗೊಂಡಿಲ್ಲ ಎಂದು ಹೇಳಲಾಗಿದೆ.

ಈ ಹಿನ್ನೆಲೆಯಲ್ಲಿ ಏಪ್ರಿಲ್ 4, 2019ರ ನಂತರ ತೆರೆದಿರುವ ಖಾಸಗಿ ಪ್ರಯೋಗಾಲಯಗಳ ಬಗ್ಗೆ ಪರಿಶೀಲನೆ ನಡೆಸಬೇಕು. ಕೆಪಿಎಂಇ ಅಧಿನಿಯಮ 2007ರ ಸೆಕ್ಷನ್(22)ರ ಪ್ರಕಾರ ಈ ಪ್ರಯೋಗಾಲಯಗಳು ನಿಯಮ ಉಲ್ಲಂಘನೆ ಮಾಡಿದ್ದರೆ ಇವುಗಳನ್ನು ಮುಚ್ಚಿಸುವಂತೆ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತರು ಆದೇಶ ನೀಡಿದ್ದಾರೆ.

ಈ ಬಗ್ಗೆ ಕೈಗೊಂಡಿರುವ ಕ್ರಮದ ಕುರಿತಂತೆ ಮಾರ್ಚ್ 30ರೊಳಗೆ ವರದಿ ನೀಡುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಇನ್ನು ಮುಂದೆ ಸರ್ಕಾರಿ ಆಸ್ಪತ್ರೆಗಳ 200 ಮೀಟರ್ ಅಂತರದಲ್ಲಿ ಯಾವುದೇ ಖಾಸಗಿ ಲ್ಯಾಬೋರೇಟರಿಗಳಿಗೆ ಅನುಮತಿ ನೀಡುವಂತಿಲ್ಲ ಎಂದು ಆಯುಕ್ತರು ಕಟ್ಟುನಿಟ್ಟಿನ ಆದೇಶ ನೀಡಿದ್ದಾರೆ.

### ಮಾರ್ಚ್ 10ರ ನಂತರ ಸರ್ವೆ

ಮೈಸೂರಿನ ಸರ್ಕಾರಿ ಆಸ್ಪತ್ರೆಗಳ 200 ಮೀಟರ್ ಅಂತರದಲ್ಲಿರುವ ಖಾಸಗಿ ಲ್ಯಾಬೋರೇಟರಿಗಳು ಕೆಪಿಎಂಇ ಕಾಯ್ದೆ ಉಲ್ಲಂಘನೆ ಮಾಡಿದೆಯೇ ಎಂಬ ಬಗ್ಗೆ ಮಾರ್ಚ್ 10ರಿಂದ ಸರ್ವೆ ಆರಂಭಿಸಲಾಗುವುದು. ಈ ಬಗ್ಗೆ ಸ್ಥಳ ಪರಿಶೀಲನೆ ನಡೆಸಿ, ದಾಖಲಾತಿಗಳನ್ನು ಪರಿಶೀಲನೆ ಮಾಡುವಂತೆ ತಾಲೂಕು ಆರೋಗ್ಯಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಪಲ್ಸ್ ಪೋಲಿಯೊ ಲಸಿಕೆ, ಗ್ಯಾರಂಟಿ ಸರ್ವೆ ಸೇರಿದಂತೆ ಹಲವು ಕಾರ್ಯಗಳ ಒತ್ತಡದ ಹಿನ್ನೆಲೆ ಮಾರ್ಚ್ 10ರ ನಂತರ ಈ ಸರ್ವೆ ಆರಂಭಿಸಲಾಗುವುದು.



- ಡಾ. ಕುಮಾರಸ್ವಾಮಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ

# ಪಡಿತರ ವಿತರಕರಿಗೆ ಪ್ರತಿ ಕೆಜಿ ಅಕ್ಕಿ ಕಮಿಷನ್ ಮೊತ್ತ ಒಂದೂವರೆ ರೂ.ಗೆ ಹೆಚ್ಚಳ: ಸಿಎಂ ಘೋಷಣೆ

ಬೆಂಗಳೂರು, ಫೆ.29(ಕೆಎಂಶಿ)–ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ಆಹಾರಧಾನ್ಯ ವಿತರಿಸುತ್ತಿರುವ ಪಡಿತರ ವಿತರಕರಿಗೆ ಪ್ರತಿ ಕೆ.ಜಿ. ಅಕ್ಕಿಯ ಕಮಿಷನ್ ಮೊತ್ತವನ್ನು ಒಂದೂವರೆ ರೂಪಾಯಿಗೆ ಹೆಚ್ಚಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಮಹತ್ವದ ಘೋಷಣೆ ಮಾಡಿದರು.



ಅರಮನೆ ಮೈದಾನದಲ್ಲಿ ಅನ್ನಭಾಗ್ಯ ದಶಮಾನೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮುಖ್ಯ ಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಮರು ಗಳಿಗೆಯೇ ಅನ್ನಭಾಗ್ಯ ಕಾರ್ಯ ಕ್ರಮ ಜಾರಿಗೆ ತಂದೆ, 2013ರ ಬಸವ ಜಯಂತಿಯ ದಿನವೇ ಜಾರಿಗೆ ಬಂದಿರುವ ಅನ್ನಭಾಗ್ಯ ಯೋಜನೆ ಬಸವಣ್ಣನವರ ದಾಸೋಹದಿಂದ ಪ್ರೇರಿತವಾಗಿರುವುದು ಎಂದು ನೆನಪಿಸಿದರು.

ಹಸಿವಿನ ಜೊತೆಗೆ ದೇಶವನ್ನು ಅನಕ್ಷರತೆ, ಅನಾರೋಗ್ಯ ಮತ್ತು ನಿರುದ್ಯೋಗ ಮುಕ್ತ ಮಾಡುವುದೇ ಕಾಂಗ್ರೆಸ್ ಗುರಿ, ನಮ್ಮ ಹಿಂದಿನ ಆಡಳಿತ ಕಾಲದಲ್ಲಿ ಜಾರಿಗೆ ತಂದಿದ್ದ ಅನ್ನಭಾಗ್ಯ, ಕ್ಷೀರಭಾಗ್ಯ ಕ್ಷೀರಧಾರೆ, ಕೃಷಿಭಾಗ್ಯ, ಪಶುಭಾಗ್ಯ, ವಿದ್ಯಾಸಿರಿ, ಇಂದಿರಾ ಕ್ಯಾಂಟೀನ್ ಕಾರ್ಯಕ್ರಮಗಳೆಲ್ಲವೂ ಈ ಗುರಿಯೆಡೆಗೆ ಕರ್ನಾಟಕವನ್ನು ಕೊಂಡೊಯ್ಯುವ ಪ್ರಯತ್ನದಲ್ಲಿ ಯಶಸ್ವಿ ಆಗಿದ್ದೇವೆ ಎಂದರು.

ಗ್ಯಾರಂಟಿ ಯೋಜನೆಗಳ ಗುರಿ ಕೂಡಾ ರಾಜ್ಯವನ್ನು ಹಸಿವು, ಅನಾರೋಗ್ಯ, ಅನಕ್ಷರತೆ, ನಿರುದ್ಯೋಗ ಮುಕ್ತ ಮಾಡುವುದೇ ಆಗಿದೆ.

ನಾವು ತಲಾ 10 ಕೆಜಿ ಅಕ್ಕಿ ಕೊಡಲು ತೀರ್ಮಾನ ಮಾಡಿ ಪ್ರತಿ ಕೆಜಿಗೆ 34 ರೂ.ನಂತೆ ಹಣ ಕೊಡುತ್ತಿದ್ದೇವೆ, ಅಕ್ಕಿ ಕೊಡಿ ಎಂದು ಕೇಂದ್ರಕ್ಕೆ ಕೇಳಿದೆವು, ಆದರೂ ಕೇಂದ್ರದ ಬಿಜೆಪಿ ಸರ್ಕಾರ ಕರ್ನಾಟಕದ ಜನತೆಗೆ ಅಕ್ಕಿ ಕೊಡಲಿಲ್ಲ.

ನಮ್ಮ ಯೋಜನೆಗಳಲ್ಲಿ ರಾಜಕೀಯ ಲಾಭದ ಉದ್ದೇಶ ಇಲ್ಲ, ಯೋಜನೆಗಳ ಉದ್ದೇಶ ಸಂಪತ್ತು, ಅಧಿಕಾರ ಮತ್ತು ಅವಕಾಶಗಳ ಸಮಾನ ಹಂಚಿಕೆ, ರಾಜ್ಯದ ಯಾವುದೇ ಮನೆಯಲ್ಲಿ ಹಸಿವು, ಅನಾರೋಗ್ಯ, ಅನಕ್ಷರತೆ ಮತ್ತು ನಿರುದ್ಯೋಗದಿಂದ ಬಳಲುವವರು ಇರದಂತೆ ನೋಡಿಕೊಳ್ಳುವುದೇ ಸರ್ಕಾರದ ಆಶಯ ಮತ್ತು ಬದ್ಧತೆಯಾಗಿದೆ.

ನರೇಂದ್ರ ಮೋದಿ ಅವರು ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ ಆಹಾರ ಭದ್ರತೆ ಮತ್ತು ನರೇಗಾ ಕಾರ್ಯಕ್ರಮಗಳನ್ನು ವಿರೋಧಿಸಿದ್ದರು, ಇವು ಕಾಂಗ್ರೆಸ್ ಜಾರಿಗೆ ತಂದಿದ್ದ ಹಸಿವು ಮುಕ್ತ ಭಾರತದ ಕಾರ್ಯಕ್ರಮಗಳು ಎಂದು ಸಮರ್ಥಿಸಿಕೊಂಡಿದ್ದಾರೆ.

ಬಿಜೆಪಿಯವರು ಕಾಂಗ್ರೆಸ್ ಮುಕ್ತ ಭಾರತ ಎನ್ನುತ್ತಾರೆ, ಕಾಂಗ್ರೆಸ್ ಹಸಿವು ಮುಕ್ತ ನಾಡನ್ನು, ಹಸಿವು ಮುಕ್ತ ದೇಶವನ್ನು ನಿರ್ಮಿಸಲು ಹೊರಟಿದೆ ಎಂದರು.

ಅನ್ನಭಾಗ್ಯ ಸೇರಿದಂತೆ ಬಡವರು, ಮಧ್ಯಮ ವರ್ಗದವರಿಗೆ ಕೊಟ್ಟ ಭಾಗ್ಯಗಳನ್ನು ವ್ಯಂಗ್ಯ ಮಾಡಿದ್ದ ಬಿಜೆಪಿ ಅಧಿಕಾರಕ್ಕೆ ಬಂದಿದ್ದು ದುರಂತ, ಇಂಥಾ ತಪ್ಪುಗಳನ್ನು ಮತ್ತೆ ಮತ್ತೆ ಮಾಡಬೇಡಿ, ಅನ್ನದಾತರು ದುಡಿದರೆ ದೇಶ ಬದುಕುತ್ತದೆ ಎಂದು ಜನರಲ್ಲಿ ಮನವಿ ಮಾಡಿದರು.

ಬಿಜೆಪಿ ಬಡವರು, ದುಡಿಯುವವರು, ಶ್ರಮಿಕರು, ದಲಿತರು, ಶೂದ್ರರು ಮತ್ತು ಹಿಂದುಳಿದವರ ಪರವಾಗಿ ಇದ್ದಿದ್ದರೆ ಅಕ್ಕಿ ಕೊಡುತ್ತಿತ್ತು, ಕೇಂದ್ರದ ಬಿಜೆಪಿ ಸರ್ಕಾರಕ್ಕೆ ಹಸಿವು ಮುಕ್ತ ದೇಶ ಬೇಕಾಗಿಲ್ಲ, ನಿಮ್ಮ ಪರವಾಗಿ ಇರುವವರು ಯಾರು ಎನ್ನುವುದನ್ನು ಅರ್ಥ ಮಾಡಿಕೊಳ್ಳಿ, ನಿಮ್ಮ ಹೃದಯದ ಮಾತು ಕೇಳಿ ಮತ ಚಲಾಯಿಸಿ ಎಂದು ಮುಖ್ಯಮಂತ್ರಿ ಕರೆ ನೀಡಿದರು.

# ಪಾಕ್ ಪರ ಘೋಷಣೆ: ಕಾಂಗ್ರೆಸ್ ಸಂಸದ ಸೈಯದ್ ನಾಸೀರ್ ಹುಸೇನ್ ಬೆಂಬಲಿಗನ ಬಂಧನ

ಬೆಂಗಳೂರು, ಫೆ.29– ವಿಧಾನಸೌಧದಲ್ಲಿ 'ಪಾಕಿಸ್ತಾನ ಪರ' ಘೋಷಣೆಗಳನ್ನು ಕೂಗಿದ ಆರೋಪದ ಮೇಲೆ ಕಾಂಗ್ರೆಸ್‌ನ ರಾಜ್ಯಸಭಾ ಸದಸ್ಯ ಸೈಯದ್ ನಾಸೀರ್ ಹುಸೇನ್ ಅವರ ಬೆಂಬಲಿಗನೊಬ್ಬನನ್ನು ಬಂಧಿಸಲಾಗಿದೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ. ರಾಜ್ಯಸಭಾ ಚುನಾವಣೆಯಲ್ಲಿ ಹುಸೇನ್ ಜಯಗಳಿಸಿದ ನಂತರ ಅವರ ಬೆಂಬಲಿಗರು ಪಾಕಿಸ್ತಾನದ ಪರ ಘೋಷಣೆಗಳನ್ನು ಕೂಗಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ. ಬಂಧಿತ ವ್ಯಕ್ತಿಯನ್ನು ವ್ಯಾಪಾರಿ ಮೊಹಮ್ಮದ್ ಶಾಫಿ ನಾಶಿಪುಡಿ ಎಂದು ಗುರುತಿಸಲಾಗಿದೆ ಎಂದು ಬ್ಯಾಡಗಿ ಪೊಲೀಸರು ತಿಳಿಸಿದ್ದಾರೆ.

ಸೈಯದ್ ನಾಸರ್ ಹುಸೇನ್ ಅವರೊಂದಿಗೆ ಮೊಹಮ್ಮದ್ ಶಾಫಿ ವಿಧಾನಸೌಧದಲ್ಲಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಪಾಕಿಸ್ತಾನ ಪರ ಘೋಷಣೆಯ ವಿಡಿಯೋದಲ್ಲಿನ ಧ್ವನಿಯನ್ನು ಪರಿಶೀಲಿಸಲು ಶಾಫಿ ಧ್ವನಿ ಮಾದರಿಯನ್ನು ತೆಗೆದುಕೊಳ್ಳಲಾಗಿದೆ ಎಂದು ಅವರು ಹೇಳಿದರು.

# ಇಂದಿನಿಂದ ಮೈಸೂರಿನ ನೆಕ್ಸಸ್ ಸೆಂಟರ್‌ನಲ್ಲಿ ಗೆಡ್ಡೆ ಗೆಣಸು ಮೇಳ



ಮೇಳದಲ್ಲಿ ಗೆಡ್ಡೆ ಗೆಣಸುಗಳಿಂದ ತಯಾರಿಸಬಹುದಾದ ಅಡುಗೆಗಳ ಪ್ರದರ್ಶನ ಮತ್ತು ಪರಿಚಯ ಮಾಡಲಾಗುವುದು. ಬರಹಗಾರ್ತಿ ಮತ್ತು ಆಹಾರ ತಜ್ಞೆ ಶ್ರೀಮತಿ ರತ್ನಾ ರಾಜಯ್ಯ, ಪರ್ಪಲ್ ಯಾಮ್‌ನಿಂದ ಮಾಡಬಹುದಾದ ಅಡುಗೆಗಳನ್ನು ಪ್ರಾತ್ಯಕ್ಷತೆ ಮೂಲಕ ತೋರಿಸಿಕೊಡಲಿದ್ದಾರೆ. ಪರ್ಪಲ್ ಯಾಮ್ ಮತ್ತು ಬಳ್ಳಿ ಆಲೂಗೆಡ್ಡೆಯನ್ನು ಮನೆಯ ಮೂಲೆಯಲ್ಲಿ ನೆಟ್ಟರೆ ಬುಟ್ಟಿ ತುಂಬುವಷ್ಟು ಗೆಡ್ಡೆಗಳು ಸಿಗುತ್ತವೆ.

ಮೈಸೂರು,ಫೆ.29–ಮಳೆಯ ವೈಪರೀತ್ಯವನ್ನು ಎದುರಿಸಿ, ನೈಸರ್ಗಿಕ ವಾಗಿ ಬೆಳೆಯುವ ಗೆಡ್ಡೆ ಗೆಣಸು ಪೋಷಕಾಂಶದ ಕಣಜ. ಇವುಗಳಲ್ಲಿ ನಾರಿನಂಶ ಹೆಚ್ಚಿರುವುದರಿಂದ ಮಲಬದ್ಧತೆಯಿಂದ ಬಳಲುವವರಿಗೆ ಉಪಯುಕ್ತಕಾರಿ. ಚರ್ಮದ ಮೈಕಾಂತಿ ವೃದ್ಧಿಸಲು ಮತ್ತು ವಯಸ್ಸನ್ನು ನಿಧಾನಿಸಲು ಗೆಡ್ಡೆ ಗೆಣಸು ಸಹಕಾರಿ. ಮಧುಮೇಹದಿಂದ ಬಳಲುವವರು ಯಾವುದೇ ಆತಂಕವಿಲ್ಲದೆ ಗೆಡ್ಡೆ ಗೆಣಸು ಸವಿಯಬಹುದು.

ಭೂತಾಯಿ ಮಡಿಲಿನ ಅದ್ಭುತ ಸೃಷ್ಟಿಯಾದ ಗೆಡ್ಡೆ ಗೆಣಸಿನ ತಳಿಗಳನ್ನು ಮೈಸೂರಿನ ಗ್ರಾಹಕರಿಗೆ ಪರಿಚಯ ಮಾಡಲು ಸಹಜ ಸಮೃದ್ಧ–ಸಾವಯವ ಕೃಷಿಕರ ಬಳಗವು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಮಾ.1ರಿಂದ 3 ರವರೆಗೆ ಮೈಸೂರಿನ ನಜರ್‌ಬಾದ್ ಮೊಹಲ್ಲಾದಲ್ಲಿರುವ ನೆಕ್ಸಸ್ ಸೆಂಟರ್ ಸಿಟಿಯಲ್ಲಿ 'ಗೆಡ್ಡೆ ಗೆಣಸು ಮೇಳ' ಏರ್ಪಡಿಸಲಾಗಿದೆ.

ಪ್ರತಿದಿನ ಬೆಳಗ್ಗೆ 11 ಗಂಟೆಯಿಂದ ರಾತ್ರಿ 10ರವರೆಗೆ ನಡೆಯುವ ಗೆಡ್ಡೆ ಗೆಣಸು ಮೇಳದಲ್ಲಿ ಪರ್ಪಲ್ ಯಾಮ್, ಸಿಹಿ ಗೆಣಸು, ಕೆಸು, ಸುವರ್ಣ ಗೆಡ್ಡೆ, ಬಳ್ಳಿ ಆಲೂಗೆಡ್ಡೆ, ಕೂವೆ ಗೆಡ್ಡೆ , ಬಣ್ಣದ ಸಿಹಿ ಗೆಣಸು, ಹಸಿರು ಮತ್ತು ಕಪ್ಪು ಹರಿಷಿಣ, ಮಾವಿನ ಶುಂಠಿ ಮೊದಲಾದ ಗೆಡ್ಡೆ ಗೆಣಸುಗಳು ಪ್ರದರ್ಶನ ಮತ್ತು ಮಾರಾಟಕ್ಕೆ ಬರಲಿದೆ. ಹೆಗ್ಗಡದೇವನ ಕೋಟೆಯ ರೈತರು ಬೆಳೆದ ದೇಸಿ ಕ್ಯಾರೆಟ್ ಕೊಳ್ಳಲು ಸಿಗಲಿದೆ.

ಕರ್ನಾಟಕದ ವಿವಿಧ ಭಾಗಗಳಿಂದ ಬರುವ 10ಕ್ಕೂ ಹೆಚ್ಚಿನ ಮಳಿಗೆಗಳು ಗೆಡ್ಡೆ ಗೆಣಸಿನ ಮೌಲ್ಯವರ್ಧಿತ ಪದಾರ್ಥ, ದೇಸಿ ಅಕ್ಕಿ, ಸಿರಿಧಾನ್ಯಗಳು, ಜವಾರಿ ಬೀಜಗಳು, ಗಾಣದ ಎಣ್ಣೆ ಮತ್ತು ಸಾವಯವ ಪದಾರ್ಥಗಳನ್ನು ಮಾರಾಟಕ್ಕೆ ತರುತ್ತಿವೆ. ಬಾಯಿ ಚಪ್ಪರಿಸಲು ಜೋಳದ ರೊಟ್ಟಿ ಮತ್ತು ಗೆಣಸಿನ ಪಲ್ಯ, ರಾಗಿ ರೊಟ್ಟಿ–ಹುಚ್ಚೆಳ್ಳು ಚಟ್ನಿ, ದೇಸಿ ಕ್ಯಾರೆಟ್ ಹಲ್ವ, ಬೆಲ್ಲದ ಐಸ್ಕ್ರೀಂ, ಬಗೆಬಗೆಯ ಪಾನೀಯಗಳು ಸಿಗಲಿವೆ. (ವಿವರಗಳಿಗೆ ಕೋಮಲ್ –9880908608 ಸಂಪರ್ಕಿಸಿ).

# ಮಹಾ ಶಿವರಾತ್ರಿ: ಮೈಸೂರಲ್ಲಿ ಉಜ್ಜಯಿನಿಯ ಮಹಾಕಾಳೇಶ್ವರ ಮೂರ್ತಿ ಪ್ರತಿರೂಪ ಪ್ರದರ್ಶನ





ಮೈಸೂರಿನ ಸರಸ್ವತಿಪುರಂ ಸಾಹುಕಾರ್ ಚೆನ್ನಯ್ಯ ರಸ್ತೆಯಲ್ಲಿನ ಓಂಕಾರ್‌ಮಲ್ ಸೋಮಾನಿ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಬ್ರಹ್ಮಕುಮಾರೀಸ್ ಸಂಸ್ಥೆ ಶಿವರಾತ್ರಿ ಹಬ್ಬದ ಅಂಗವಾಗಿ ಮಹಾಕಾಳೇಶ್ವರ ಮೂರ್ತಿಯ ಪ್ರತಿರೂಪದ ಪ್ರದರ್ಶನ ಏರ್ಪಡಿಸಿದೆ. (ಬಲಚಿತ್ರ) ಬ್ರಹ್ಮಕುಮಾರೀಸ್ ಸಂಸ್ಥೆ ಆಯೋಜಿಸಿರುವ ವಿವಿಧ ಧಾರ್ಮಿಕ ಕಾರ್ಯವನ್ನು ಮಾಜಿ ಸಚಿವ ಸಿ.ಹೆಚ್.ವಿಜಯಶಂಕರ್ ಉದ್ಘಾಟಿಸಿ, ಮಾತನಾಡಿದರು.

ಮೈಸೂರು,ಫೆ.29(ಎಂಟಿವೈ)–ಮಹಾ ಶಿವರಾತ್ರಿ ಹಿನ್ನೆಲೆಯಲ್ಲಿ ಮೈಸೂರಿನ ಜನತೆಗೆ ಉಜ್ಜಯನಿಯ ಮಹಾಕಾಳೇಶ್ವರ ಮೂರ್ತಿಯ ಪ್ರತಿರೂಪದ ಪ್ರದರ್ಶನ ಏರ್ಪಡಿಸಲಾಗಿದ್ದು, ಬ್ರಹ್ಮಕುಮಾರೀಸ್ ಸಂಸ್ಥೆ ವತಿಯಿಂದ ಆಯೋಜಿಸಿರುವ ಈ ವಿಶೇಷ ದರ್ಶನ ಮಾ.10ರವರೆಗೂ ನಡೆಯಲಿದೆ.

ಮೈಸೂರಿನ ಸರಸ್ವತಿಪುರಂ ಸಾಹುಕಾರ್ ಚೆನ್ನಯ್ಯ ರಸ್ತೆಯಲ್ಲಿನ ಓಂಕಾರ್‌ಮಲ್ ಸೋಮಾನಿ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಬ್ರಹಕುಮಾರೀಸ್ ಸಂಸ್ಥೆಯು ಉಜ್ಜಯನಿಯಲ್ಲಿರುವ ದೇವಾಲಯದ ಮಾದರಿಯಲ್ಲಿಯೇ ದೇಗುಲ ನಿರ್ಮಿಸಿ, ಮಹಾಕಾಳೇಶ್ವರ ಮೂರ್ತಿಯ ಪ್ರತಿಷ್ಠಾಪಿಸಲಾಗಿದ್ದು, ಭಕ್ತರನ್ನು ಸೂಜಿಗಲ್ಲಿನಂತೆ ಸೆಳೆಯಲಿದೆ. ಈ ದೇವಾಲಯದಲ್ಲಿ 11 ದಿನಗಳವರೆಗೆ ವಿವಿಧ ರೀತಿಯ ಧಾರ್ಮಿಕ ಕಾರ್ಯಗಳು ನಡೆಯಲಿವೆ.

**ವಿಶೇಷ ದರ್ಶನಕ್ಕೆ ಚಾಲನೆ:** ಇಂದು ಬೆಳಗ್ಗೆ ಓಂಕಾರ್‌ಮಲ್ ಸೋಮಾನಿ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾಜಿ ಸಂಸದ ಸಿ.ಹೆಚ್.ವಿಜಯಶಂಕರ್ ಉಜ್ಜಯನಿಯ ಮಹಾಕಾಳೇಶ್ವರ ಮೂರ್ತಿಯ ಪ್ರತಿರೂಪದ ದರ್ಶನ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಜ್ಯೋತಿ ಸ್ವರೂಪದಲ್ಲಿರುವ ಶರೀರವನ್ನು ಲೋಕ ಕಲ್ಯಾಣಕ್ಕೆ ಬಳಕೆ ಮಾಡಬೇಕು. ಭಗವಂತನು ಮಾನವ ಕಲ್ಯಾಣಕ್ಕಾಗಿ ಕೊಟ್ಟ ಅಪರೂಪದ ಉಡುಗೊರೆ ಈ ಶರೀರ. ಆ ಕಾರ್ಯವನ್ನು ಪೂರ್ಣಗೊಳಿಸಲು ಶ್ರಮಿಸಬೇಕು. ಅಯೋಧ್ಯೆಯಲ್ಲಿ ನಿರ್ಮಿಸಿರುವ ಬಾಲರಾಮ ಮೂರ್ತಿ ಶಿಲೆ ಮತ್ತು ಅದನ್ನು ಶಿಲ್ಪವಾಗಿಸಿದ ಕಲಾವಿದ ಮೈಸೂರಿನವರು. ಹಾಗಾಗಿ ಮೈಸೂರಿಗೂ ಅಯೋಧ್ಯೆಗೂ ಒಂದು ರೀತಿಯ ಸಂಬಂಧ ಇದೆ. ಅಲ್ಲದೆ ಉಜ್ಜಯಿನಿಗೂ ಮೈಸೂರಿಗೂ ಸಂಬಂಧ ಇದೆ ಎಂದರು.

ಉಜ್ಜಯಿನಿ ಭೋಜರಾಜನ ಅಸ್ಥಾನವಾಗಿತ್ತು. ಅಲ್ಲಿ ಭೋಜರಾಜ ಆಡಳಿತ ನಡೆಸಿದ್ದಾನೆ. ಹಾಗೆಯೇ ಮೈಸೂರು ಅರಮನೆಯಲ್ಲಿರುವ ಸಿಂಹಾಸನ ಭೋಜರಾಜನಿಗೆ ಸೇರಿದ್ದು. ದೇವರ ಶಿಲ್ಪಗಳಿಗೆ ಹಾಲು, ಗಂಗೆ, ಪುಷ್ಪಾಭಿಷೇಕ ಮಾಡಲಾಗುತ್ತಿದೆ. ಆದರೆ, ಉಜ್ಜಯಿನಿಯ ಮಹಾಕಾಳೇಶ್ವರ ಸ್ವಾಮಿಗೆ ಜೀವ ರಹಿತ ಶರೀರವನ್ನು ಸುಟ್ಟ ಬೂದಿಯನ್ನು ತಂದು ಅಭಿಷೇಕ ಮಾಡಲಾಗುತ್ತದೆ. ಉಜ್ಜಯಿನಿಗೆ ಪ್ರತಿನಿತ್ಯ ಕನಿಷ್ಠ ಲಕ್ಷ ಜನ ಭೇಟಿ ನೀಡುತ್ತಾರೆ. ಜನರಿಗೆ ಶರೀರ ಸುಟ್ಟ ಬೂದಿಯನ್ನು ವಿಭೂತಿಯಾಗಿ ಧಾರಣೆ ಮಾಡುವಂತೆ ಕೊಡಲಾಗುತ್ತದೆ. ಈ ಸೇವೆಯೂ ರೋಮಾಂಚನಕಾರಿಯಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ರಾಜಯೋಗಿನಿ ಬಿ.ಕೆ.ಲಕ್ಷ್ಮಿ, ರಂಗನಾಥ್, ಸೂರ್ಯನಾರಾಯಣ, ವಿಮಾನ ನಿಲ್ದಾಣ ಪ್ರಾಧಿಕಾರದ ಮಾಜಿ ನಿರ್ದೇಶಕ ಆರ್.ಮಂಜುನಾಥ್, ಡಾ.ಎಂ.ಪುಟ್ಟಸ್ವಾಮಿ, ಯೋಗ ಪಟು ಖುಷಿ, ಪುಟ್ಟಸ್ವಾಮಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರು ತಾಲೂಕಿನ ಜಯಪುರ ಹೋಬಳಿಯ ಹಾರೋಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಎಚ್.ಆರ್ ಸುರೇಶ್ ಕುಮಾರ್,ಉಪಾಧ್ಯಕ್ಷರಾಗಿ ರತ್ನಮ್ಮ ಪ್ರಕಾಶ್ ಆಯ್ಕೆಯಾದರು. ಈ ವೇಳೆ ನಿರ್ದೇಶಕರಾದ ಪ್ರಭಾಮಣಿ, ನಂಜಪ್ಪ, ಮಲ್ಲೇಶ, ಬಸವಣ್ಣ, ರಂಗೇಗೌಡ, ಪಾಪೇಗೌಡ, ಸೋಮನಾಯಕ, ಚಂದ್ರಹಾಸೇಗೌಡ, ಶಿವಲಿಂಗಗೌಡ ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಅಭಿನಂದಿಸಿದರು.

# ಸರ್ಕಾರದಲ್ಲಿ ಬಲಗೈ ಸಮುದಾಯಕ್ಕೆ ಉದ್ಯೋಗ ಅವಕಾಶ ಕಲ್ಪಿಸಲು ಆಗ್ರಹ



ಸುದ್ದಿಗೋಷ್ಠಿಯಲ್ಲಿ ರಾಜಣ್ಣ ಇಟ್ನ ಮಾತನಾಡಿದರು.

ಮೈಸೂರು,ಫೆ.29(ಜಿಎ)–ಮೈಸೂರಿನ ಕಂದಾಯ, ಪೊಲೀಸ್ ಮತ್ತು ಪಂಚಾಯತ್ ರಾಜ್ ಇಲಾಖೆ ಸೇರಿದಂತೆ ರಾಜ್ಯದ ವಿವಿಧ ಇಲಾಖೆಗಳ ಉನ್ನತ ಹುದ್ದೆಗಳಿಗೆ ಬಲಗೈ ಸಮುದಾಯದವರಿಗೆ ಅವಕಾಶ ನೀಡಬೇಕೆಂದು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಒತ್ತಾಯಿಸಿದೆ.

ಈ ಕುರಿತು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಸಂಚಾಲಕ ಮಲ್ಲೇಶ್ ಚುಂಚನಹಳ್ಳಿ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರ ಹಿಡಿಯಲು ದಲಿತ ಸಮುದಾಯವು ಮಹತ್ತರ ಪಾತ್ರವಹಿಸಿದೆ. ಆದರೆ ಸರ್ಕಾರ ಬದಲಾದರು ಅಧಿಕಾರಿಗಳ ಧೋರಣೆ ಬದಲಾಗಿಲ್ಲ. ಅದೇ ರೀತಿ ಮುಖ್ಯಮಂತ್ರಿಗಳು ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ಸಾಮಾಜಿಕ ನ್ಯಾಯ ಕಾಪಾಡಿ ಮೈಸೂರು ಜಿಲ್ಲೆಯ 26 ಇಲಾಖೆಗಳಲ್ಲಿ ಯಾವುದೇ ಬಲಗೈ ಸಮುದಾಯದ ಅಧಿಕಾರಿಯನ್ನು ನೇಮಕ ಮಾಡದೇ ಇರುವುದು ಬೇಸರದ ಸಂಗತಿಯಾಗಿದೆ ಎಂದರು.

ಮುಂದಿನ ದಿನಗಳಲ್ಲಿ ಇಲಾಖೆಗಳ ವರ್ಗಾ ವಣೆ, ನೇಮಕಾತಿ ಮಾಡಿದರೆ, ಬಲಗೈ ಸಮುದಾಯದವರಿಗೆ ಅವಕಾಶ ಕಲ್ಪಿಸಬೇಕು. ಇಲ್ಲವಾದರೆ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ರಾಜಣ್ಣ ಇಟ್ನ, ಹನುಮಂತು ಬೆಲವತ್ತ, ಕೃಷ್ಣ ಕೊಳಗಟ್ಟ, ಸುರೇಶ್ ಯರಗನಹಳ್ಳಿ, ಪುಟ್ಟಸ್ವಾಮಿ ದೇವರಸಹಳ್ಳಿ, ಗೋವಿಂದರಾಜು ಅಶೋಕಪುರಂ ಉಪಸ್ಥಿತರಿದ್ದರು.

# ವೀರಗಲ್ಲುಗಳ ಸಂರಕ್ಷಣಾ ಕಾರ್ಯಕ್ರಮ




ಮೈಸೂರಿನ ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ 'ವೀರಗಲ್ಲುಗಳ ಸಂರಕ್ಷಣಾ ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಮೈಸೂರು,ಫೆ.29–ಮೈಸೂರು ಡಯೋಸಿಷನ್ ಎಜುಕೇಷನಲ್ ಸೊಸೈಟಿಯ ಅಂಗ ಸಂಸ್ಥೆಯಾದ ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜಿನಲ್ಲಿ ಎಂ.ಡಿ.ಇ.ಎಸ್.ನ ಕಾರ್ಯದರ್ಶಿ ರೆ. ಫಾ. ವಿಜಯ್ ಕುಮಾರ್ ಮತ್ತು ಎಂ.ಡಿ.ಇ.ಎಸ್.ನ ಆಡಳಿತಾಧಿಕಾರಿ ರೆ. ಫಾ. ಅವಿನಾಶ್ ಅವರ ಮಾರ್ಗದರ್ಶನದಲ್ಲಿ ಮತ್ತು ಇಲ್ಲಿನ ರಾಷ್ಟ್ರೀಯ ಸೇವಾ ಯೋಜನಾ ಘಟಕ ಮತ್ತು ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಸಹಯೋಗದೊಂದಿಗೆ 'ವೀರಗಲ್ಲುಗಳ ಸಂರಕ್ಷಣಾ ಕಾರ್ಯಕ್ರಮ'ವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲ ಹೆಚ್.ಎನ್. ಚಂದ್ರಶೇಖರ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕರಾಮುವಿವಿ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಮುಖ್ಯಸ್ಥರಾದ ಡಾ.ಶೆಲ್ವಪಿಳ್ಳೆ ಅಯ್ಯಂಗಾರ್ ಭಾಗವಹಿಸಿ, ಇತಿಹಾಸದ ಮಹತ್ವವನ್ನು ತಿಳಿಸಿಕೊಡುವುದರ ಜೊತೆಗೆ ಸ್ಮಾರಕಗಳ ಮಹತ್ವವನ್ನು ತಿಳಿಸಿಕೊಟ್ಟರು.

ಕಾರ್ಯಕ್ರಮ ಸಂತ ಫಿಲೋಮಿನಾ ಚರ್ಚಿನಿಂದ ಆರಂಭಗೊಂಡು ಮಹಾದೇವಮ್ಮ ದೇವಸ್ಥಾನದವರೆಗೂ 130ಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳು ಜಾಥಾ ನಡೆಸಿ, ವೀರಗಲ್ಲು ಹಾಗೂ ಮಾಸ್ತಿಗಲ್ಲುಗಳ ಬಗ್ಗೆ ಘೋಷಣೆ ಕೂಗಲಾಯಿತು. ಮಹಾದೇವಮ್ಮ ದೇವಸ್ಥಾನದ ಬಳಿ ಸುಮಾರು 30ಕ್ಕೂ ಹೆಚ್ಚಿನ ವೀರಗಲ್ಲುಗಳನ್ನು ಸಂರಕ್ಷಣೆ ಮಾಡಲಾಯಿತು.

ಕಾರ್ಯಕಮದಲ್ಲಿ ಎನ್.ಎಸ್.ಎಸ್.ನ ಕಾರ್ಯಕ್ರಮಾಧಿಕಾರಿ ಗಿರೀಶ ಕೆ. ಎನ್., ಮುಖಂಡರಾದ ಶ್ರೀನಿವಾಸ, ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಮಾ.2ರಂದು ನಿರ್ಗಮನ ಪಥಸಂಚಲನ ಕಾರ್ಯಕ್ರಮ

ಮೈಸೂರು, ಫೆ.29–ಕರ್ನಾಟಕ ಪೊಲೀಸ್ ಅಕಾಡೆಮಿ ವತಿಯಿಂದ 38ನೇ ತಂಡದ ಪೊಲೀಸ್ ಉಪಾಧೀಕ್ಷಕರು (ಸಿವಿಲ್) ಮತ್ತು ಅಬಕಾರಿ ಉಪಾಧೀಕ್ಷಕರು ಪ್ರಶಿಕ್ಷಣಾರ್ಥಿಗಳ 'ನಿರ್ಗಮನ ಪಥಸಂಚಲನ'ವನ್ನು ಮಾ.2ರಂದು ಬೆಳಗ್ಗೆ 9.30 ಗಂಟೆಗೆ ಮೈಸೂರಿನ ಕೆಪಿಎನ ಹೊಸ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಪೊಲೀಸ್ ಮಹಾ ನಿರ್ದೇಶಕ ಅಲೋಕ್‌ಕುಮಾರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಕರ್ನಾಟಕ ಪೊಲೀಸ್ ಅಕಾಡೆಮಿಯ ಉಪನಿರ್ದೇಶಕರಾದ ನಿರಂಜನ ರಾಜ್ ಅರಸ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಾಳೆ ಕಲಾ ಮಂಟಪದಲ್ಲಿ ಕಲಾ ನಮನ

**ಸೋರಟ್ ಅಶ್ವಥ್, ಜ್ಯೋತಿ ಸಂಸ್ಮರಣಾರ್ಥ ಗೀತಗಾಯನ, ಯುವ ಜನರ ಕಲಾ ಪ್ರದರ್ಶನ, ಕವಿಗೋಷ್ಠಿ**



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಎನ್.ವಿ.ರಮೇಶ್ ಮಾತನಾಡಿದರು.


ಮೈಸೂರು, ಫೆ.29(ಜಿಎ)–ಮೈಸೂರಿನ ಅಭಿರುಚಿ ಬಳಗ ಮತ್ತು ಗಾನ ಸಿರಿ ವೃಂದದ ವತಿಯಿಂದ ಸಾಹಿತ್ಯ ಭೀಷ್ಮ ಸೋರಟ್ ಅಶ್ವಥ್ ಮತ್ತು ಹಿನ್ನೆಲೆ ಗಾಯಕಿ ಜ್ಯೋತಿ ಅವರ ಸಂಸ್ಮರಣಾ ಕಾರ್ಯಕ್ರಮದ ಅಂಗವಾಗಿ ಗೀತಗಾಯನ, ಯುವಜನರ ಕಲಾ ಪ್ರದರ್ಶನ ಹಾಗೂ ಕವಿಗೋಷ್ಠಿಯ 'ಕಲಾ ನಮನ'ವನ್ನು ಮಾ.2ರಂದು ಕೃಷ್ಣಮೂರ್ತಿಪುರಂ ನಲ್ಲಿರುವ ನಮನ ಕಲಾ ಮಂಟಪದಲ್ಲಿ ಆಯೋಜಿಸಲಾಗಿದೆ ಎಂದು ಬಳಗದ ಅಧ್ಯಕ್ಷ ಎನ್.ವಿ.ರಮೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10.30ಕ್ಕೆ ಸಮಾಜ ಸೇವಕ ರಘುರಾಮ್ ವಾಜಪೇಯಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್, ಹಿರಿಯ ರಂಗಕರ್ಮಿಗಳಾದ ನಾ.ನಾಗಚಂದ್ರ, ಸಿ.ವಿ.ಶ್ರೀಧರ್ ಮೂರ್ತಿ ಆಗಮಿಸಲಿದ್ದಾರೆ ಎಂದರು.

ವಿಶೇಷ ಅತಿಥಿಗಳಾಗಿ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಗೌರವ ಕಾರ್ಯದರ್ಶಿ ಮ.ನ.ಲತಾ ಮೋಹನ್ ಉಪಸ್ಥಿತರಿರಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಅಭಿರುಚಿ ಬಳಗದ ಕಾರ್ಯದರ್ಶಿ ಉಮಾ ರಮೇಶ್, ಗಾನಸಿರಿ ವೃಂದದ ಅಧ್ಯಕ್ಷ ಯಶವಂತ್ ಕುಮಾರ್, ಛಾಯಾ ಉಪಸ್ಥಿತರಿದ್ದರು.







# ಕನ್ನಡ ಭಾಷೆ ಬಳಕೆ ದೃಷ್ಟಿಯಿಂದ 'ಶೂನ್ಯ ಸಂಪಾದನೆ' ಅತ್ಯಾದ್ಭುತ ಕೃತಿ

- ಲೇಖಕ ಡಾ.ಡಿ.ಎ.ಶಂಕರ್ ಅಭಿಮತ
- ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ ಸೇರಿ ವಿವಿಧ ಪ್ರಶಸ್ತಿಗಳ ಪ್ರದಾನ
- 'ಶೂನ್ಯ ಸಂಪಾದನೆ ಆಫ್ ಶಿವಗಣಪ್ರಸಾದಿ ಮಹದೇವಯ್ಯ' ಕೃತಿ ಸೇರಿದಂತೆ ಮೂರು ಪುಸ್ತಕ ಬಿಡುಗಡೆ



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಆವರಣದ ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಗುರುವಾರ ವಿವಿಧ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.

ಮೈಸೂರು,ಫೆ.29(ಪಿಎಂ)– ಶರಣ ಸಾಹಿತ್ಯ, ಶರಣಧರ್ಮ ಮತ್ತು ಕನ್ನಡ ಭಾಷೆಯ ಬಳಕೆ ದೃಷ್ಟಿಯಿಂದ 'ಶೂನ್ಯ ಸಂಪಾದನೆ' ಅತ್ಯಾದ್ಭುತ ಕೃತಿ. ಇಷ್ಟು ದೊಡ್ಡ ಕೃತಿ ಬೇರೆ ಯಾವುದೇ ಭಾಷೆಯಲ್ಲಿ ಇದ್ದಂತಿಲ್ಲ ಎಂದು ಲೇಖಕ ಡಾ.ಡಿ.ಎ.ಶಂಕರ್ ಹೇಳಿದರು.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಆವರಣದ ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಸುತ್ತೂರು ಕ್ಷೇತ್ರದ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ಜಂಟಿ ಆಶ್ರಯದಲ್ಲಿ ಗುರುವಾರ ಹಮ್ಮಿಕೊಂಡಿದ್ದ 'ಶೂನ್ಯ ಸಂಪಾದನೆ ಆಫ್ ಶಿವಗಣಪ್ರಸಾದಿ ಮಹದೇವಯ್ಯ' ಕೃತಿ ಸೇರಿದಂತೆ ಮೂರು ಪುಸ್ತಕಗಳ ಬಿಡುಗಡೆ ಮತ್ತು 2022ನೇ ಸಾಲಿನ ಪ್ರಶಸ್ತಿಗಳ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಸುತ್ತೂರು ಶ್ರೀ, ಸಿದ್ದೇಶ್ವರ ಸ್ವಾಮಿಗಳ ಪ್ರೇರಣೆಯಿಂದ ಶೂನ್ಯ ಸಂಪಾದನೆ ಕೃತಿಯನ್ನು ಇಂಗ್ಲಿಷ್‌ಗೆ ಅನುವಾದ ಮಾಡಿದ್ದೇನೆ. 'ಶೂನ್ಯ ಸಂಪಾದನೆ' ಕೃತಿ ಒಂದರ್ಥದಲ್ಲಿ ವೀರಶೈವ ಲಿಂಗಾಯತರಿಗೆ 'ಭಗದ್ಗೀತೆ' ಇದ್ದಂತೆ. ಇದು ಅತ್ಯಂತ ಶ್ರೇಷ್ಠ ಕೃತಿ. ಬಹುಶಃ ಶೂನ್ಯ ಸಂಪಾದನೆಯಂತಹ ಕೃತಿ ಬೇರೆ ಯಾವ ಭಾಷೆಯಲ್ಲೂ ಇಲ್ಲ. ಕೆಲವರು ಪ್ಲೇಟೋ ಡೈಲಾಗ್ಸ್ ಇದೆ ಎಂದು ಪ್ರತಿಪಾದಿಸುತ್ತಾರೆ. ಆದರೆ ಅದರಲ್ಲಿ ಪ್ಲೇಟೋ ಮಂಡಿಸುವ ವಾದವೇ ಅಂತಿಮ. ಆದರೆ ಅಲ್ಲಮ, ಅಕ್ಕ ಮಹಾದೇವಿ ಯಾರೇ ಆಗಲಿ ಅವರು ಹೇಳಿದ್ದೇ ಅಂತಿಮವಲ್ಲ. ಅದನ್ನು ಶೂನ್ಯ ಸಂಪಾದನೆಯಲ್ಲಿ ದಾಖಲಿಸಲಾಗಿದೆ. ಅವರವರ ಆಲೋಚನೆಗಳ ಹಿನ್ನೆಲೆಯಲ್ಲಿ ನಿರ್ಭಯವಾಗಿ ಇಲ್ಲಿ ಪ್ರಶ್ನೆ ಮಾಡಬಹುದು ಎಂದು ತಿಳಿಸಿದರು.

'ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ'ಗೆ ಭಾಜನವಾದ 'ಬೆಳಗಿನೊಳಗು ಮಹಾದೇವಿಯಕ್ಕ' ಕೃತಿ ಕರ್ತೃ ಡಾ.ಹೆಚ್.ಎಸ್.ಅನುಪಮಾ ಮಾತನಾಡಿ, ಪ್ರಶಸ್ತಿ ನನ್ನ ಜವಾಬ್ದಾರಿ ಹೆಚ್ಚಿಸಿದೆ. 800 ವರ್ಷಗಳ ಹಿಂದೆ ಇಂದಿನಂತೆ ಸಾರಿಗೆ ಸೌಲಭ್ಯ ಇಲ್ಲದ ಅಂದು ಅಕ್ಕ ಮಹಾದೇವಿ ಹೇಗೆ ಉಡುಗಣಿ ಬಿಟ್ಟು ಕಲ್ಯಾಣಕ್ಕೆ ಹೋದರೆಂಬ ಬಗ್ಗೆ ಕಲ್ಪಿಸಿಕೊಂಡಿದ್ದೆ. ಇದರ ಹಿನ್ನೆಲೆಯಲ್ಲಿಯೂ ಕೃತಿ ಮೂಡಿಬಂದಿದೆ. ಅಕ್ಕನ ವಚನಗಳನ್ನು ಆಧಾರವಾಗಿಟ್ಟುಕೊಂಡು ಈ ಕೃತಿ ಬರೆದಿದ್ದೇನೆ. ಪ್ರಶಸ್ತಿಯೊಂದಿಗೆ ನೀಡಿರುವ 25 ಸಾವಿರ ನಗದನ್ನು ಹಾಸನ ಜಿಲ್ಲೆಯ ಅರಸೀಕೆರೆಯ ಕಸ್ತೂರಬಾ ಆಶ್ರಮಕ್ಕೆ ನೀಡುತ್ತೇನೆ ಎಂದು ಹೇಳಿದರು.

ಪ್ರಶಸ್ತಿಗಳನ್ನು ಪ್ರದಾನ ಮಾಡಿದ ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಮಾತನಾಡಿ, ಯಾವುದೇ ಪ್ರಶಸ್ತಿಯಾದರೂ ಸ್ವೀಕರಿಸಿದವರ ಜವಾಬ್ದಾರಿ ಹೆಚ್ಚಿಸಿ ಮತ್ತಷ್ಟು ಕೆಲಸ ಮಾಡಲು ಉತ್ತೇಜನ ನೀಡುತ್ತವೆ. ಸಾಧನೆ ಹಿಂದೆ ಕಠಿಣ ಪರಿಶ್ರಮ ಇದ್ದೇ ಇರುತ್ತದೆ. ಅಂತೆಯೇ ಕೃತಿಗಳ ರಚನೆಯೂ ಪರಿಶ್ರಮ ಅಪೇಕ್ಷಿಸುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮಾತನಾಡಿ, ಸಾಧನೆ ಗುರುತಿಸಿ ಪ್ರಶಸ್ತಿ ನೀಡುವುದು ಸಾಧಕರಿಗೆ ಉತ್ತೇಜನ ದೊರೆಯುತ್ತದೆ. ಜೊತೆಗೆ ಅವರಿಂದ ಮತ್ತಷ್ಟು ಸಾಧನೆ ಸಾಧ್ಯವಾಗುವ ಮೂಲಕ ಅದರ ಲಾಭ ಸಮಾಜಕ್ಕೆ ದೊರೆಯುವಂತಾಗಲಿದೆ ಎಂದು ಹೇಳಿದರು.

ಬಿಡುಗಡೆಗೊಂಡ ಕೃತಿಗಳ ಬಗ್ಗೆ ಮಾತನಾಡಿದ ಮುಕ್ತ ವಿವಿ ಅಕ್ಕಮಹಾದೇವಿ ಸಂಶೋಧನಾ ಪೀಠದ ನಿರ್ದೇಶಕಿ ಡಾ.ಕವಿತಾ ರೈ, ಡಾ.ಹೆಚ್.ಎಸ್.ಅನುಪಮಾ ಸಣ್ಣ ವಯಸ್ಸಿನಲ್ಲೇ 54 ಕೃತಿಗಳನ್ನು ರಚಿಸಿದ್ದಾರೆ. ಅವರೊಬ್ಬ ಬದ್ಧತೆ ಇರುವ ಬರಹಗಾರರು. ತಮ್ಮ 'ಬೆಳಗಿನೊಳಗು ಮಹಾದೇವಿಯಕ್ಕ' ಕೃತಿಯಲ್ಲಿ 12ನೇ ಶತಮಾನದಲ್ಲಿ ಪ್ರಜಾಸಾತ್ಮಕವಾಗಿ ಮಹಾದೇವಿಯಕ್ಕ ರೂಪುಗೊಂಡ ಬಗೆಯನ್ನು ವಿವರಿಸಿದ್ದಾರೆ. ಆ ಮೂಲಕ ಅಕ್ಕನ ಮೇರು ವ್ಯಕ್ತಿತ್ವವನ್ನು ಪ್ರತಿಷ್ಠಾಪಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸುತ್ತೂರು ಮಠದ ಶ್ರೀ ಶಿವಾತ್ರಿ ದೇಶಿಕೇಂದ್ರ ಸ್ವಾಮೀಜಿ ಮತ್ತು ಗದ್ದಿಗೆ ರಸ್ತೆಯಲ್ಲಿರುವ ಅರ್ಕ ಫೌಂಡೇಷನ್‌ನ ಸೆಂಟರ್ ಫಾರ್ ಕಾನ್ಷಿಯಸ್ ಅವೇರ್‌ನೆಸ್‌ನ ಸಂಸ್ಥಾಪಕ ಶ್ರೀ ಯೋಗಿ ಶ್ರೀನಿವಾಸ ಅರ್ಕ ಸಾನಿಧ್ಯ ವಹಿಸಿದ್ದರು. ಶ್ರೀ ಕಲಾನಿಕೇತನ ದೃಶ್ಯಕಲಾ ಕಾಲೇಜಿನ ಉಪನ್ಯಾಸಕ ಡಾ.ವಿಠ್ಠಲರೆಡ್ಡಿ ಎಫ್.ಚುಳಕಿ ಪ್ರಶಸ್ತಿ ಪುರಸ್ಕೃತರನ್ನು ಪರಿಚಯಿಸಿದರು. ಮಾಜಿ ಶಾಸಕ ಚಂದ್ರಕಾಂತ್ ಬೆಲ್ಲದ್, ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ ಮತ್ತಿತರರು ಹಾಜರಿದ್ದರು.

## ಡಾ.ಹೆಚ್.ಎಸ್.ಅನುಪಮಾ, ಎ.ಕಿರಣ್ ಸುಬ್ಬಯ್ಯರಿಗೆ ಪ್ರಶಸ್ತಿ ಪ್ರದಾನ

'ಬೆಳಗಿನೊಳಗು ಮಹಾದೇವಿಯಕ್ಕ' ಕೃತಿ ರಚನೆಗಾಗಿ ವೈದ್ಯೆ ಡಾ.ಹೆಚ್.ಎಸ್.ಅನುಪಮಾ ಅವರಿಗೆ 'ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ', ಶಿಲ್ಪ ಕಲಾವಿದ ಎ.ಕಿರಣ್ ಸುಬ್ಬಯ್ಯ ಅವರಿಗೆ ವಚನ ಚಿತ್ರರಚನಾ ಪಿತಾಮಹ 'ಶ್ರೀ ಎಂ.ವೀರಪ್ಪ ದತ್ತಿ ಪ್ರಶಸ್ತಿ' ಹಾಗೂ ಚಿತ್ರಕಲಾವಿದ ದಿವಂಗತ ಪ್ರಕಾಶ ಗಡಕರ ಅವರಿಗೆ ಶ್ರೀ ಡಿ.ವಿ.ಹಾಲಭಾವಿ ಪ್ರಶಸ್ತಿಯನ್ನು (ಅನಾರೋಗ್ಯ ಕಾರಣ ಜ.1ರಂದು ಪ್ರಕಾಶ ಗಡಕರ ಅವರು ನಿಧನರಾದ ಹಿನ್ನೆಲೆಯಲ್ಲಿ ಅವರ ಪತ್ನಿ ರಾಜೇಶ್ವರಿ ಪ್ರಶಸ್ತಿ ಸ್ವೀಕರಿಸಿದರು) ಪ್ರದಾನ ಮಾಡಲಾಯಿತು. ಅಲ್ಲದೆ, ಡಾ.ಡಿ.ಎ.ಶಂಕರ್ ಅವರ 'ಶೂನ್ಯ ಸಂಪಾದನೆ ಆಫ್ ಶಿವಗಣಪ್ರಸಾದಿ ಮಹದೇವಯ್ಯ' ಇಂಗ್ಲಿಷ್ ಕೃತಿ, ದಿವಂಗತ ಪ್ರೊ.ಮಲೆಯೂರು ಗುರುಸ್ವಾಮಿ ಸಂಪಾದಕತ್ವದ 'ಶ್ರೀ ಜಯಚಾಮರಾಜೇಂದ್ರ ಒಡೆಯರ್ ಜನ್ಮಶತಮಾನೋತ್ಸವ–ವಿಚಾರ ಸಂಕಿರಣ' ಮತ್ತು ಡಾ.ಎಸ್.ಆರ್.ಗುಂಜಾಳ ಅವರ 'ಪ್ರಸಾದ–ವರ್ಗೀಕೃತ ಪರಿಷ್ಕೃತ ಲೇಖನ ಸೂಚಿ' ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು.

# ನರೇಗಾ ಮತ್ತಷ್ಟು ಯಶಸ್ವಿಗೆ ಕಾರ್ಯನಿರ್ವಹಿಸಿ


ಮಡಿಕೇರಿ ತಾಲೂಕಿನ ಮದೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನರೇಗಾ ಯೋಜನೆಯಡಿ ಕಾಮಗಾರಿಯನ್ನು ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ತಾಂತ್ರಿಕ ವಿಭಾಗದ ಜಂಟಿ ನಿರ್ದೇಶಕ ವೇಣುಗೋಪಾಲ್ ಪರಿಶೀಲಿಸಿದರು.

ಮಡಿಕೇರಿ, ಫೆ.29–ಜಿಲ್ಲೆಯಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯನ್ನು ಉತ್ತಮವಾಗಿ ಅನುಷ್ಠಾನಗೊಳಿಸಲಾಗುತ್ತಿದ್ದು, ಮತ್ತಷ್ಟು ಯಶಸ್ವಿಯಾಗಿ ಕಾರ್ಯನಿರ್ವಹಿಸುವಂತೆ ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ತಾಂತ್ರಿಕ ವಿಭಾಗದ ಜಂಟಿ ನಿರ್ದೇಶಕ ವೇಣುಗೋಪಾಲ್ ತಿಳಿಸಿದರು.

ನಗರದ ಜಿಲ್ಲಾ ಪಂಚಾಯಿತಿ ಕಚೇರಿಯಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆ ಸಂಬಂಧ ನಡೆದ ಸಭೆಯಲ್ಲಿ ಮಾತನಾಡಿದ ಅವರು, ನರೇಗಾ ಯೋಜನೆಯು ರಾಷ್ಟ್ರಾದ್ಯಂತ ಅನುಷ್ಠಾನಗೊಳ್ಳುತ್ತಿರುವ ಮಹತ್ತರ ಯೋಜನೆಯಾಗಿದೆ. ತಾಂತ್ರಿಕವಾಗಿ ಹಲವಾರು ಬದಲಾವಣೆಗಳನ್ನು ಯೋಜನೆಯಲ್ಲಿ ತರಲಾಗಿದೆ. ಸೂಕ್ತ ಫಲಾನುಭವಿಗೆ ಯೋಜನೆಯ ಲಾಭ ತಲುಪಬೇಕು ಎಂದರು.

ಯೋಜನೆಯ ಅನುಷ್ಠಾನ ಸಂದರ್ಭದಲ್ಲಿ ಹಲವು ತಾಂತ್ರಿಕ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಜಿಎಸ್‌ಟಿ ಹಾಗೂ ರಾಜಧನ ಪಾವತಿಯನ್ನು ಸೂಕ್ತವಾಗಿ ನಿರ್ವಹಿಸಬೇಕು. ನರೇಗಾ ಯೋಜನೆಯಡಿ ಅನುಮೋದಿತ ವೈಯಕ್ತಿಕ ಮತ್ತು ಸಮುದಾಯ ಕಾಮಗಾರಿಗಳನ್ನು ಮತ್ತಷ್ಟು ವ್ಯವಸ್ಥಿತವಾಗಿ ಅನುಷ್ಠಾನಗೊಳಿಸಬೇಕು. ಸಾಮಗ್ರಿ ವೆಚ್ಚ ಪಾವತಿ ಮಾಡುವಾಗ ಎಲ್ಲಾ ಕಾಮಗಾರಿಗಳ ಎಫ್‌ಟಿಒಗಳನ್ನು ಸೂಕ್ತವಾಗಿ ಪರಿಶೀಲಿಸಬೇಕು ಎಂದು ತಿಳಿಸಿದರು.

**ಕಾಮಗಾರಿ ಪರಿಶೀಲನೆ:** ಸಭೆಯ ಬಳಿಕ ಜಂಟಿ ನಿರ್ದೇಶಕರು, ಮಡಿಕೇರಿ ತಾಲೂಕಿನ ಮದೆ ಗ್ರಾಮ ಪಂಚಾಯಿತಿಗೆ ಭೇಟಿ ನೀಡಿದರು. ಗ್ರಾಪಂ ವ್ಯಾಪ್ತಿಯಲ್ಲಿ ನರೇಗಾ ಯೋಜನೆಯಡಿ ನಿರ್ಮಾಣವಾದ ತೆರೆದ ಬಾವಿ, ದನದ ಕೊಟ್ಟಿಗೆ ಕಾಮಗಾರಿ ಪರಿಶೀಲಿಸಿದರು.

ನಂತರ ಸೋಮವಾರಪೇಟೆ ತಾಲೂಕಿನ ಬೇಳೂರು ಗ್ರಾಪಂನ ಸರ್ಕಾರಿ ಶಾಲೆಯಲ್ಲಿ ಗಿಡ ನೆಡುವ ಕಾಮಗಾರಿ, ಗಣಗೂರು ಗ್ರಾಪಂ ವ್ಯಾಪ್ತಿಯ ಸರ್ಕಾರಿ ಶಾಲೆಗೆ ಕಾಂಪೌಂಡ್ ನಿರ್ಮಾಣ, ಚರಂಡಿ ಮತ್ತು ಅಮೃತ ಸರೋವರ ಕಾರ್ಯಕ್ರಮದಡಿಯ ಅಭಿವೃದ್ಧಿಗೊಂಡ ಕೆರೆ ಕಾಮಗಾರಿ ಪರಿಶೀಲಿಸಿದರು. ಬಳಿಕ ಗ್ರಾಪಂ ಕಚೇರಿಗಳಿಗೆ ತೆರಳಿ ಕಾಮಗಾರಿ ಸಂಬಂಧ ಕಡತಗಳನ್ನು ಪರಿಶೀಲಿಸಿ, ಅಗತ್ಯ ಸಲಹೆ ಮತ್ತು ಮಾರ್ಗದರ್ಶನ ನೀಡಿದರು.

ಇದೇ ವೇಳೆ ಜಿಪಂ ಉಪಕಾರ್ಯದರ್ಶಿ ಜಿ.ಧನರಾಜು, ಮುಖ್ಯ ಲೆಕ್ಕಾಧಿಕಾರಿ ಝಿಲ್ ಖಾನ್, ಗ್ರಾಮೀಣ ಉದ್ಯೋಗ ಸಹಾಯಕ ನಿರ್ದೇಶಕರಾದ ಹೇಮಂತ್, ರಾಕೇಶ್, ಸಹಾಯಕ ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿ ಮಹೇಂದ್ರ, ಜಿಲ್ಲಾ ಐಇಸಿ ಸಂಯೋಜಕ ಪವನ್ ಕುಮಾರ್, ತಾಂತ್ರಿಕ ಸಂಯೋಜಕರಾದ ರಂಜಿತ್, ದಿಲೀಪ್ ಕುಮಾರ್ ಇತರರು ಇದ್ದರು.

## ಗಾಂಜಾ ಮಾರುತ್ತಿದ್ದವನ ಬಂಧನ

ಮಡಿಕೇರಿ, ಫೆ.29–ಗಾಂಜಾ ಮಾರುತ್ತಿದ್ದ ವ್ಯಕ್ತಿಯನ್ನು ವಿರಾಜಪೇಟೆಯ ಗ್ರಾಮಾಂತರ ಪೊಲೀಸರು ಗುರುವಾರ ಬಂಧಿಸಿದ್ದಾರೆ.



ಕಳತ್‌ಮಾಡ್ ಗ್ರಾಮದ ಗೊಟ್ಟಡ ಕಾಲೋನಿ ನಿವಾಸಿ ಪಿ.ಎಸ್.ಸಚಿನ್ (32) ಬಂಧಿತ ಆರೋಪಿ. ಆತ ಅಮ್ಮತ್ತಿಯ ಮುತ್ತಪ್ಪ ದೇವಸ್ಥಾನದ ಕಡೆಗೆ ತೆರಳುವ ರಸ್ತೆಯ ಬಸ್ ನಿಲ್ದಾಣ ಬಳಿ ಗಾಂಜಾ ಮಾರಲು ಹೊಂಚುಹಾಕುತ್ತಿದ್ದಾಗ ಪೊಲೀಸರಿಗೆ ಸಿಕ್ಕಿ ಬಿದ್ದಿದ್ದಾನೆ. ಈತನಿಂದ 70 ಗ್ರಾಂ ಗಾಂಜಾವನ್ನು ವಶಕ್ಕೆ ಪಡೆಯಲಾಗಿದೆ. ವಿರಾಜಪೇಟೆ ಡಿವೈಎಸ್‌ಪಿ ಆರ್.ಮೋಹನ್ ಕುಮಾರ್ ನೇತೃತ್ವದಲ್ಲಿ ಬಂಧಿಸಲಾಗಿದೆ. ಈ ಸಂಬಂಧ ವಿರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಜನರಿಗೆ ಕೇಂದ್ರದ ಅಭಿವೃದ್ಧಿ ಕಾರ್ಯ ತಿಳಿಸಿ

## ಪದಗ್ರಹಣ ಕಾರ್ಯಕ್ರಮದಲ್ಲಿ ಬಿಜೆಪಿ ಕಾರ್ಯಕರ್ತರಿಗೆ ಮಾಜಿ ಡಿಸಿಎಂ ಅಶ್ವತ್ಥ್‌ನಾರಾಯಣ ಸಲಹೆ


ವಿರಾಜಪೇಟೆಯಲ್ಲಿ ಗುರುವಾರ ನಡೆದ ಬಿಜೆಪಿ ಮಂಡಲ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮವನ್ನು ಮಾಜಿ ಉಪಮುಖ್ಯಮಂತ್ರಿ ಡಾ.ಅಶ್ವತ್ಥ್‌ನಾರಾಯಣ ಉದ್ಘಾಟಿಸಿದರು. ಸಂಸದ ಪ್ರತಾಪ್ ಸಿಂಹ, ಮಾಜಿ ಶಾಸಕ ಕೆ.ಜಿ.ಬೋಪಯ್ಯ, ವಿಧಾನಪರಿಷತ್ ಮಾಜಿ ಸದಸ್ಯ ಸುನಿಲ್ ಸುಬ್ರಮಣಿ, ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ವಿರಾಜಪೇಟೆ ಮಂಡಲ ಅಧ್ಯಕ್ಷ ಮಾಚಿಮಂಡ ಸುವಿನ್ ಗಣಪತಿ ಇದ್ದರು.

ವಿರಾಜಪೇಟೆ, ಫೆ.29–ಕೇಂದ್ರ ಸರ್ಕಾರ 10 ವರ್ಷದಲ್ಲಿ ಬಡಕುಟುಂಬ, ರೈತರು, ಮಹಿಳೆಯರು ಹಾಗೂ ಯುವಕರು ಸೇರಿದಂತೆ ಎಲ್ಲಾ ಜನರಿಗೂ ರೂಪಿಸಿರುವ ವಿವಿಧ ಯೋಜನೆಯ ಅಭಿವೃದ್ಧಿ ಕಾರ್ಯಗಳನ್ನು ಪಕ್ಷದ ಕಾರ್ಯಕರ್ತರು ಮನೆ ಮನೆಗೆ ತೆರಳಿ ತಿಳಿಸಬೇಕು ಎಂದು ಮಾಜಿ ಉಪಮುಖ್ಯಮಂತ್ರಿ ಹಾಗೂ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಉಸ್ತುವಾರಿ ಡಾ.ಅಶ್ವತ್ಥ್‌ನಾರಾಯಣ ಹೇಳಿದರು.

ಪಟ್ಟಣದಲ್ಲಿ ಗುರುವಾರ ನಡೆದ ಬಿಜೆಪಿ ವಿರಾಜಪೇಟೆ ಮಂಡಲ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಮಾತನಾಡಿದ ಅವರು, ಹಾದಿ ಬೀದಿಯಲ್ಲಿ ಚರ್ಚಿಸುವುದು ಬೇಡ. ವಿರೋಧಿಗಳಿಗೆ ಅವಕಾಶ ನೀಡದೆ, ಪಕ್ಷಕ್ಕೆ ಧಕ್ಕೆಯಾಗದಂತೆ ಪಕ್ಷದ ಅಭ್ಯರ್ಥಿಯ ಗೆಲುವಿಗೆ ಶ್ರಮಿಸಬೇಕು. ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಉತ್ತಮ ಅಭಿವೃದ್ಧಿ ಹಾಗೂ ಜನಪರ ಕೆಲಸ ಮಾಡಿದ್ದು, ಭಾರತವನ್ನು ವಿಶ್ವ ಗುರುವಾಗಿಸುವ ಗುರಿ ಇಟ್ಟುಕೊಂಡಿದ್ದಾರೆ. ಆದ್ದರಿಂದ ಮತ್ತೆ ಮೋದಿ ಅವರನ್ನು ಪ್ರಧಾನಿಯಾಗಿ ಮಾಡಬೇಕಾಗಿದೆ ಎಂದರು.

ಕಾರ್ಯಕರ್ತರು ಮನೆ ಮನೆಗೆ ತೆರಳಿ 10 ವರ್ಷದ ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಯ ಬಗ್ಗೆ ಜನರಿಗೆ ವಿಚಾರ ಮುಟ್ಟಿಸುವ ಕೆಲಸ ಮಾಡಬೇಕು. ಕೊಡಗಿನಲ್ಲಿ ಕಳೆದ ಬಾರಿಗಿಂತ ಈ ಬಾರಿ ಹೆಚ್ಚು ಮತಗಳು ಬರುವಂತೆ ಶ್ರಮಿಸಬೇಕು. ಇನ್ನು 50 ದಿನಗಳಲ್ಲಿ ಶ್ರಮದ ಹೊಣೆಗಾರಿಕೆ ಕಾರ್ಯಕರ್ತರದಾಗಿದೆ. ಅಭ್ಯರ್ಥಿಯ ಬಗ್ಗೆ ಯಾವುದೇ ಗೊಂದಲ ಬೇಡ. ಅದನ್ನು ರಾಜ್ಯ ಮತ್ತು ಕೇಂದ್ರದ ವರಿಷ್ಠರು ತೀರ್ಮಾನಿಸುತ್ತಾರೆ. ಸಂಸದ ಪ್ರತಾಪ್ ಸಿಂಹ ಅವರ ಅವಧಿಯಲ್ಲಿ ಉತ್ತಮ ಕೆಲಸ ಮಾಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮಾಜಿ ಶಾಸಕ ಕೆ.ಜಿ.ಬೋಪಯ್ಯ ಮಾತನಾಡಿ, ನರೇಂದ್ರ ಮೋದಿ ಅವರು ಮೂರನೇ ಬಾರಿ ಪ್ರಧಾನಿಯಾಗಬೇಕೆಂಬ ಮಹತ್ವದ ಜವಾಬ್ದಾರಿಯಲ್ಲಿ ನಾವು ಯುದ್ಧದಂತೆ ಹೋರಾಡಬೇಕು. ಅತಿಯಾದ ಆತ್ಮವಿಶ್ವಾಸ ಬೇಡ, ಮೂಲಸೌಕರ್ಯದ ಜೊತೆಗೆ ದೇಶದ ಹಿತಾಸಕ್ತಿ ಮುಖ್ಯವಾಗಿರುತ್ತದೆ. ದೇಶದ ಏಕತೆ, ಅಖಂಡತೆಯನ್ನು ಕಾಪಾಡಬೇಕು. ಇಲ್ಲವಾದರೆ ನಾವು ಪವಿತ್ರ ದೇಗುಲ ವಿಧಾನಸೌಧದಲ್ಲಿ ಪಾಕಿಸ್ತಾನ ಪರ ಘೋಷಣೆಯಂತ ಘಟನೆಯನ್ನು ಕಾಣಬೇಕಾದಿತು. ಕೊಡಗು ಸೂಕ್ಷ್ಮ ಪ್ರದೇಶ. ಆದ್ದರಿಂದ ಕಾರ್ಯಕರ್ತರು ಪಕ್ಷದ ಅಭ್ಯರ್ಥಿಯ ಗೆಲುವಿಗೆ ಶ್ರಮಿಸಬೇಕು ಎಂದು ಹೇಳಿದರು.

ವಿಧಾನಪರಿಷತ್ ಮಾಜಿ ಸದಸ್ಯ ಸುನಿಲ್ ಸುಬ್ರಮಣಿ, ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ವಿರಾಜಪೇಟೆ ಮಂಡಲ ಅಧ್ಯಕ್ಷ ಮಾಚಿಮಂಡ ಸುವಿನ್ ಗಣಪತಿ ಮಾತನಾಡಿದರು. ಪ್ರಧಾನ ಕಾರ್ಯದರ್ಶಿ ಅಜಿತ್ ಕರುಂಬಯ್ಯ, ಜಿಲ್ಲಾ ಸಮಿತಿಯ ಪ್ರಧಾನ ಕಾರ್ಯದರ್ಶಿಗಳಾದ ನೆಲ್ಲಿರ ಚಲನ್ ಕುಮಾರ್, ವಿ.ಕೆ.ಲೋಕೇಶ್, ಮಹೇಶ್ ಜೈನಿ, ಮಡಿಕೇರಿ ನಗರಭೆ ಅಧ್ಯಕ್ಷೆ ಅನಿತಾ ಪೂವಯ್ಯ, ಬೀನಾ ಬೊಳ್ಳಮ್ಮ, ಯಮುನ ಚಂಗಪ್ಪ, ಜಿಲ್ಲಾ ಕೇಂದ್ರ ಬ್ಯಾಂಕ್ ಅಧ್ಯಕ್ಷ ಬಾಂಡ್ ಗಣಪತಿ, ರೈತ ಮೋರ್ಚಾ ಜಿಲ್ಲಾಧ್ಯಕ್ಷ ರಂಜಿ ಪೂಣಚ್ಚ, ಎಸ್‌ಟಿ ಮೋರ್ಚಾ ಅಧ್ಯಕ್ಷ ಪರಮೇಶ್ವರ, ಒಬಿಸಿ ಘಟಕದ ಅಧ್ಯಕ್ಷ ಅಪ್ಪು ರವೀಂದ್ರ, ರಾಜ್ಯ ಶಿಸ್ತು ಸಮಿತಿ ಸದಸ್ಯೆ ರೀನಾ ಪ್ರಕಾಶ್, ವಿರಾಜಪೇಟೆ ನಗರ ಬಿಜೆಪಿ ಅಧ್ಯಕ್ಷ ಟಿ.ಪಿ.ಕೃಷ್ಣ, ಜಿಲ್ಲಾ ಮಾಜಿ ಅಧ್ಯಕ್ಷರಾದ ಪಳೇಯಂಡ ರಾಬೀನ್ ದೇವಯ್ಯ, ಭಾರತೀಶ್, ಜಿಲ್ಲಾ ಸಮಿತಿ ಉಪಾಧ್ಯಕ್ಷರಾದ ಗುಮ್ಮಟ್ಟಿರ ದಿಲನ್ ಗಣಪತಿ, ಕುಞಂಡ ಅರುಣ್‌ಭೀಮಯ್ಯ, ಕಾಂಗೀರ ಅಶ್ವಿನ್ ಉಪಸ್ಥಿತರಿದ್ದರು.

ಸಮಾರಂಭದ ಪ್ರಯುಕ್ತ ರಕ್ತದಾನ ಶಿಬಿರ ಹಾಗೂ ಬೈಕ್ ಜಾಥಾ ಏರ್ಪಡಿಸಲಾಗಿತ್ತು. ಇದೇ ವೇಳೆ ಪುಷ್ಪೇಶ್ ಬರೆದ 10 ವರ್ಷದ ಮೈಸೂರು ಕೇಂದ್ರ ಕಾರಾಗೃಹ ವಾಸ ಕುರಿತ ಪುಸ್ತಕವನ್ನು ಸಂಸದ ಪ್ರತಾಪ್ ಸಿಂಹ ಬಿಡುಗಡೆ ಮಾಡಿದರು.

### ಕೇಂದ್ರದ ಅನುದಾನದಿಂದ ಉತ್ತಮ ಕೆಲಸ

ಕೊಡಗಿನಲ್ಲಿ ವೈದ್ಯಕೀಯ ಕಾಲೇಜು ಸೇರಿದಂತೆ ಹಲವಾರು ಶೈಕ್ಷಣಿಕ ಸಂಸ್ಥೆಗಳ ಸ್ಥಾಪನೆ, ಕೊಡವ ಹಾಕಿ, ಕೊಡವ ಒಕ್ಕೂಟ, ದಸರಾ ಸೇರಿದಂತೆ ಹೆದ್ದಾರಿ ಅಭಿವೃದ್ಧಿಗೆ ಕೇಂದ್ರದಿಂದ ಸಾಕಷ್ಟು ಅನುದಾನ ನೀಡುವ ಮೂಲಕ ಉತ್ತಮ ಕೆಲಸ ಮಾಡಲಾಗಿದೆ ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದರು.

ಮೈಸೂರು–ಕುಶಾಲನಗರ ನಾಲ್ಕು ಪಥದ ರಸ್ತೆ ನಿರ್ಮಾಣ 15 ತಿಂಗಳಲ್ಲಿ ಮುಗಿಯುತ್ತದೆ. ಕಾರ್ಯಕರ್ತರು ಪಕ್ಷದ ಅಭಿವೃದ್ಧಿ ಕೆಲಸವನ್ನು ಜನರಿಗೆ ಮುಟ್ಟಿಸುವಂತಾಗಬೇಕು. ಬಿಜೆಪಿಯ ಜನಪರ ಯೋಜನೆಗಳ ಬಗ್ಗೆ ಜನರ ಅರಿವಿಗೆ ತರಬೇಕು. ಕೊಡಗಿನ ಹಲವು ಪ್ರಮುಖ ರಸ್ತೆಗಳ ಅಭಿವೃದ್ಧಿ ಕಾಮಗಾರಿ ಶೀಘ್ರ ಆರಂಭವಾಗಲಿವೆ. ಕಳೆದ ಎರಡು ಬಾರಿ ಕೊಡಗಿನ ಜನ ನನ್ನನ್ನು ಹೆಚ್ಚು ಬೆಂಬಲಿಸಿದ್ದಾರೆ. ಈ ಬಾರಿಯೂ ಬೆಂಬಲಿಸುವ ಮೂಲಕ ಲಕ್ಷಕ್ಕೂ ಹೆಚ್ಚು ಅಂತರ ಮತ ಪಡೆಯುವ ನಂಬಿಕೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕೊಡಗು–ಮೈಸೂರು ಕ್ಷೇತ್ರದಲ್ಲಿ ಉತ್ತಮ ಅಭಿವೃದ್ಧಿ ಕೆಲಸಗಳನ್ನು ಮಾಡಲಾಗಿದೆ. ಕಾಂಗ್ರೆಸ್‌ನ ಶಾಸಕರು ಕೊಡಗಿನಾದ್ಯಂತ 8 ತಿಂಗಳು ಓಡಾಡಿದ್ದೇ ಸಾಧನೆ. ಇದೀಗ ನಡೆಯುತ್ತಿರುವ ಕಾಮಗಾರಿ ಅನುದಾನ ಹಿಂದಿನ ಬಿಜೆಪಿ ಸರ್ಕಾರದ್ದು, ಕೇಂದ್ರ ಸರ್ಕಾರದ ಕುಡಿಯುವ ನೀರಿನ 149 ಕೋಟಿ ರೂ. ಅಮೃತ್ ಯೋಜನೆಯನ್ನು ತಮ್ಮದು ಎನ್ನುವ ರಾಜ್ಯ ಸರ್ಕಾರದ ಕೊಡುಗೆ ಶೂನ್ಯ ಎಂದರು.

# ಸಿದ್ದಾಪುರದಲ್ಲಿ ಸಿಐಟಿಯು ಪ್ರತಿಭಟನೆ



ವಿರಾಜಪೇಟೆ ತಾಲೂಕಿನ ಸಿದ್ದಾಪುರ ಬಸ್ ನಿಲ್ದಾಣದಲ್ಲಿ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಸಿಐಟಿಯು ಸಂಘಟನೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಸಿದ್ದಾಪುರ, ಫೆ29–ಕಾರ್ಮಿಕ ವಿರೋಧಿ ನೀತಿ, ಬೆಲೆ ಏರಿಕೆ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿ ಸಿಐಟಿಯು ಸಂಘಟನೆ ಕಾರ್ಯಕರ್ತರು ವಿರಾಜಪೇಟೆ ತಾಲೂಕಿನ ಸಿದ್ದಾಪುರ ಬಸ್ ನಿಲ್ದಾಣದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ಸಂಘಟನೆಯ ಜಿಲ್ಲಾಧ್ಯಕ್ಷ ಪಿ.ಆರ್.ಭರತ್ ಮಾತನಾಡಿ, ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಅಧಿಕಾರಕ್ಕೆ ಬಂದು 10 ವರ್ಷಗಳಾಗಿದೆ. ಚುನಾವಣೆಗೂ ಮೊದಲು ಪಕ್ಷದ ಪ್ರಣಾಳಿಕೆಯಲ್ಲಿ 2 ಕೋಟಿ ಉದ್ಯೋಗ ಸೃಷ್ಟಿ, ಡಾ.ಸ್ವಾಮಿನಾಥನ್ ಶಿಫಾರಸಿನಂತೆ ಬೆಂಬಲ ಬೆಲೆಯ ಕಾನೂನು ರಚನೆ ತಿಳಿಸಲಾಗಿತ್ತು. ಆದರೆ, ಇವು ಘೋಷಣೆಯಾಗಿ ಉಳಿದಿವೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.


ಕೇಂದ್ರ ಸರ್ಕಾರ ದೇಶದ ಕೋಟ್ಯಾಂತರ ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಭಾಗವಾಗಿ ಕನಿಷ್ಠ ಮಾಸಿಕ ಪಿಂಚಣಿ 6000 ರೂ., ಪಿಎಫ್ ಪಿಂಚಣಿ 10,000 ರೂ.ಗೆ ಹೆಚ್ಚಿಸಬೇಕು. ಎಲ್ಲಾ ಅಸಂಘಟಿತ ಕಾರ್ಮಿಕರ ಸಮಗ್ರ ಸಾಮಾಜಿಕ ಭದ್ರತೆಗೆ ಜಿಡಿಪಿ ಶೇ.6ರಷ್ಟು ಮೀಸಲಿರಿಸಬೇಕು ಎಂದು ಒತ್ತಾಯಿಸಿದರು.

ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ಸಿ.ಸಾಬು, ಜಿಲ್ಲಾ ಖಜಾಂಚಿ ಕುಟ್ಟಪ್ಪನ್, ಉಪಾಧ್ಯಕ್ಷ ಮಹದೇವ್, ಟಿ.ಟಿ.ಉದಯನ್, ಚಂದ್ರನ್, ಶಿವರಾಮನ್, ಮುಸ್ತಫ, ಮಹದೇವ ಎಂ.ಜಿ.ಜೋಸ್, ಸೌಕತ್ ಮತ್ತಿತರರು ಭಾಗವಹಿಸಿದ್ದರು.

## ರಸ್ತೆಗೆ ಉರುಳಿದ ಮರ: ಬೈಕ್ ಸವಾರರಿಬ್ಬರು ಪಾರು

ಮಡಿಕೇರಿ, ಫೆ.29–ಬೃಹತ್ ಗಾತ್ರದ ಮರ ರಸ್ತೆಯಲ್ಲಿ ಬರುತ್ತಿದ್ದ ಬೈಕ್ ಮೇಲೆ ಉರುಳಿ ಬಿದ್ದಿದ್ದು, ಅದೃಷ್ಟವಶಾತ್ ಇಬ್ಬರು ಬೈಕ್ ಸವಾರರು ಪ್ರಾಣಾಪಾಯದಿಂದ ಪಾರಾದ ಘಟನೆ ವಿರಾಜಪೇಟೆ–ನಾಪೋಕ್ಲು ಮುಖ್ಯ ರಸ್ತೆಯ ಕರಡ ಸೇತುವೆ ಬಳಿ ನಡೆದಿದೆ.

ಪೊನ್ನಂಪೇಟೆಯ ಹಳ್ಳಿಗಟ್ಟು ಗ್ರಾಮದ ನಿವಾಸಿಗಳಾದ ನವೀನ ಹಾಗೂ ಸುಬ್ರಮಣಿ ಪಾರಾದವರು. ಈ ಇಬ್ಬರು ಕಕ್ಕಬ್ಬೆ ಇಗ್ಗುತಪ್ಪ ದೇವಸ್ಥಾನಕ್ಕೆ ತೆರಳಿ ಹಿಂತಿರುಗುತ್ತಿದ್ದಾಗ ಕರಡ ಸೇತುವೆ ಸಮೀಪದ ತೋಟವೊಂದರ ಬೃಹತ್ ಗಾತ್ರದ ಮರ ರಸ್ತೆಗೆ ಅಡ್ಡಲಾಗಿ ಉರುಳಿದೆ. ಆದರೆ, ಅದೃಷ್ಟವಶಾತ್ ಇಬ್ಬರು ಪ್ರಾಣಾಪಾಯದಿಂದ



ಪಾರಾಗಿದ್ದಾರೆ. ಮರ ಬಿದ್ದ ವೇಳೆ ವಿದ್ಯುತ್ ಸರಬರಾಜು ಇಲ್ಲದ ಕಾರಣ ಅವಘಡ ತಪ್ಪಿದಂತಾಗಿದೆ. ಮರ ಬಿದ್ದ ರಭಸಕ್ಕೆ ವಿದ್ಯುತ್ ಕಂಬವೊಂದು ತುಂಡಾಗಿದ್ದು, 1 ಗಂಟೆಗೂ ಅಧಿಕ ಕಾಲ ವಾಹನ ಸಂಚಾರ ಅಸ್ತವ್ಯಸ್ತವಾಗಿತ್ತು. ನಂತರ ನರಿಯಂದಡ ಗ್ರಾಪಂ ಉಪಾಧ್ಯಕ್ಷ ಕೋಡಿರ ವಿನೋದ್ ನಾಣಯ್ಯ, ಜೆಸಿಬಿ ಮೂಲಕ ಮರ ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

# ಮಾಜಿ ಶಾಸಕ, ಕಾಂಗ್ರೆಸ್ ಜಿಲ್ಲಾಧ್ಯಕ್ಷರಿಗೆ ಒಲಿದ ನಿಗಮ ಸ್ಥಾನ

## ರಾಜ್ಯ ಅನುಸೂಚಿ ಜಾತಿ, ಬುಡಕಟ್ಟುಗಳ ಆಯೋಗದ ಅಧ್ಯಕ್ಷರಾಗಿ ಎಸ್.ಜಯಣ್ಣ, ಕಾಡಾ ಅಧ್ಯಕ್ಷರಾಗಿ ಪಿ.ಮರಿಸ್ವಾಮಿ ನೇಮಕ


ಚಾಮರಾಜನಗರ, ಫೆ.29–ಲೋಕಸಭೆ ಚುನಾವಣೆ ಸಮೀಸುತ್ತಿರುವ ಸಂದರ್ಭದಲ್ಲಿ ಸರ್ಕಾರ ರಾಜ್ಯದ 44 ನಿಗಮ ಮಂಡಳಿಗಳಿಗೆ ಅಧ್ಯಕ್ಷರ ಆಯ್ಕೆಯನ್ನು ಮಾಡಿದ್ದು, ಈ ಪಟ್ಟಿಯಲ್ಲಿ ಚಾಮರಾಜನಗರಕ್ಕೆ ಎರಡು ಸ್ಥಾನಗಳು ಲಭಿಸಿದೆ.

ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಎಸ್.ಜಯಣ್ಣ ಅವರಿಗೆ ಕರ್ನಾಟಕ ರಾಜ್ಯ ಅನುಸೂಚಿ ಜಾತಿಗಳು ಹಾಗೂ ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷರಾಗಿ ಹಾಗೂ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಪಿ.ಮರಿಸ್ವಾಮಿ ಅವರನ್ನು ಕಾವೇರಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ನಿಗಮ (ಕಾಡಾ)ದ ಅಧ್ಯಕ್ಷರಾಗಿ ನೇಮಕ ಮಾಡಲಾಗಿದೆ.

**ಮಾಜಿ ಶಾಸಕರಿಗೆ ನಿಗಮ ಸ್ಥಾನ:** ಜಿಲ್ಲಾ ಕಾಂಗ್ರೆಸ್‌ನ ಹಿರಿಯ ರಾಜಕಾರಣಿಯಾದ ಕೊಳ್ಳೇಗಾಲ ಮಾಜಿ ಶಾಸಕ ಎಸ್.ಜಯಣ್ಣ ಅವರಿಗೆ ನಿರೀಕ್ಷೆಯಂತೆ ನಿಗಮ ಮಂಡಳಿಯ ಸ್ಥಾನ ಲಭಿಸಿದೆ.

ಜಯಣ್ಣ ಅವರು ಕೊಳ್ಳೇಗಾಲ ಕ್ಷೇತ್ರದಿಂದ ಕಾಂಗ್ರೆಸ್ ಪ್ರಬಲ ಟಿಕೆಟ್ ಆಕಾಂಕ್ಷಿಯಾಗಿದ್ದರು. ಆದರೆ, ಚುನಾವಣೆ ಕೊನೆ ಘಳಿಗೆಯಲ್ಲಿ ಅವರ ಬದಲು ಎ.ಆರ್.ಕೃಷ್ಣಮೂರ್ತಿ ಅವರಿಗೆ ಟಿಕೆಟ್ ಲಭಿಸಿತ್ತು. ಹೀಗಾಗಿ, ಜಯಣ್ಣ ಅವರಿಗೆ ಕಾಂಗ್ರೆಸ್ ಸರ್ಕಾರದಲ್ಲಿ ನಿಗಮ ಮಂಡಳಿ ಸ್ಥಾನ ಸಿಗುತ್ತದೆ ಎಂಬ ನಿರೀಕ್ಷೆ ಇತ್ತು ಅದರಂತೆ ಅವರಿಗೆ ಸ್ಥಾನ ಲಭಿಸಿದೆ.


ಎಸ್.ಜಯಣ್ಣ


ಪಿ.ಮರಿಸ್ವಾಮಿ

ಅಲ್ಲದೆ, ಜಯಣ್ಣ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದಾರೆ. ಕೊಳ್ಳೇಗಾಲದಲ್ಲಿ ಕಾಂಗ್ರೆಸ್ ಗೆಲುವಿಗೆ ತಮ್ಮದೇ ಕೊಡುಗೆ ನೀಡಿದ್ದರು. ಇವೆಲ್ಲದರ ಆಧಾರದಡಿ ಅವರಿಗೆ ಸರ್ಕಾರ ನಿಗಮ ಮಂಡಳಿ ಸ್ಥಾನ ನೀಡಿದೆ.

ಒಟ್ಟಾರೆ, ಜಿಲ್ಲೆಯ ಇಬ್ಬರು ನಾಯಕರಿಗೆ ಸರ್ಕಾರ ನಿಗಮ ಮಂಡಳಿ ಸ್ಥಾನ ನೀಡುವ ಮೂಲಕ ಜಿಲ್ಲೆಗೆ ಆದ್ಯತೆ ನೀಡಿದೆ.

**ಜಿಲ್ಲಾಧ್ಯಕ್ಷರಿಗೆ ಒಲಿದ ಪಟ್ಟ:** ಕಳೆದ ಎರಡು ಅವಧಿಯಿಂದ ಕಾಂಗ್ರೆಸ್ ಜಿಲ್ಲಾಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರಾದ ಪಿ.ಮರಿಸ್ವಾಮಿ ಅವರಿಗೆ ಕಾಡಾ ಅಧ್ಯಕ್ಷ ಸ್ಥಾನ ಲಭಿಸಿದೆ.

ಪಕ್ಷದ ಜಿಲ್ಲಾಧ್ಯಕ್ಷರಿಗೆ ನಿಗಮದಲ್ಲಿ ಸ್ಥಾನ ನೀಡಬೇಕೆಂಬ ಪಕ್ಷದ ತೀರ್ಮಾನದ ಅಡಿಯಲ್ಲಿ ಮರಿಸ್ವಾಮಿ ಅವರಿಗೆ ಈ ಸ್ಥಾನ ಲಭಿಸಿದೆ ಎಂದು ಹೇಳಲಾಗುತ್ತಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯ ನಾಲ್ಕು ಕ್ಷೇತ್ರಗಳ ಪೈಕಿ ಮೂರು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿತ್ತು. ಹೀಗಾಗಿ, ಮರಿಸ್ವಾಮಿ ಅವರಿಗೆ ಕಾಡಾ ಅಧ್ಯಕ್ಷ ಸ್ಥಾನ ದೊರಕಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಮಾಜಿ ಸಚಿವ ದಿವಂಗತ ಎಚ್.ಎಸ್.ಮಹದೇವಪ್ರಸಾದ್ ಹಾಗೂ ಮಾಜಿ ಸಂಸದ ಆರ್.ಧ್ರುವನಾರಾಯಣ್ ಅವರ ಆಪ್ತ ಬಳಗದಲ್ಲಿ ಇವರು ಗುರುತಿಸಿಕೊಂಡಿದ್ದರು.

> ಪಕ್ಷ ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ದುಡಿದ ಪರಿಣಾಮ ನನಗೆ ಈ ಸ್ಥಾನ ಲಭಿಸಿದೆ. ಸರ್ಕಾರ ನನ್ನ ಸೇವೆ ಪರಿಗಣಿಸಿದಕ್ಕೆ ಖುಷಿ ತುಸಿದೆ. ಕಾಡಾದಿಂದ ರೈತರಿಗೆ ಉಪಯೋಗವಾಗುವ ಕಾರ್ಯಕ್ರಮಗಳಿದ್ದು, ಅವುಗಳನ್ನು ಅನುಷ್ಠಾನಕ್ಕೆ ತರುತ್ತೇನೆ. ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ.
> –ಪಿ.ಮರಿಸ್ವಾಮಿ, ಕಾಡಾ ಅಧ್ಯಕ್ಷ

# ಎಪಿಎಂಸಿ ಅಧ್ಯಕ್ಷರಾಗಿ ಮಹದೇವಸ್ವಾಮಿ, ಉಪಾಧ್ಯಕ್ಷರಾಗಿ ರಾಮಚಂದ್ರ ಆಯ್ಕೆ

ಚಾಮರಾಜನಗರ, ಫೆ.29–ತಾಲೂಕು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ನೂತನ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿಗರಾದ ಎಚ್.ಎನ್.ಮಹದೇವಸ್ವಾಮಿ(ಸೋಮೇಶ್) ಹಾಗೂ ಉಪಾಧ್ಯಕ್ಷರಾಗಿ ಎಲ್.ರಾಮಚಂದ್ರ ಅವರು ಅವಿರೋಧವಾಗಿ ಆಯ್ಕೆಯಾದರು.

ನಗರದ ಎಪಿಎಂಸಿ ಕಚೇರಿ ಸಭಾಂಗಣದಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಗರಾದ ಎಚ್.ಎನ್.ಮಹದೇವಸ್ವಾಮಿ ಹಾಗೂ ಎಲ್.ರಾಮಚಂದ್ರ ಮಾತ್ರ ನಾಮಪತ್ರ ಸಲ್ಲಿಸಿದ್ದರು. ಚುನಾವಣಾಧಿಕಾರಿಯಾದ ತಹಶೀಲ್ದಾರ್ ಬಸವರಾಜು ಅವಿರೋಧ ಆಯ್ಕೆ ಘೋಷಿಸಿದರು. ಎಪಿಎಂಸಿ ಕಾರ್ಯದರ್ಶಿ ಪ್ರಕಾಶ್‌ಕುಮಾರ್ ಇದ್ದರು.

ಅಧ್ಯಕ್ಷ ಸೋಮೇಶ್ ಮಾತನಾಡಿ, ಎಪಿಎಂಸಿಯಿಂದ ದೊರೆಯುವ ಎಲ್ಲಾ ಸವಲತ್ತುಗಳನ್ನು ರೈತರಿಗೆ ತಲುಪಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.

ನೂತನ ಅಧ್ಯಕ್ಷ–ಉಪಾಧ್ಯಕ್ಷರನ್ನು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಪಿ.ಮರಿಸ್ವಾಮಿ ಹಾಗೂ ಮುಖಂಡರು ಅಭಿನಂದಿಸಿದರು. ಎಪಿಎಂಸಿ ನಿರ್ದೇಶಕರಾದ ಆಲೂರು ಪ್ರದೀಪ್, ಹೊಮ್ಮ ರವಿಶಂಕರಮೂರ್ತಿ, ಗುರುಸ್ವಾಮಿ, ಪ್ರೇಮ ಶೇಖರಪ್ಪ, ಎಂ.ಮಹೇಶ್, ವೆಂಕಟರಾವ್ ಸಾಠೆ, ಪುಟ್ಟಬಸವಮ್ಮ, ಕೈಸರ್ ಅಹಮದ್, ಎಂ.ಬಿ.ಕುಮಾರ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ಆರ್.ಮಹದೇವ್, ಚಿಕ್ಕಮಹದೇವ್, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಬ್ಲಾಕ್ ಅಧ್ಯಕ್ಷರಾದ ಎ.ಎಸ್.ಗುರುಸ್ವಾಮಿ, ಮಹಮ್ಮದ್ ಇದ್ದರು.


ಚಾಮರಾಜನಗರ ಎಪಿಎಂಸಿಯ ನೂತನ ಅಧ್ಯಕ್ಷ ಎಚ್.ಎನ್.ಮಹದೇವಸ್ವಾಮಿ ಹಾಗೂ ಉಪಾಧ್ಯಕ್ಷ ಎಲ್.ರಾಮಚಂದ್ರ ಅವರನ್ನು ನಿರ್ದೇಶಕರು ಅಭಿನಂದಿಸಿದರು.

# ಬೇಗೂರಿನಲ್ಲಿ ಮಾರಮ್ಮನ ಹಬ್ಬ ಆಚರಣೆ


ಬೇಗೂರು ಗ್ರಾಮದ ಮಾರಮ್ಮ ದೇವಿಗೆ ಮಹಿಳೆಯರು ತಂಬಿಟ್ಟಿಗೆ ಗಣಿಗಲೆ ಹೂವಿನಿಂದ ಅಲಂಕರಿಸಿ ತಟ್ಟೆಯ ಮೇಲೆ ದೀಪವನ್ನಿರಿಸಿ ಪೂಜೆ ಸಲ್ಲಿಸಿದರು.

ಬೇಗೂರು(ಗುಂಡ್ಲುಪೇಟೆ), ಫೆ.29–ಬೇಗೂರಿನ ಗ್ರಾಮದೇವತೆ ಮಾರಮ್ಮನ ದೇವಿಯ ಹಬ್ಬವನ್ನು ಗುರುವಾರ ವಿಜೃಂಭಣೆಯಿಂದ ನೆರವೇರಿಸಲಾಯಿತು.

ಪ್ರತಿವರ್ಷದಂತೆ ಗ್ರಾಮದ ಮಾರಮ್ಮನ ದೇವಾಲಯವನ್ನು ಸುಣ್ಣಬಣ್ಣ, ತಳಿರುತೋರಣ ಹಾಗೂ ದೀಪಗಳಿಂದ ಅಲಂಕರಿಸಲಾಗುತ್ತು. ಸಂಜೆ ದೇವಿಯನ್ನು ವಿಶೇಷ ಹೂವಿನಿಂದ ಅಲಂಕರಿಸಿ, ವಿಶೇಷ ಅಭಿಷೇಕ ನೆರವೇರಿಸಲಾಯಿತು. ಗ್ರಾಮದ ಎಲ್ಲಾ ಕೋಮಿನವರು ಒಗ್ಗಟ್ಟಾಗಿ ಸೇರಿ ರಾತ್ರಿಯಿಂದ ಬೆಳಗಿನವರೆಗೆ ಶ್ರದ್ಧಾ ಭಕ್ತಿಯಿಂದ ಪೂಜೆ ಸಲ್ಲಿಸಿದರು.

ಮಹಿಳೆಯರು ತಂಬಿಟ್ಟಿಗೆ ಗಣಿಗಲೆ ಹೂವಿನಿಂದ ಅಲಂಕರಿಸಿ ತಟ್ಟೆಯ ಮೇಲೆ ದೀಪವನ್ನಿರಿಸಿ ಪೂಜೆ ಸಲ್ಲಿಸಿದರು. ಗ್ರಾಮದ ಆಂಜನೇಯಸ್ವಾಮಿ, ಸಿದ್ದಪ್ಪಾಜಿ ಮತ್ತು ಶಕ್ತಿ ಗಣಪತಿ ದೇವಾಲಯಗಳನ್ನು ವಿದ್ಯುತ್ ದೀಪಗಳಿಂದ ಸಿಂಗರಿಸಲಾಗಿತ್ತು.

## ಮಾ.7ರಿಂದ ಮಹದೇಶ್ವರಬೆಟ್ಟದಲ್ಲಿ ಶಿವರಾತ್ರಿ ಜಾತ್ರೆ




ಹನೂರು, ಫೆ.29–ಪ್ರಸಿದ್ಧ ಯಾತ್ರಾ ಕ್ಷೇತ್ರ ಮಲೆಮಹದೇಶ್ವರಬೆಟ್ಟದಲ್ಲಿ ಮಾ.7 ರಿಂದ 11ರವರೆಗೆ ಮಹಾಶಿವರಾತ್ರಿ ಜಾತ್ರೆ ಹಾಗೂ ಏ.6 ರಿಂದ 9ರವರೆಗೆ ಯುಗಾದಿ ಜಾತ್ರಾ ಮಹೋತ್ಸವ ನಡೆಯಲಿದೆ.

ಮಾ.7ರಂದು ಶಿವರಾತ್ರಿ ಜಾತ್ರೆ ಪ್ರಾರಂಭವಾಗಲಿದೆ. 8ರಂದು ಸ್ವಾಮಿಗೆ ಎಣ್ಣೆಮಜ್ಜನ, ಜಾಗರಣೆ ಉತ್ಸವ, 9ರಂದು ಸ್ವಾಮಿಗೆ ವಿಶೇಷ ಸೇವೆ ಉತ್ಸವಾದಿಗಳು ಜರುಗಲಿವೆ. 10ರಂದು ಅಮಾವಾಸ್ಯೆ, ವಿಶೇಷ ಸೇವೆ ಉತ್ಸವ ನೆರವೇರಲಿವೆ. ಮಾ.11ರಂದು ಬೆಳಗ್ಗೆ 9.40ಕ್ಕೆ ಮಹಾಶಿವರಾತ್ರಿ ಮಹಾರಥೋತ್ಸವ ನಡೆಯಲಿದೆ. ರಾತ್ರಿ ಅಭಿಷೇಕ ಪೂಜೆ ಮುಗಿದ ನಂತರ ಕೊಂಡೋತ್ಸವ ಜರುಗಲಿದೆ.

ಏ.4ರಂದು ಯುಗಾದಿ ಜಾತ್ರೆ ಆರಂಭವಾಗಲಿದ್ದು, 7ರಂದು ಸ್ವಾಮಿಗೆ ಎಣ್ಣೆಮಜ್ಜನ, ವಿಶೇಷ ಉತ್ಸವ ನಡೆಯಲಿದೆ. 8ರಂದು ಯುಗಾದಿ ಅಮವಾಸ್ಯೆ ಪೂಜೆ ಜರುಗಲಿದೆ. 9ರಂದು ಬೆಳಗ್ಗೆ 7.30ಕ್ಕೆ ಚಾಂದ್ರಮಾನ ಯುಗಾದಿಯ ಮಹಾ ರಥೋತ್ಸವ ನಡೆಯಲಿದೆ ಎಂದು ಮಲೆಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## 17 ಕೇಂದ್ರದಲ್ಲಿ ಪಿಯು ಪರೀಕ್ಷೆ

**ಚಾಮರಾಜನಗರ:** ಜಿಲ್ಲೆಯಲ್ಲಿ ಇಂದಿನಿಂದ ದ್ವಿತೀಯ ಪಿಯುಸಿ ಪರೀಕ್ಷೆ ಆರಂಭವಾಗುತ್ತಿದ್ದು, ಪರೀಕ್ಷೆಯನ್ನು ಸುಗಮ ಹಾಗೂ ಪಾರದರ್ಶಕವಾಗಿ ನಡೆಸಲು ಅಧಿಕಾರಿಗಳು ಅಗತ್ಯ ಸಿದ್ಧತೆ ಮಾಡಿಕೊಂಡಿದ್ದಾರೆ. ಮಾ.1ರಿಂದ 22ರವರೆಗೆ ಪರೀಕ್ಷೆ ನಡೆಯಲಿದ್ದು, ಜಿಲ್ಲೆಯಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಗೆ 7328 ಅಭ್ಯರ್ಥಿಗಳು ನೋಂದಣಿ ಮಾಡಿಸಿಕೊಂಡಿದ್ದಾರೆ. 17 ಪಿಯುಸಿ ಪರೀಕ್ಷಾ ಕೇಂದ್ರಗಳನ್ನು ತೆರೆಯಲಾಗಿದೆ. ಪರೀಕ್ಷಾ ಕೊಠಡಿ ಹಾಗೂ ಹೊರಾಂಗಣದಲ್ಲಿ ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗಿದ್ದು, ಪೀಠೋಪಕರಣ, ಕುಡಿಯುವ ನೀರು, ಶೌಚಾಲಯ ಹಾಗೂ ಗಾಳಿ, ಬೆಳಕು ಸೇರಿದಂತೆ ಮೂಲಸೌಕರ್ಯ ಕಲ್ಪಿಸಲಾಗಿದೆ.


ಗುಂಡ್ಲುಪೇಟೆಯ ಶ್ರೀ ಕೋಟೆ ಮಾರಮ್ಮ ದೇವಿಯ ಹಬ್ಬದ ಅಂಗವಾಗಿ ದೇವಸ್ಥಾನದಲ್ಲಿ ಭಕ್ತರು ಎಳನೀರು, ಬೇವಿನ ಸೊಪ್ಪು ಮತ್ತು ತಂಬಿಟ್ಟಿನ ಆರತಿಯೊಂದಿಗೆ ಪೂಜೆ ಸಲ್ಲಿಸಿದರು.

## ಕಾಡಾನೆ ದಾಳಿಯಿಂದ ವೃದ್ಧ ಸಾವು

ಕೊಳ್ಳೇಗಾಲ, ಫೆ.29–ಕಾಡಾನೆ ದಾಳಿಗೆ ವೃದ್ಧ ಮೃತಪಟ್ಟಿರುವ ಘಟನೆ ಬಿಆರ್‌ಟಿ ಹುಲಿ ಸುರಕ್ಷಿತ ಅರಣ್ಯ ವ್ಯಾಪ್ತಿ ಕರಳೆಕಟ್ಟೆದೊಡ್ಡಿ ಗ್ರಾಮದಲ್ಲಿ ಗುರುವಾರ ನಡೆದಿದೆ.



ಕುಳಕಟ್ಟೆದೊಡ್ಡಿಯ ನಿವಾಸಿ ಸಣ್ಣಮಾದ(71) ಆನೆ ದಾಳಿಗೆ ಬಲಿಯಾದ ವೃದ್ಧ. ಈತ ಬೆಳಗ್ಗೆ 8 ಗಂಟೆಯಲ್ಲಿ ಪತ್ನಿ ಜಡೆಮಾದಮ್ಮ ಮತ್ತು ನಾದಿನಿ ರಂಗಮ್ಮ ಅವರೊಂದಿಗೆ ಗ್ರಾಮದ ಬಳಿಯ ಮೇಗಲದೊಡ್ಡಿಗೆ ಹೋಗುತ್ತಿದ್ದರು. ಇದೇ ವೇಳೆ ದಿಢೀರನೇ ಪ್ರತ್ಯಕ್ಷವಾದ ಕಾಡಾನೆ ಏಕಾಏಕಿ ದಾಳಿ ನಡೆಸಿ, ತುಳಿದು ಸಾಯಿಸಿದೆ ಆದರೆ ಪತ್ನಿ ಜಡೆಮಾದಮ್ಮ ಹಾಗೂ ನಾದಿನಿ ರಂಗಮ್ಮ ಪಾರಾಗಿದ್ದಾರೆ.

ವಿಷಯ ತಿಳಿದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ನಂದಕುಮಾರ್, ಡಿಆರ್‌ಎಫ್‌ಓ ಮಹೇಶ್, ವಾಚರ್ ನಂಜುಂಡಸ್ವಾಮಿ, ಸಿಬ್ಬಂದಿ ಹಾಗೂ ಗ್ರಾಮಾಂತರ ಪೊಲೀಸ್ ಠಾಣೆಯ ಪಿಎಸ್‌ಐ ಗಣೇಶ್ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು. ಈ ವೇಳೆ ಆಕ್ರೋಶ ವ್ಯಕ್ತಪಡಿಸಿದ ಗ್ರಾಮಸ್ಥರು, ಮೃತರ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡುವಂತೆ ಒತ್ತಾಯಿಸಿದರು.

ತಿಮ್ಮರಾಜೀಪುರ ಗ್ರಾಮದ ಯುವ ಮುಖಂಡ ರಾಜು, ಕಾಡಂಚಿನ ಗ್ರಾಮ ಕರಳಕಟ್ಟೆದೊಡ್ಡಿಯ ಜನರಿಗೆ ಯಾವುದೇ ರಕ್ಷಣೆ ಇಲ್ಲದಂತಾಗಿದೆ. ಗ್ರಾಮದ ಹತ್ತಿರವೇ ಕಳೆದ ತಿಂಗಳಿಂದ 2–3 ಆನೆಗಳು ಬರುತ್ತಿವೆ. ಜಿಂಕೆ, ಕಾಡುಹಂದಿ ಕಷ್ಟಬೇಳೆದ ಬೆಳೆಯನ್ನು ನಾಶ ಮಾಡುತ್ತಿವೆ. ಈ ಬಗ್ಗೆ ಅರಣ್ಯ ಸಿಬ್ಬಂದಿ ನಂಜುಂಡಸ್ವಾಮಿ ಅವರಿಗೆ ಹಲವು ಬಾರಿ ತಿಳಿಸಲಾಗಿದೆ. ಆದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ನಂತರ ಎಸಿಎಫ್ ನಂದಕುಮಾರ್ ಮಾತನಾಡಿ, ಕಾಡುಪ್ರಾಣಿಗಳ ದಾಳಿಯಿಂದ ಮೃತಪಟ್ಟರೆ ಸರ್ಕಾರದಿಂದ ಸಿಗುವ ಎಲ್ಲಾ ಸೌಲಭ್ಯಗಳನ್ನು ಮೃತ ಕುಟುಂಬಕ್ಕೆ ನೀಡಲು ಕ್ರಮ ವಹಿಸುವುದಾಗಿ ಭರವಸೆ ನೀಡಿದರು.

## ಎ.ಎಸ್.ಶ್ರೀಕಂಠಾಚಾರ್ ನಿಧನ

**ಚಾಮರಾಜನಗರ:** ನಗರದ ವಿವೇಕನಗರ ಬಡಾವಣೆ ನಿವಾಸಿ ಎ.ಎಸ್.ಶ್ರೀಕಂಠಾಚಾರ್ (76) ಅನಾರೋಗ್ಯದಿಂದ ಗುರುವಾರ ಮುಂಜಾನೆ ನಿಧನರಾದರು. ಮೃತರು ಪತ್ನಿ, ಪುತ್ರ ಮತ್ತು ಪುತ್ರಿ ಅಗಲಿದ್ದಾರೆ. ಚಾ.ನಗರದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.



ಮೈಸೂರು ಮಿತ್ರ



ಮೂರನೇ ಪುಟದಿಂದ

## ಜಾತಿ ಗಣತಿ ವರದಿ ಸಲ್ಲಿಕೆ

ಭಾಗಗಳಾಗಿ ಮಾಡಲಾಗಿದೆ. ಇನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಹಾಗೂ ಎಲ್ಲ ವರ್ಗಗಳ ಶೈಕ್ಷಣಿಕ ಮತ್ತು ಸಾಮಾಜಿಕ ಸ್ಥಾನಮಾನಗಳ ಸಮೀಕ್ಷೆಯನ್ನು ವರದಿಯು ಒಳಗೊಂಡಿದೆ.

**ಜಾತಿಗಣತಿ ವರದಿ ಒಳಗೊಂಡ ಅಂಶಗಳು:** ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ-2015 ಸಮಗ್ರ ರಾಜ್ಯ ವರದಿ, ಜಾತಿವಾರು ಜನಸಂಖ್ಯೆ ವಿವರ-1 ಸಂಪುಟ, ಜಾತಿ-ವರ್ಗಗಳ ಪ್ರಮುಖ ಲಕ್ಷಣಗಳು (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳನ್ನ ಹೊರತು ಪಡಿಸಿ) 8 ಸಂಪುಟಗಳು, ಜಾತಿ-ವರ್ಗಗಳ ಪ್ರಮುಖ ಲಕ್ಷಣಗಳು (ಪರಿಶಿಷ್ಟ ಜಾತಿಗಳು)-1 ಸಂಪುಟ, ಜಾತಿ ವರ್ಗಗಳ ಪ್ರಮುಖ ಲಕ್ಷಣಗಳು (ಪರಿಶಿಷ್ಟ ಪಂಗಡಗಳು)-1 ಸಂಪುಟ, ವಿಧಾನಸಭಾ ಕ್ಷೇತ್ರಗಳ ಜಾತಿವಾರು ಅಂಕಿ ಅಂಶಗಳು (02 ಸಿಡಿಗಳು), ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ 2015ರ ದತ್ತಾಂಶಗಳ ಅಧ್ಯಯನ ವರದಿ-2024.

**1.60 ಲಕ್ಷ ಸಿಬ್ಬಂದಿಯಿಂದ ಜಾತಿಗಣತಿ ವರದಿ ದತ್ತಾಂಶ ಸಂಗ್ರಹ:** ಜಾತಿ ಗಣತಿ ವರದಿ ಸಲ್ಲಿಕೆ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗಡೆ, 2014-15ರಲ್ಲಿ ಜಿಲ್ಲಾಧಿಕಾರಿ ನೇತೃತ್ವದಲ್ಲಿ ಶಿಕ್ಷಕರು, ಅಧಿಕಾರಿಗಳು ದತ್ತಾಂಶ ವರದಿ ತಯಾರಿಸಿದ್ದಾರೆ. ಈ ಹಿಂದೆ ಕಾಂತರಾಜ್ ವರದಿ ಸಲ್ಲಿಕೆ ಮಾಡಬೇಕಿತ್ತು ಆದರೆ, ತಾಂತ್ರಿಕ ಕಾರಣದಿಂದ ಸಲ್ಲಿಕೆ ಆಗಲಿಲ್ಲ. ಇದೀಗ ನಾವು ವರದಿ ಸಲ್ಲಿಕೆ ಮಾಡಿದ್ದೇವೆ. ಜಾತಿಗಣತಿ ವರದಿ ಸೋರಿಕೆಯಾಗಿದೆ ಎಂಬ ಆರೋಪ ಸುಳ್ಳು ಇಡೀ ವರದಿ ಹೇಗೆ ಸೋರಿಕೆ ಆಗುತ್ತದೆ. ಆದರೆ, ಕೆಲವು ಅಂಶಗಳು ಮಾತ್ರ ಸೋರಿಕೆ ಆಗಿರಬಹುದು. ರಾಜ್ಯಾದ್ಯಂತ 1.33 ಶಿಕ್ಷಕರು ಹಾಗೂ ಉಳಿದಂತೆ ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳು ಸೇರಿ ಒಟ್ಟು 1.60 ಲಕ್ಷ ಸಿಬ್ಬಂದಿ ಜಾತಿಗಣತಿ ವರದಿಯ ದತ್ತಾಂಶ ಸಂಗ್ರಹ ಮಾಡಿದ್ದಾರೆ ಎಂದು ಹೇಳಿದರು.

**154 ಕೋಟಿ ರೂ. ವೆಚ್ಚದಲ್ಲಿ ವರದಿ ತಯಾರಿ:** ಬರೋಬ್ಬರಿ 154 ಕೋಟಿ ರೂ. ವೆಚ್ಚದಲ್ಲಿ ಈ ಜಾತಿ ಗಣತಿ ವರದಿಯನ್ನು ಸಿದ್ಧಪಡಿಸಲಾಗಿದೆ. ಕಾಂಗ್ರೆಸ್ ಸ್ವಪಕ್ಷೀಯ ನಾಯಕರು ಹಾಗೂ ಬಿಜೆಪಿ ನಾಯಕರ ವಿರೋಧದ ನಡುವೆಯೂ ಸಿಎಂ ಸಿದ್ದರಾಮಯ್ಯ ವರದಿ ಸ್ವೀಕಾರ ಮಾಡಿದ್ದಾರೆ. ಈಗಾಗಲೇ ಒಕ್ಕಲಿಗರು ಹಾಗೂ ವೀರಶೈವ ಲಿಂಗಾಯತ ಸಮುದಾಯ ಸೇರಿದಂತೆ ಹಲವು ಸಮುದಾಯಗಳಿಂದ ಜಾತಿಗಣತಿ ವರದಿಗೆ ವಿರೋಧ ವ್ಯಕ್ತವಾಗಿತ್ತು. ಎಲ್ಲರ ವಿರೋಧದ ನಡುವೆಯೂ ವರದಿ ಸ್ವೀಕಾರ ಮಾಡಿದ್ದು, ಅದನ್ನು ಜಾರಿ ಮಾಡುವುದು ದೊಡ್ಡ ಸವಾಲಾಗಿ ಪರಿಣಮಿಸಲಿದೆ. ಆದರೆ, ಸಿಎಂ ಸಿದ್ದರಾಮಯ್ಯ ಲೋಕಸಭಾ ಚುನಾವಣೆಗೂ ಮುನ್ನ ವರದಿ ಸ್ವೀಕಾರ ಮಾಡಿ ಕೆಳ ಹಂತದ ವರ್ಗಗಳ ಮತ ಒಗ್ಗೂಡಿಸುವ ಮುಂದಾಗಿದ್ದಾರೆ ಎಂಬ ಆರೋಪಗಳೂ ಕೇಳಿ ಬರುತ್ತಿವೆ.

## ಹೈಕೋರ್ಟ್‌ಗೆ ಅರ್ಜಿ: ಇಂದು ವಿಚಾರಣೆ

ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನು ವಜಾಗೊಳಿಸಬೇಕು ಎಂದು ಕೋರಿ ಹಾಸನದ ಹೊಳೆನರಸೀಪುರ ತಾಲೂಕಿನ ವಕೀಲ ಓ.ಕೆ.ರಘು ಮಧ್ಯಂತರ ಅರ್ಜಿ ಸಲ್ಲಿಸಿದ್ದರು. ಈ ಸಂಬಂಧ ರಘು ಪರ ವಕೀಲರು ಗುರುವಾರ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಮತ್ತು ನ್ಯಾಯಮೂರ್ತಿ ಟಿ.ಜಿ.ಶಿವ ಶಂಕರೇಗೌಡ ಅವರಿದ್ದ ವಿಭಾಗೀಯ ಪೀಠದ ಮುಂದೆ ಹಾಜರಾಗಿ, ಜಾತಿ ಸಮೀಕ್ಷೆ ಮಾಡಲು ಆಯೋಗಕ್ಕೆ ಅಧಿಕಾರವೇ ಇಲ್ಲ. ಆಯೋಗದ ಹಾಲಿ ಅಧ್ಯಕ್ಷ ಜಯಪ್ರಕಾಶ್ ಹೆಗಡೆ ಅವರ ಅಧಿಕಾರ ಅವಧಿ ಇಂದು ಕೊನೆಗೊಳ್ಳಲಿದೆ. ಇದರಿಂದ ಆಯೋಗವು ತರಾತುರಿಯಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸುತ್ತಿದೆ. ಈ ಆಯೋಗದ ಹಿಂದಿನ ಅಧ್ಯಕ್ಷರು ಸಿದ್ಧಪಡಿಸಿದ್ದ ವರದಿಯನ್ನು ಹಾಲಿ ಅಧ್ಯಕ್ಷರು ಸಲ್ಲಿಕೆ ಮಾಡುತ್ತಿದ್ದಾರೆ. ಹಾಗಾಗಿ, ಸರ್ಕಾರಕ್ಕೆ ವರದಿ ಸಲ್ಲಿಸುವುದಕ್ಕೆ ತಡೆಹಿಡಿಯಬೇಕು ಹಾಗೂ ವರದಿ ಬಹಿರಂಗವಾಗದಂತೆ ನಿರ್ಬಂಧಿಸಬೇಕು. ಈ ಕುರಿತು ಮನವಿ ಮಾಡಿ ಮಧ್ಯಂತರ ಅರ್ಜಿ ಸಲ್ಲಿಸಲಾಗಿದ್ದು, ಅದನ್ನು ತುರ್ತಾಗಿ ವಿಚಾರಣೆಗೆ ಕೈಗೆತ್ತಿಕೊಳ್ಳಬೇಕು ಎಂದು ಕೋರಿದರು.

ಅದಕ್ಕೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ, ವರದಿ ಸಲ್ಲಿಕೆಯ ವಿಚಾರವನ್ನು ನ್ಯಾಯಾಲಯ ಮೇಲ್ವಿಚಾರಣೆ ನಡೆಸಲು ಸಾಧ್ಯವೇ ಎಂದು ರಘು ಪರ ವಕೀಲರನ್ನು ಕೇಳಿತು. ಸರ್ಕಾರಿ ವಕೀಲರು ಪ್ರತಿಕ್ರಿಯಿಸಿ, ಆಯೋಗವು ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷೆ ವರದಿ ನಡೆಸಿರುವುದನ್ನು ಪ್ರಶ್ನಿಸಿರುವುದನ್ನು ಬುಧವಾರವಷ್ಟೇ ಮತ್ತೊಂದು ಅರ್ಜಿ ನ್ಯಾಯಾಲಯಕ್ಕೆ ಸಲ್ಲಿಕೆಯಾಗಿದೆ. ಅದು ಸಾಮಾನ್ಯ ಪ್ರಕ್ರಿಯೆಯಂತೆ ವಿಚಾರಣೆಗೆ ನಿಗದಿಯಾಗಬೇಕು ಎಂದು ನ್ಯಾಯಪೀಠದ ಗಮನಕ್ಕೆ ತಂದರು. ಈ ಕುರಿತು ಪರಿಶೀಲನೆ ನಡೆಸಿದ ವಿಭಾಗೀಯ ಪೀಠ, ರಘು ಅವರ ಮಧ್ಯಂತರ ಮನವಿ ಕುರಿತು ಶುಕ್ರವಾರ ವಿಚಾರಣೆ ನಡೆಸಲಾಗುವುದು ಎಂದು ತಿಳಿಸಿತು. ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷೆ ವರದಿ ನಡೆಸುವುದಕ್ಕೆ ರಾಜ್ಯ ಸರ್ಕಾರಕ್ಕೆ ಅಧಿಕಾರ ಇಲ್ಲವಾಗಿದೆ. ಅಂತಹ ಅಧಿಕಾರವನ್ನು ಕೇಂದ್ರ ಸರ್ಕಾರ ಮಾತ್ರ ಹೊಂದಿದೆ. ಹೀಗಿದ್ದರೂ ಸಮೀಕ್ಷೆ ನಡೆಸಲು ಆಯೋಗಕ್ಕೆ ಸೂಚಿಸಿ 2014ರ ಜೂ.23ರಂದು ರಾಜ್ಯ ಸರ್ಕಾರ ಹೊರಡಿಸಿರುವ ಆದೇಶವನ್ನು ರದ್ದುಪಡಿಸಬೇಕು. ಆಯೋಗ ನಡೆಸಿರುವ ಸಮೀಕ್ಷೆಯನ್ನು ಕಾನೂನು ಬಾಹಿರವೆಂದು ಘೋಷಿಸಬೇಕು ಮತ್ತು ವರದಿಯ ಅನುಸಾರ ಯಾವುದೇ ಕ್ರಮಗಳನ್ನು ಕೈಗೊಳ್ಳದಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು ಎಂದು ಕೋರಿ ಸಮಾಜ ಸಂಪರ್ಕ ವೇದಿಕೆಯು ಹೈಕೋರ್ಟ್‌ಗೆ ಮತ್ತೊಂದು ಅರ್ಜಿಯನ್ನು ಸಲ್ಲಿಸಿದೆ. ಅದು ಸಹ ಇನ್ನಷ್ಟೇ ವಿಚಾರಣೆಗೆ ಬರಬೇಕಿದೆ.

## ಅಭಿವೃದ್ಧಿಯನ್ನೂ ಮಾಡಿದ್ದೇವೆ

ನಾವು ಅಧಿಕಾರಕ್ಕೆ ಬಂದ ನಂತರ ಐದು ಗ್ಯಾರಂಟಿಗಳನ್ನು ಅನುಷ್ಠಾನಗೊಳಿಸಿ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಂಡಿದ್ದು, ಸಂಪನ್ಮೂಲವನ್ನೂ ಹೆಚ್ಚಿಸಿದ್ದೇವೆ.

ಆದರೆ ಬಿಜೆಪಿ ಆಡಳಿತವಿದ್ದಾಗ ಅಭಿವೃದ್ಧಿಯನ್ನೇ ಮರೆತರು, ಸಂಪನ್ಮೂಲ ಕ್ರೋಢೀಕರಣದ ಗೋಜಿಗೇ ಹೋಗಲಿಲ್ಲ, ಬರೀ ಲೂಟಿ ಮಾಡಿದರು.

ಬಿಜೆಪಿಯವರಿಗೆ ಜನರ ಆಶೀರ್ವಾದ ಪಡೆಯುವ ಯೋಗ್ಯತೆ ಇಲ್ಲ. ಇವರು ನಮಗೆ ದೇಶಭಕ್ತಿ ಪಾಠ ಹೇಳಿ ಕೊಡಲು ಬರುತ್ತಾರೆ. ಈ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟಿದ್ದು ಕಾಂಗ್ರೆಸ್. ಹಿಂದಾಗಲಿನಿಂದ ಅಧಿಕಾರ ಅನುಭವಿಸಲು ಬಂದವರು ಇವರು. ಆರ್.ಎಸ್.ಎಸ್. 1925ರಲ್ಲೇ ಅಸ್ತಿತ್ವಕ್ಕೆ ಬಂತು. ಆದರೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲಿಲ್ಲ. ಸ್ವಾತಂತ್ರ್ಯ ಹೋರಾಟ ತೀವ್ರಗೊಂಡಿದ್ದಾಗಲೂ ಸಂಘ ಪರಿವಾರದ ಹೆಡಗೇವಾರ್ ಆಗಲಿ, ಗೋಲ್ವಾಲ್ಕರ್ ಆಗಲಿ ಪಾಲ್ಗೊಂಡಿಲ್ಲ. ಬಿಜೆಪಿಯಿಂದ ನಾವು ದೇಶಭಕ್ತಿಯ ಪಾಠ ಕಲಿಯಬೇಕಿಲ್ಲ. ಧರ್ಮದ ಹೆಸರಿನಲ್ಲಿ ದೇಶ ಹಾಗೂ ಸಮಾಜವನ್ನು ಒಡೆಯುವವರು ಬಿಜೆಪಿಯವರು. 'ಸಬ್ ಕಾ ಸಾಥ್ ಸಬ್ ಕಾ ವಿಕಾಸ್' ಎನ್ನುವುದು ಕೇವಲ ಬಾಯಿ ಮಾತು. ಇಂಥವರು ದೇಶವನ್ನು ಆಳಲು ಲಾಯಕ್ಕೇ? ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು. ರಾಜ್ಯಸಭಾ ಚುನಾವಣೆಯಲ್ಲಿ ಬಿಜೆಪಿಯ ಇಬ್ಬರು ಕಾಂಗ್ರೆಸ್ ಪರವಾಗಿದ್ದುದ್ದನ್ನು ಮರೆಮಾಚಲು ವಿಧಾನಸಭೆಯಲ್ಲಿ ಗದ್ದಲ ಎಬ್ಬಿಸಿದ್ದಾರೆ ಎಂದರು. ನಾಡಿನ ಜನರಿಗೆ ಮಾಡಿರುವ ಅನ್ಯಾಯವನ್ನು ಸಮರ್ಥನೆ ಮಾಡುವ ಬಿಜೆಪಿ ನಾಯಕರಿಗೆ ಮೋದಿ ಮುಂದೆ ನಾಡಿನ ಹಕ್ಕನ್ನು, ನಾಡಿನ ಜನರ ಪಾಲನ್ನು ಕೇಳುವ ತಾಕತ್ತಿಲ್ಲ ಎಂದು ಮೂದಲಿಸಿದರು.

**ನಮ್ಮೂರಲ್ಲಿ ರಾಮಮಂದಿರ ಕಟ್ಟಿಸಿಲ್ವೇನಿ...:** ಮಾತೆತ್ತಿದರೆ ಜೈಶ್ರೀರಾಮ್ ಅನ್ನುತ್ತಾರೆ. ನಾವೇನು ರಾಮನ ಭಕ್ತರಲ್ಲವೇ, ನಮ್ಮ ಊರಿನಲ್ಲಿ ಎರಡು ರಾಮಮಂದಿರ ಕಟ್ಟಿಸಿದ್ದೇನೆ, ನಾನು ರಾಮನ ಭಕ್ತನಲ್ಲವೇ, ಇವರು ರಾಮ-ಸೀತೆಯನ್ನು ಬೇರೆ ಮಾಡಿದ್ದಾರೆ, ಮಹಾತ್ಮಗಾಂಧೀಜಿ ಹೇಳಿದ ಸೀತಾರಾಮನಲ್ಲಿ ನಾವು ನಂಬಿಕೆ ಇಟ್ಟಿದ್ದೇವೆ.

ಈ ದೇಶದ ಜನರನ್ನು ಪ್ರೀತಿಸುವವರು, ಎಲ್ಲ ಧರ್ಮದ ಜನರನ್ನು ಪ್ರೀತಿಸುವವರು ಕಾಂಗ್ರೆಸ್ ಪಕ್ಷದವರು. ಇವರ ತರ ಬುರ್ಖಾ ಹಾಕಿದವರು, ಟೋಪಿ ಹಾಕಿದವರು ಬರಬೇಕಾಗಿಲ್ಲ ಎನ್ನುವುದಿಲ್ಲ. ಸಬ್ ಕಾ ಸಾಥ್ ಎಂದವರು ಪೆಟ್ರೋಲ್, ಡೀಸೆಲ್ ಬೆಲೆ, ಗ್ಯಾಸ್ ಬೆಲೆ, ಅಗತ್ಯವಸ್ತುಗಳ ಬೆಲೆ ಏರಿಸಿದರು. ಬಡವರು ನಿರುದ್ಯೋಗ, ಬೆಲೆ ಏರಿಕೆಯಿಂದ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಅವರಿಗೆ ನಾವು ಗ್ಯಾರಂಟಿ ಯೋಜನೆಗಳ ಮೂಲಕ ನಾಲ್ಕರಿಂದ ಐದು ಸಾವಿರ ರೂ. ಕೊಡ್ತಾ ಇದ್ದೀವಿ.

ರಾಜ್ಯದಲ್ಲಿ 1.2 ಕೋಟಿ ಕುಟುಂಬಗಳು ಅಂದರೆ ಸುಮಾರು 4.5 ಕೋಟಿ ಜನರಿಗೆ ಗ್ಯಾರಂಟಿ ಯೋಜನೆಗಳಿಂದ ಅನುಕೂಲ ಆಗಿದೆ. ಬಿಜೆಪಿಯವರು ನಮ್ಮನ್ನು ಕಾಪಿ ಮಾಡುತ್ತಿದ್ದಾರೆ, ಮೋದಿ ಗ್ಯಾರಂಟಿ ಎಂದು ಹೇಳುತ್ತಾರೆ, ಈ ಮೋದಿ ಗ್ಯಾರಂಟಿಯಲ್ಲಿ ಶೇ.50ರಿಂದ 60ರಷ್ಟು ಪಾಲು ಕರ್ನಾಟಕದ್ದೂ ಇದೆ. ಇವರು ಕನ್ನಡಿಗರಿಗೆ ದ್ರೋಹ ಮಾಡುತ್ತಿಲ್ಲವೇ ಎಂದು ಪ್ರಶ್ನಿಸಿದರು.

ಬಸವರಾಜ ಬೊಮ್ಮಾಯಿ ಅವರು 2023ರ ಫೆಬ್ರವರಿಯಲ್ಲಿ 3.09 ಲಕ್ಷ ಕೋಟಿ ರೂ. ಗಾತ್ರದ ಆಯವ್ಯಯ ಮಂಡಿಸಿದರು. 2024-25ನೇ ಸಾಲಿಗೆ ನಾನು ಮಂಡಿಸಿದ ಆಯವ್ಯಯದ ಗಾತ್ರ 3,71,343 ಕೋಟಿ ರೂ.ನಷ್ಟಿದ್ದು, ಬೊಮ್ಮಾಯಿ ಅವರು ಮಂಡಿಸಿದ ಬಜೆಟ್‌ಗಿಂತ 62,200 ಕೋಟಿ ರೂ.ನಷ್ಟು ಗಾತ್ರ ಹೆಚ್ಚಳವಾಗಿದೆ. ನಾನು ಜುಲೈ 2023 ರಲ್ಲಿ ಮಂಡಿಸಿದ ಬಜೆಟ್‌ಗಿಂತ ಇದು 43,601 ಕೋಟಿ ರೂ. ಹೆಚ್ಚಳವಾಗಿದೆ. ಅಂತೆಯೇ ರಾಜ್ಯದ ಜಿಡಿಪಿ 25,63,247 ಕೋಟಿ ರೂ. ಇತ್ತು. 2024-25ಕ್ಕೆ 28,09,063 ಕೋಟಿ ರೂ. ಆಗುವ ನಿರೀಕ್ಷೆ ಇದೆ. ಅಂದರೆ 2,41,723 ಕೋಟಿ ರೂ. ಹೆಚ್ಚು. ಅಭಿವೃದ್ಧಿ ಇಲ್ಲದೆ ಆಯವ್ಯಯ ಗಾತ್ರ ಹಾಗೂ ಜಿಡಿಪಿ ಹೆಚ್ಚಳವಾಗಲು ಸಾಧ್ಯವೇ. 2024-25ನೇ ಆಯವ್ಯಯದಲ್ಲಿ ಒಟ್ಟು ಬಜೆಟ್ ಗಾತ್ರ 3,71,343 ಕೋಟಿ ರೂಗಳಾಗಿದ್ದು, ಇದರಲ್ಲಿ ರಾಜಸ್ವ ವೆಚ್ಚ 2,90,531 ಕೋಟಿ ರೂ., ಬಂಡವಾಳ ವೆಚ್ಚ ಕೋಟಿ ರೂಗಳಾಗಿದ್ದು, ನಾವು ಅಭಿವೃದ್ಧಿಗೂ ಆದ್ಯತೆ ನೀಡಿರುವುದಕ್ಕೆ ಇದು ಸಾಕ್ಷಿ. ವಿರೋಧ ಪಕ್ಷದವರು ಅಭಿವೃದ್ಧಿ ಶೂನ್ಯ ಎಂದಿದ್ದಾರೆ, ಒಟ್ಟು ಅಭಿವೃದ್ಧಿ ಕಾರ್ಯಕ್ರಮಗಳಿಗೆ 1,20,000 ಕೋಟಿ ರೂ. ಮೊತ್ತ ಹಂಚಿಕೆ ಮಾಡಿದ್ದೇವೆ. 52,009 ಕೋಟಿ ರೂಗಳನ್ನು ಗ್ಯಾರಂಟಿ ಯೋಜನೆಗಳಿಗೆ ಮೀಸಲಿರಿಸಿದ್ದು, ಉಳಿದ ಮೊತ್ತ ಅಭಿವೃದ್ಧಿ ಕಾರ್ಯಗಳಿಗೆ ಹಂಚಿಕೆ ಮಾಡಲಾಗಿದೆ. ವಿರೋಧ ಪಕ್ಷದವರು ಮಾಡುವ ಆಪಾದನೆ ಸತ್ಯಕ್ಕೆ ದೂರವಾದದ್ದು ಎಂದು ಸಮರ್ಥಿಸಿಕೊಂಡರು.

# ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಸ್ಥಾನಮಾನ ಸಿಗಲು ವಚನ ಸಾಹಿತ್ಯ ಕಾರಣ

**● ಪ್ರೊ.ಎಸ್.ಶಿವರಾಜಪ್ಪ ಅಭಿಮತ ● ವಿಶ್ವಗುರು ಬಸವಣ್ಣ ಕರ್ನಾಟಕದ ಸಾಂಸ್ಕೃತಿಕ ನಾಯಕ ಸರಣಿ ಉಪನ್ಯಾಸ ಮಾಲಿಕೆಗೆ ಚಾಲನೆ**



ಮೈಸೂರು ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ವತಿಯಿಂದ ನಂಜನಗೂಡು ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ವಿಶ್ವಗುರು ಬಸವಣ್ಣ- ಕರ್ನಾಟಕ ಸಾಂಸ್ಕೃತಿಕ ನಾಯಕ ಸರಣಿ ಉಪನ್ಯಾಸ ಮಾಲಿಕೆಯನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಉದ್ಘಾಟಿಸಿದರು. ಪ್ರೊ. ಎಸ್.ಶಿವರಾಜಪ್ಪ, ಹೆಳವರಹುಂಡಿ ಸಿದ್ದಪ್ಪ, ಎಂ.ಚಂದ್ರಶೇಖರ್, ಡಾ. ಸಿ.ಎಸ್.ಹೊನ್ನೇಗೌಡ, ಕೆ.ಎನ್.ಶಿವಕುಮಾರ್, ಎಚ್. ರಾಜು ಕೆಬ್ಬೇಪುರ ಇದ್ದಾರೆ.

ಮೈಸೂರು, ಫೆ.29-ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಸ್ಥಾನಮಾನ ಸಿಗಲು ವಚನ ಸಾಹಿತ್ಯವೇ ಕಾರಣ ಎಂದು ಸಾಹಿತಿ ಪ್ರೊ. ಎಸ್.ಶಿವರಾಜಪ್ಪ ತಿಳಿಸಿದರು. ಕನ್ನಡವನ್ನು ದೇವಭಾಷೆಯನ್ನಾಗಿ ಮಾಡಿದವರು ಅಪ್ರತಿಮ ಶರಣ ಬಸವಣ್ಣವರು ಎಂದರು.

ಮೈಸೂರು ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ನಂಜನಗೂಡು ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಗುರುವಾರ ಏರ್ಪಡಿಸಿದ್ದ ವಿಶ್ವ ಗುರು ಬಸವಣ್ಣ- ಕರ್ನಾಟಕದ ಸಾಂಸ್ಕೃತಿಕ ನಾಯಕ ಸರಣಿ ಉಪನ್ಯಾಸ ಮಾಲಿಕೆಯಲ್ಲಿ ಬಸವಣ್ಣನವರ ಸಾಮಾಜಿಕ ಚಿಂತನೆಗಳು ಕುರಿತು ಮಾತನಾಡಿದ ಅವರು, 12ನೇ ಶತಮಾನದಲ್ಲಿ ವಚನ ಸಾಹಿತ್ಯ ರಚನೆಯಾಗಲಿಲ್ಲ ಎಂದರೇ ಕನ್ನಡ ಸಾಹಿತ್ಯ ಬರಡಾಗುತ್ತಿತ್ತು ಎಂದರು.

ಅನುಭವ ಮಂಟಪ ಸ್ಥಾಪಿಸಿ, ಇಲ್ಲಿ 'ಇವ ನಮ್ಮವ, ಇವ ನಮ್ಮವ..' ಎಂದು ಎಲ್ಲರಿಗೂ ಜಾಗ ನೀಡಿದ, ಕಸ ಗುಡಿಸುವವನಿಂದ ಹಿಡಿದು ಮಹಾರಾಜರವರೆಗೆ ಎಲ್ಲರನ್ನೂ ಸಮಾನವಾಗಿ ಕಂಡ ಬಸವಣ್ಣನವರು ವಿಶ್ವಗುರುವಾಗಲು, ಸಾಂಸ್ಕೃತಿಕ ನಾಯಕರಾಗಲು ಅರ್ಹರು. ಆದರೆ ಎಷ್ಟೋ ಮಂದಿ ಇವತ್ತಿಗೂ ಬಸವಣ್ಣನವರನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ ಎಂದ ವಿಷಾದಿಸಿದರು.

ಬಸವಣ್ಣನವರ ಪಾರದರ್ಶಕತೆ ರಾಜ್ಯಕ್ಕೆ ಭೇಟಿ ನೀಡಿದ್ದ ಮಹಾತ್ಮಗಾಂಧಿ ಅವರ ಮೇಲೆ ಪರಿಣಾಮ ಬೀರಿತ್ತು. ಅಂಬೇಡ್ಕರ್ ಅವರು ರಾಜ್ಯಕ್ಕೆ ಭೇಟಿ ನೀಡಿದ್ದಾಗ ಬಸವಣ್ಣನವರ ಸಾಹಿತ್ಯ ಕೃತಿಗಳನ್ನು ಕೇಳಿದ್ದರು. ಏಕೆಂದರೆ ಬಸವಣ್ಣನವರು ಪ್ರಜಾಪ್ರಭುತ್ವದ ಪರಿಪಾಲಕ ಮೂರ್ತಿಯಾಗಿದ್ದರು ಎಂದರು.

ಮಾನವ ಕುಲವೊಂದೆ ಎಂದು ನಂಬಿದ್ದ ಬಸವಣ್ಣನವರು ರಾಷ್ಟ್ರಕವಿ ಕುವೆಂಪು ಅವರಿಗೂ ಮೆಚ್ಚುಗೆಯಾಗಿದ್ದರು. ಯುಗ ಯುಗಕ್ಕೂ ಸಂದೇಶವನ್ನು ನೀಡಿದ ವ್ಯಕ್ತಿ ಬಸವಣ್ಣನವರು ಎಂದು ಅವರು ಹೇಳಿದರು.

**ರಾಜೇಂದ್ರ ಶ್ರೀಗಳ ಸ್ಮರಣೆ:** ಸುತ್ತೂರು ಮಠದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಸ್ಥಾಪಿಸಿದರು. ಜ್ಞಾನ, ಅನ್ನ, ಅರಿವಿನ ಜ್ಯೋತಿ ಉರಿಯುತ್ತಿರಲು ರಾಜೇಂದ್ರ ಶ್ರೀಗಳು ಕಾರಣ ಎಂದು ಪ್ರೊ.ಶಿವರಾಜಪ್ಪ ಸ್ಮರಿಸಿದರು.

ಅದೇ ರೀತಿ ಈಗಿನ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು ರಾಜೇಂದ್ರ ಶ್ರೀಗಳ ಮಾರ್ಗದಲ್ಲಿ ಸಾಗಿ ಲಕ್ಷಾಂತರ ಮಂದಿಯ ವಿದ್ಯಾರ್ಜನೆಗೆ ಕಾರಣಕರ್ತರಾಗಿದ್ದಾರೆ. ಐವತ್ತು ಸಾವಿರಕ್ಕೂ ಹೆಚ್ಚು ಮಂದಿಗೆ ಉದ್ಯೋಗ ನೀಡಿ, ಅವರ ಕುಟುಂಬ ಬೆಳಗುವಂತೆ ಮಾಡಿದ್ದಾರೆ ಎಂದರು.

**ಹಳ್ಳಿಹಳ್ಳಿಗಳಲ್ಲಿ ರಥಯಾತ್ರೆ ನಡೆಸಿ:** ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ, ಬಸವಣ್ಣನವರನ್ನು ರಾಜ್ಯದ ಸಾಂಸ್ಕೃತಿಕ ನಾಯಕ ಎಂದು ಘೋಷಿಸಿರುವ ಹಿನ್ನೆಲೆಯಲ್ಲಿ ಅವರನ್ನು ಕೇವಲ ಒಂದು ವರ್ಗದ ಧಾರ್ಮಿಕ ನಾಯಕ ಎಂದು ಬಿಂಬಿಸುವುದರಿಂದ ವಿಮೋಚನೆ ದೊರೆತಿದೆ. ಆದ್ದರಿಂದ ಈ ಬಾರಿಯ ಬಸವ ಜಯಂತಿಗೂ ಮುನ್ನಾ ಬಿರುದಾಂಕಿತವಾಗಿ ಬಸವಣ್ಣನವರ ಭಾವಚಿತ್ರವನ್ನು ಬೆಳ್ಳಿ ರಥದಲ್ಲಿಟ್ಟು, ಹಳ್ಳಿ ಹಳ್ಳಿಗಳಲ್ಲಿ ಯಾತ್ರೆ ನಡೆಸಬೇಕು ಎಂದು ಸಲಹೆ ಮಾಡಿದರು. ಸರಣಿ ಉಪನ್ಯಾಸ ಮಾಲಿಕೆಯನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಉದ್ಘಾಟಿಸಿದರು. ಜಿಲ್ಲಾ ಶರಣ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಎಂ. ಚಂದ್ರಶೇಖರ್ ಆಶಯ ಭಾಷಣ ಮಾಡಿದರು. ಜೆಎಸ್‌ಎಸ್ ಪದವಿ ಕಾಲೇಜಿನ ಪ್ರಾಂಶುಪಾಲ ಡಾ.ಸಿ.ಎಸ್. ಹೊನ್ನೇಗೌಡ, ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಕೆ.ಎನ್. ಶಿವಕುಮಾರ್, ದೇವಮ್ಮ ಹೊನ್ನಪ್ಪನವರ ದತ್ತಿ, ಗೌರಮ್ಮ ವಿಶ್ರಾಂತ ಪ್ರಾಚಾರ್ಯ ಅರಳಿಕಟ್ಟೆ ಎಂ. ಬಸಪ್ಪನವರ ದತ್ತಿ ದಾನಿಗಳಾದ ಉಪನ್ಯಾಸಕ ಎಚ್. ರಾಜು ಕೆಬ್ಬೇಪುರ ಮಾತನಾಡಿದರು.

# ಅಣ್ಣೇಗೌಡರ 'ತಿರುವುಗಳು' ಕೃತಿ ಬಿಡುಗಡೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ನಿವೃತ್ತ ಪ್ರಾಂಶುಪಾಲರಾದ ಕೆ.ಅಣ್ಣೇಗೌಡ ಅವರ 'ತಿರುವುಗಳು' (ಅನುಭವ ಕಥನಗಳು) ಕೃತಿಯನ್ನು ವಿದ್ವಾಂಸರು ಹಾಗೂ ನಿವೃತ್ತ ಪ್ರಾಂಶುಪಾಲರೂ ಆದ ಎಸ್.ಕುಮಾರಸ್ವಾಮಿ ಬಿಡುಗಡೆಗೊಳಿಸಿದರು.

ಮೈಸೂರು, ಫೆ.29(ಜಿಎ)-ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದಲ್ಲಿ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಿವೃತ್ತ ಪ್ರಾಂಶುಪಾಲರಾದ ಕೆ.ಅಣ್ಣೇಗೌಡ ಅವರ 'ತಿರುವುಗಳು' (ಅನುಭವ ಕಥನಗಳು) ಕೃತಿಯನ್ನು ವಿದ್ವಾಂಸರು ಹಾಗೂ ನಿವೃತ್ತ ಪ್ರಾಂಶುಪಾಲರೂ ಆದ ಎಸ್.ಕುಮಾರಸ್ವಾಮಿ ಬಿಡುಗಡೆಗೊಳಿಸಿದರು.

ನಂತರ ಕೃತಿ ಕುರಿತು ಮಾತನಾಡಿದ ಅವರು, ಸಾಂತ್ವನದ ಮೂಲಕವೇ ಬದುಕಿನ ಎಲ್ಲಾ ಸಂಕಷ್ಟಗಳನ್ನು ಕೆಡವಿ ಹೊಸತನವನ್ನು ಕಾಣಬೇಕೆಂಬ ತುಡಿತ ಈ ಕೃತಿಯ ಮೂಲ ಆಶಯವಾಗಿದ್ದು, ಕೃತಿಯ ಲೇಖಕರು ತಮ್ಮ ಬದುಕಿನ ತಿರುವುಗಳನ್ನು ಸಣ್ಣ ಸಣ್ಣ ಕಥೆಗಳ ಮೂಲಕ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ ಎಂದರು.

ಲೇಖಕರು ತಮ್ಮ ಜೀವನದ ಏರಿಳಿತಗಳು, ಅಧ್ಯಯನ, ಅಧ್ಯಾಪನ, ಅನುಭವ, ಬದುಕು ಎಲ್ಲವನ್ನೂ ಅಕ್ಷರ ರೂಪದಲ್ಲಿ ಅಭಿವ್ಯಕ್ತಿಗೊಳಿಸಿದ್ದಾರೆ. ಜೀವನದ ಆಳ ಮತ್ತು ಒಳ ತಿರುಳುಗಳನ್ನು ಶ್ರದ್ಧೆಯಿಂದ ಕಟ್ಟಿಕೊಟ್ಟಿದ್ದಾರೆ. ಸಿಕ್ಕು ಸಿಕ್ಕುಗಳಿಂದ ಕೂಡಿರುವ ಬಾಳಿನ ಹೆಜ್ಜೆಗಳ ನಿರಂತರ ಹೋರಾಟ ಈ ಪುಸ್ತಕದಲ್ಲಿ ದಾಖಲಾಗಿದೆ. ಇಲ್ಲಿನ ಒಂದೊಂದು ಸನ್ನಿವೇಶದ ವರ್ಣನೆಯೂ ವೈವಿಧ್ಯಮಯವಾಗಿದ್ದು, ವಸ್ತುನಿಷ್ಠತೆಯಿಂದ ಕೂಡಿದೆ. ಕೃತಿಯಲ್ಲಿನ ಆಡುಮಾತಿನ ಸಂಭಾಷಣೆ ಇದ್ದು, ಭಾಷೆ ಸಾದಾ ಸೀದಾ ಎನ್ನುವಂತೆ ಭಾವಾವೇಷದಿಂದ ಕೂಡಿದೆ. ಜೀವನ ಮೌಲ್ಯಗಳು ಸಾರುವ ಗಾದೆಗಳನ್ನು ಸಂದರ್ಭಕ್ಕೆ ಪೂರಕವಾಗಿ ಬಳಸಲಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಮೈಸೂರು ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ.ಎಚ್.ಕೆ ಮರೀಗೌಡ, ಕೃತಿಯ ಲೇಖಕರಾದ ಕೆ.ಅಣ್ಣೇಗೌಡ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ನಿವೃತ್ತ ಪೊಲೀಸ್ ಅಧಿಕಾರಿ ಸಿ.ಎನ್. ಮಂಜೇಗೌಡ, ಗೌರವ ಕಾರ್ಯದರ್ಶಿ ಮ.ನ.ಲತಾಮೋಹನ್ ಉಪಸ್ಥಿತರಿದ್ದರು.

# ಮುಡಾಗೆ ಅಧ್ಯಕ್ಷರಾಗಿ ಕೆ.ಮರೀಗೌಡ, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರಾಗಿ ಆಯೂಬ್‌ಖಾನ್ ಇಂದು ಅಧಿಕಾರ ಸ್ವೀಕಾರ



ಕೆ.ಮರೀಗೌಡ



ಆಯೂಬ್‌ಖಾನ್

ಮೈಸೂರು, ಫೆ29(ಆರ್‌ಕೆ)- ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(MUDA)ದ ಅಧ್ಯಕ್ಷರಾಗಿ ಕೆ.ಮರೀಗೌಡ ಹಾಗೂ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ(KEA)ದ ಅಧ್ಯಕ್ಷರಾಗಿ ಆಯೂಬ್‌ಖಾನ್ ನಾಳೆ (ಮಾ.1) ಅಧಿಕಾರ ವಹಿಸಿಕೊಳ್ಳುವರು.

ಮರೀಗೌಡರು ಶುಕ್ರವಾರ ಮಧ್ಯಾಹ್ನ 12.35 ಗಂಟೆಗೆ ಜೆಎಲ್‌ಬಿ ರಸ್ತೆಯಲ್ಲಿರುವ ಮುಡಾ ಕಚೇರಿಯಲ್ಲಿ ಅಧಿಕಾರ ವಹಿಸಿಕೊಳ್ಳುವರು. ಅದಕ್ಕಾಗಿ ಮುಡಾ ಅಧ್ಯಕ್ಷರ ಕಚೇರಿಯನ್ನು ಸಂಪೂರ್ಣ ಸಜ್ಜುಗೊಳಿಸಿದ್ದು, ಕಚೇರಿ ಆವರಣ ಮತ್ತು ಸುತ್ತಮುತ್ತಲಿನ ರಸ್ತೆ ಜಂಕ್ಷನ್‌ನಲ್ಲಿ ಕೆ.ಮರೀಗೌಡರ ಕಟೌಟ್ ಫ್ಲೆಕ್ಸ್‌ಗಳನ್ನು ಅಳವಡಿಸಲಾಗಿದೆ.

ಪ್ರಾಧಿಕಾರಕ್ಕೆ ಅಧ್ಯಕ್ಷರ ನೇಮಕವಾಗುತ್ತಿದ್ದಂತೆಯೇ ಮುಡಾ ಕಚೇರಿಯಲ್ಲಿ ಚಟುವಟಿಕೆಗಳು ಗರಿಗೆದರಿದ್ದು, ರಾಜಕೀಯ ಮುಖಂಡರು, ಕಾಂಗ್ರೆಸ್ ಕಾರ್ಯಕರ್ತರಲ್ಲಿ ಉತ್ಸಾಹಮೂಡಿದೆ.

**ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ:** ನಿನ್ನೆಯಷ್ಟೇ ಮೈಸೂರು ಅರಗು ಮತ್ತು ಬಣ್ಣದ ಕಾರ್ಖಾನೆ ಅಧ್ಯಕ್ಷರಾಗಿ ನೇಮಕಗೊಂಡಿದ್ದ ಮಾಜಿ ಮೇಯರ್ ಅಯೂಬ್‌ಖಾನ್ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ನೇಮಿಸಿ ಇಂದು ಆದೇಶ ಮಾಡಿದ್ದಾರೆ.

ಅಯೂಬ್‌ಖಾನ್ ಅವರು ನಾಳೆ(ಶುಕ್ರವಾರ) ಬೆಳಿಗ್ಗೆ ಮೈಸೂರಿನ ದೊಡ್ಡಕೆರೆ ಮೈದಾನದ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಕಚೇರಿಯಲ್ಲಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳುವರು ಎಂದು ಮೂಲಗಳು ತಿಳಿಸಿವೆ.

# ಜ್ವಲಂತ ಸಮಸ್ಯೆ ಬಗೆಹರಿಸಲು ಆಗ್ರಹಿಸಿ ಬೆಂಗಳೂರು ಚಲೋ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಬಿ.ರವಿ ಮಾತನಾಡಿದರು.

ಮೈಸೂರು, ಫೆ.29(ಜಿಎ)-ಜನರ ಜ್ವಲಂತ ಸಮಸ್ಯೆಗಳನ್ನು ಪರಿಹರಿಸುವಂತೆ ಒತ್ತಾಯಿಸಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿರುದ್ಧ ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯೂನಿಸ್ಟ್)ಪಕ್ಷದ ವತಿಯಿಂದ ಮಾ.6ರಂದು ಬೃಹತ್ ಬೆಂಗಳೂರು ಚಲೋ ಚಳುವಳಿ ಹಮ್ಮಿಕೊಳ್ಳಲಾಗಿದೆ ಎಂದು ಪಕ್ಷದ ಜಿಲ್ಲಾ ಕಾರ್ಯದರ್ಶಿ ಬಿ.ರವಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ನಡೆಯಲಿರುವ ಪ್ರತಿಭಟನಾ ಸಭೆಯಲ್ಲಿ ರಾಜ್ಯ ವಿವಿಧ ಜಿಲ್ಲೆಗಳಿಂದ ಸಾವಿರಾರು ಮಂದಿ ಭಾಗವಹಿಸಲಿದ್ದಾರೆ. ಮೈಸೂರು ಭಾಗದಿಂದ ಸುಮಾರು 500 ಮಂದಿ ಪಾಲ್ಗೊಳ್ಳಲಿದ್ದಾರೆ ಎಂದರು.

ಕಳೆದ ಹತ್ತು ವರ್ಷಗಳಿಂದ ಕೇಂದ್ರದ ಬಿಜೆಪಿ ಸರ್ಕಾರದ ಆಡಳಿತಾವಧಿಯಲ್ಲಿ ದೇಶದ ಜನತೆ ಹೈರಾಣಾಗಿದ್ದಾರೆ. ಒಂದೆಡೆ ದೇಶದಲ್ಲಿ ಶೇ.5ರಷ್ಟು ಮಾತ್ರ ಬಡವರು ಇದ್ದಾರೆ ಎಂದು ಸುಳ್ಳು ಅಂಕಿ ಅಂಶವನ್ನು ನೀಡುತ್ತಿದ್ದಾರೆ. ಉದ್ಯೋಗ ನಾಶ, ನಿರುದ್ಯೋಗ, ಬೆಲೆ ಏರಿಕೆ ಜನರನ್ನು ಸಾಲಗಾರರನ್ನಾಗಿ ಮಾಡುತ್ತಿವೆ. ರೈತರು ಮತ್ತು ಕಾರ್ಮಿಕರು ಕಂಗಾಲಾಗಿದ್ದಾರೆ. ಮೋದಿ ಮತ್ತೆ ಅಧಿಕಾರಕ್ಕೆ ಬಂದರೆ 3ನೇ ಹಂತದ ಆರ್ಥಿಕ ಸುಧಾರಣೆಗಳನ್ನು ಜಾರಿಗೆ ತರುವುದಾಗಿ ಕೇಂದ್ರ ಹಣಕಾಸು ಸಚಿವರು ಹೇಳಿದ್ದಾರೆ. ಅವರ ಪ್ರಕಾರ ಬಂಡವಾಳಶಾಹಿಗಳಿಗೆ ಬೇಕಾದಂತೆ ಬದಲಾವಣೆ ಮಾಡುವುದೇ ಸುಧಾರಣೆಯೇ ಎಂದು ಪ್ರಶ್ನಿಸಿದರು.

ಪ್ರತಿಭಟನೆಯಲ್ಲಿ ಬೆಲೆ ಏರಿಕೆಯನ್ನು ತಡೆಗಟ್ಟಬೇಕು. ಎನ್‌ಇಪಿ ಹಿಂಪಡೆದು ರಾಜ್ಯ ಮಟ್ಟದಲ್ಲಿ ನೈಜ ಶಿಕ್ಷಣ ನೀತಿಯನ್ನು ರೂಪಿಸಬೇಕು. ಸರ್ಕಾರಿ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂಬ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಲಾಗುತ್ತದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಎಂ.ಚಂದ್ರಶೇಖರ್ ಮೇಟಿ, ಪಿ.ಎಸ್.ಸಂಧ್ಯಾ, ಜಿ.ಎಸ್. ಸೀಮಾ, ಹರೀಶ್ ಉಪಸ್ಥಿತರಿದ್ದರು.

# ಸಿಇಟಿ, ನೀಟ್ ಪರೀಕ್ಷೆಗಳಿಗೆ ತರಬೇತಿ

ಮೈಸೂರು.ಫೆ.29- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ವಿಜಯ ವಿಠ್ಠಲ ಶಿಕ್ಷಣ ಸಂಸ್ಥೆ ಸಹಯೋಗದಲ್ಲಿ ಪಿಯುಸಿ ನಂತರದ ವೃತ್ತಿಪರ ಉನ್ನತ ಶಿಕ್ಷಣ ಕ್ಕಾಗಿ ರಾಜ್ಯ ಸರ್ಕಾರ ನಡೆಸಲಿರುವ ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಕೆ-ಸಿಇಟಿ ಮತ್ತು ನೀಟ್) 30 ದಿನಗಳ ತರಬೇತಿಯನ್ನು ಕೇಂದ್ರ ಕಚೇರಿಯಲ್ಲಿ ನಡೆಸಲು ನಿರ್ಧರಿಸಲಾಗಿದೆ. ಆಸಕ್ತರು ಹಾಗೂ ಪೋಷಕರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆವರಣ ದಲ್ಲಿರುವ ಕರಾಮುವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ಕಚೇರಿಯಲ್ಲಿ ಮಾ.7ರೊಳಗೆ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 0821 -2515944 ಸಂಪರ್ಕಿಸಬಹುದು.

# ಪಾಕ್ ಪರ ಘೋಷಣೆ : ಮೈಸೂರು ಹಳೆ ಡಿಸಿ ಕಚೇರಿ ಮುಂದೆ ಪ್ರತಿಭಟನೆ




ಮೈಸೂರು, ಫೆ29(ಜಿಎ)- ವಿಧಾನಸೌಧದಲ್ಲಿ ಪಾಕಿಸ್ತಾನ್ ಜಿಂದಾಬಾದ್ ಎಂದು ಘೋಷಣೆ ಕೂಗಿರುವುದನ್ನು ಖಂಡಿಸಿ ಗಂಧದಗುಡಿ ಫೌಂಡೇಷನ್ ವತಿಯಿಂದ ಹಳೆ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಗುರುವಾರ ಪ್ರತಿಭಟನೆ ನಡೆಸಲಾಯಿತು.

ವಿಧಾನಸೌಧದಲ್ಲಿ ಕಾಂಗ್ರೆಸ್ ರಾಜ್ಯಸಭಾ ಸದಸ್ಯ ನಾಸಿರ್ ಹುಸೇನ್ ಬೆಂಬಲಿಗರು ಪಾಕಿಸ್ತಾನ್ ಜಿಂದಾಬಾದ್ ಎಂದು ಘೋಷಣೆ ಕೂಗಿದ್ದಾರೆ. ಈ ಕೂಡಲೇ ಅವರನ್ನು ಬಂಧಿಸಿ ಕಠಿಣ ಕ್ರಮ ಕೈಗೊಳ್ಳಬೇಕು. ದೇಶಪ್ರೇಮಿಗಳು ಎಂದಿಗೂ ದೇಶದ ವಿರುದ್ಧ ನಡೆದುಕೊಳ್ಳುವುದಿಲ್ಲ. ಇಂತಹವರನ್ನು ದೇಶದಲ್ಲಿ ಇರಿಸಿಕೊಳ್ಳುವ ಬದಲು ದೇಶದಿಂದ ಗಡಿಪಾರು ಮಾಡಬೇಕು ಎಂದು ಒತ್ತಾಯಿಸಿದರು.

ಇದನ್ನು ಪ್ರಶ್ನೆ ಮಾಡಿದ ಮಾಧ್ಯಮದವರನ್ನು ನಾಸಿರ್ ಹುಸೇನ್ ಬೆಂಬಲಿಗರ ತಪ್ಪನ್ನು ಸಮರ್ಥನೆ ಮಾಡಿಕೊಂಡು ಮಾಧ್ಯಮದವರಿಗೆ ಏಕವಚನದಲ್ಲಿ ನಿಂದಿಸಿದ್ದಾರೆ. ಈ ಕೂಡಲೇ ಅವರು ಮಾಧ್ಯಮದವರ ಕ್ಷಮೆ ಕೋರಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಗಂಧದಗುಡಿ ಫೌಂಡೇಷನ್ ರಾಜ್ಯಾಧ್ಯಕ್ಷ ಆರ್ಯನ್ ಗಂಧದಗುಡಿ, ಉಪಾಧ್ಯಕ್ಷ ಮನೋಹರ್ ಗೌಡ, ರತನ್ ಚಿಕ್ಕು, ಚೇತನ್ ಶೆಟ್ಟಿ, ಮಹದೇವ್, ರಾಜಣ್ಣ, ಹರೀಶ್ ಸೇರಿದಂತೆ ಹಲವರು ಭಾಗವಹಿಸಿದ್ದರು.

# ರೈತ ಮಕ್ಕಳಿಗೆ ತರಬೇತಿ ಕಾರ್ಯಕ್ರಮ

ಮೈಸೂರು,ಫೆ.29- 2024-25 ನೇ ಸಾಲಿನ ಮೈಸೂರಿನ ಅಧೀನ ರಂಗಸಮುದ್ರ ತೋಟಗಾರಿಕೆ ತರಬೇತಿ ಕೇಂದ್ರದಲ್ಲಿ ಪಹಣಿ ಹೊಂದಿರುವ ಮೈಸೂರು, ಚಾಮರಾಜನಗರ ಜಿಲ್ಲೆಯ ರೈತರ ಮಕ್ಕಳ ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳಿಗೆ ಮೇ 2ರಿಂದ 28-02-2025ರವರೆಗೆ 10 ತಿಂಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ರೈತ ಮಕ್ಕಳ ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಎಸ್‌ಎಸ್‌ಎಲ್‌ಸಿ ಯಲ್ಲಿ ಉತ್ತೀರ್ಣರಾದ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ 18-30 ವರ್ಷ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ 18-33 ವರ್ಷ ಹಾಗೂ ಮಾಜಿ ಸೈನಿಕರಿಗೆ 33-65 ವರ್ಷ ವಯಸ್ಸಿನ ಒಳಗಿನ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿರುತ್ತದೆ.

ಅರ್ಜಿಯನ್ನು ಮಾ. 01 ರಿಂದ ಏ. 01 ರ ಸಂಜೆ 5.30ರವರೆಗೆ ಜಿಲ್ಲಾ ಪಂಚಾಯತ್‌ನ ತೋಟಗಾರಿಕೆ ಉಪನಿರ್ದೇಶಕರು, ರಾಜ್ಯವಲಯದ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ ಯಲ್ಲಿ ಅಥವಾ ಇಲಾಖೆ ವೆಬ್‌ಸೈಟ್ https://horticulturedir.karnataka.gov.in ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಮೈಸೂರಿನ ಕರ್ಜನ್ ಪಾರ್ಕ್‌ನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿಯನ್ನು ಹಾಗೂ ದೂ.ಸಂ. 0821-2977572 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಪಂಚಾಯತ್‌ನ ತೋಟಗಾರಿಕೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಪ್ರಜಾತಾಂತ್ರಿಕ ಪದವಿ ಕೋರ್ಸ್ ರದ್ದಿಗೆ ಆಗ್ರಹಿಸಿ ಎಐಡಿಎಸ್‌ಓ ಪ್ರತಿಭಟನೆ




ಕ್ರಾಫರ್ಡ್ ಭವನದ ಎದುರು ಎಐಡಿಎಸ್‌ಓ ಸಂಘಟನೆಯ ನೇತೃತ್ವದಲ್ಲಿ ವಿದ್ಯಾರ್ಥಿಗಳು ಗುರುವಾರ ಪ್ರತಿಭಟನೆ ನಡೆಸಿದರು.

ಮೈಸೂರು, ಫೆ.29(ಜಿಎ)-ಬಹಳ ವಿಳಂಬವಾಗಿ ಘೋಷಿಸಿರುವ ಅಪ್ರಜಾತಾಂತ್ರಿಕವಾದ ನಾಲ್ಕು ವರ್ಷದ ಪದವಿ ಕೋರ್ಸ್‌ನ್ನು ಹಿಂಪಡೆಯುವಂತೆ ಆಗ್ರಹಿಸಿ ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಎದುರು ಎಐಡಿಎಸ್‌ಓ ಸಂಘಟನೆಯ ನೇತೃತ್ವದಲ್ಲಿ ವಿದ್ಯಾರ್ಥಿಗಳು ಗುರುವಾರ ಪ್ರತಿಭಟನೆ ನಡೆಸಿದರು.

ಕಳೆದ ಬಾರಿಯ ಬಿಜೆಪಿ ನೇತೃತ್ವದ ರಾಜ್ಯ ಸರಕಾರ ಅತ್ಯಂತ ತರಾತುರಿಯಲ್ಲಿ ಯಾವುದೇ ಪೂರ್ವ ಸಿದ್ಧತೆ ಇಲ್ಲದೆ ಎನ್‌ಇಪಿ-2020ಅನ್ನು ಜಾರಿ ಮಾಡಿತು. ಎನ್‌ಇಪಿ-2020 ಭಾಗವಾಗಿದ್ದ ನಾಲ್ಕು ವರ್ಷದ ಪದವಿಯನ್ನು ಅಪ್ರಜಾತಾಂತ್ರಿಕವಾಗಿ ಹೇರಿಕೆ ಮಾಡಿ, ವಿದ್ಯಾರ್ಥಿಗಳ ಭವಿಷ್ಯಕ್ಕೆ ಕಂಟಕವನ್ನುಂಟು ಮಾಡಿತ್ತು ಎಂದು ಕಿಡಿಕಾರಿದರು.

ಈ ಹಿನ್ನೆಲೆ ಎಐಡಿಎಸ್‌ಓ ವಿದ್ಯಾರ್ಥಿ ಸಂಘಟನೆಯು ಶಿಕ್ಷಣಕ್ಕೆ ಮಾರಕವಾಗಿರುವ ಎನ್‌ಇಪಿ-2020 ವಿರುದ್ಧ ರಾಜ್ಯದಲ್ಲಿ ಹಲವಾರು ಭಾರಿ ಉಗ್ರ ಚಳುವಳಿಯನ್ನು ನಡೆಸಿದೆ. ಈ ನೀತಿಯ ವಿರುದ್ಧ ಐತಿಹಾಸಿಕವಾಗಿ 35 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಸ್ವಯಂಸೇವಕರಾಗಿ ರಾಜ್ಯದ ಮೂಲೆ ಮೂಲೆಗಳಿಂದ 36 ಲಕ್ಷ ಸಹಿಗಳನ್ನು ಸಂಗ್ರಹಿಸಿದ್ದಾರೆ ಎಂದು ಹೇಳಿದರು.

ಅಭೂತಪೂರ್ವ ಹೋರಾಟಗಳ ಫಲವಾಗಿ ಎನ್‌ಇಪಿ ಅನ್ನು ರಾಜ್ಯದಿಂದ ಹಿಮ್ಮೆಟ್ಟಿಸಲಾಗಿದೆ. ಹಾಗೂ ರಾಜ್ಯ ಸರ್ಕಾರವು ರಾಜ್ಯದ ಶಿಕ್ಷಣ ನೀತಿಯನ್ನು ರೂಪಿಸಲು ಸಮಿತಿ ರಚಿಸಿತು. ಜನಪರ ಶಿಕ್ಷಣ ನೀತಿಯನ್ನು ರೂಪಿಸಲು ಆಗ್ರಹಿಸಿ ಎಐಡಿಎಸ್‌ಓ ವಿದ್ಯಾರ್ಥಿ ಸಂಘಟನೆಯಿಂದ ಕರ್ನಾಟಕದ 23 ಸಾವಿರಕ್ಕೂ ಹೆಚ್ಚು ಜನರನ್ನು ಸಂಪರ್ಕಿಸಿ ಸಮೀಕ್ಷೆಯನ್ನು ನಡೆಸಲಾಯಿತು. ನಡೆಸಿದ ಸಮೀಕ್ಷೆಯಲ್ಲಿ ಶೇ.83 ರಷ್ಟು ವಿದ್ಯಾರ್ಥಿಗಳು ನಾಲ್ಕು ವರ್ಷದ ಪದವಿ ಬೇಡವೆಂದು ಹೇಳಿದ್ದಾರೆ ಎಂದರು.

ರಾಜ್ಯ ಸರ್ಕಾರ ರಚಿಸಿರುವ ರಾಜ್ಯ ಶಿಕ್ಷಣ ಆಯೋಗವು ರಾಜ್ಯ ಶಿಕ್ಷಣ ನೀತಿ ಕುರಿತಾದ ಅಂತಿಮ ವರದಿಯನ್ನು ಆಗಸ್ಟ್‌ನಲ್ಲಿ ನೀಡುವುದಾಗಿ ಹೇಳಿರುವುದು ಆತಂಕಕ್ಕೆ ಕಾರಣವಾಗಿದೆ. 4 ವರ್ಷದ ಪದವಿಯನ್ನು ಹಿಂಪಡೆಯುವ ಕುರಿತು ರಾಜ್ಯ ಸರಕಾರ ಸ್ಪಷ್ಟ ನಿರ್ಧಾರ ಕೈಗೊಂಡಿಲ್ಲ. ಸರಕಾರದ ಈ ವಿಳಂಬವು ವಿದ್ಯಾರ್ಥಿಗಳ ಭವಿಷ್ಯವನ್ನು ಅತಂತ್ರಕ್ಕೆ ದೂಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

6ನೇ ಸೆಮಿಸ್ಟರ್ ಪ್ರವೇಶಿಸಲಿರುವ ಪದವಿ ವಿದ್ಯಾರ್ಥಿಗಳಿಗೆ, ಇದೇ ಅಂತಿಮ ವರ್ಷವೇ ಅಥವಾ ಇನ್ನೊಂದು ವರ್ಷ ಓದಬೇಕೇ ಎಂಬುದರ ಕುರಿತು ಯಾವ ಸ್ಪಷ್ಟತೆಯನ್ನೂ ನೀಡಲಾಗಿಲ್ಲ. ಈ ವಿಳಂಬದಿಂದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವರ್ಷದ ಕುರಿತಾಗಿಯೇ ಸ್ಪಷ್ಟತೆ ಇಲ್ಲದಂತಾಗಿದೆ. ಇನ್ನು 2-3 ತಿಂಗಳಲ್ಲಿ ಮೂರನೇ ವರ್ಷದ ಪದವಿ ಮುಗಿಯಲಿದ್ದು, ಅವರ ಭವಿಷ್ಯ ಅತಂತ್ರದಲ್ಲಿದೆ. ಆದ್ದರಿಂದ 4 ವರ್ಷ ಪದವಿ ಕೋರ್ಸ್ ಕುರಿತ ನಿರ್ಧಾರವನ್ನು ಯಾವುದೇ ಕಾರಣಕ್ಕೂ ವಿಳಂಬ ಮಾಡಬಾರದೆಂದು ಆಗ್ರಹಿಸಿದರು .

ಪ್ರತಿಭಟನೆಯಲ್ಲಿ ಎಐಡಿಎಸ್‌ಓ ಜಿಲ್ಲಾಧ್ಯಕ್ಷ ಸುಭಾಷ್, ಎಐಡಿಎಸ್‌ಓ ಜಿಲ್ಲಾ ಕಾರ್ಯದರ್ಶಿ ಚಂದ್ರಕಲಾ, ಉಪಾಧ್ಯಕ್ಷ ನಿತಿನ್, ಸ್ವಾತಿ, ಎಐಡಿಎಸ್‌ಓ ಕಾರ್ಯಕರ್ತರಾದ ಚಂದನ, ಚಂದ್ರಿಕಾ, ಹೇಮಲತಾ, ಅಂಜಲಿ, ದಿಶಾ,ಅಭಿಷೇಕ್, ಬೀರಪ್ಪ, ಮಹಾರಾಜ ಮತ್ತು ಮಹಾರಾಣಿ ಕಾಲೇಜಿನ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

## ಪುನೀತ್ ಹಾಡಿಗೆ ಸಮರ್ಜಿತ್–ತಾನ್ಯ ನೃತ್ಯ

ಪುನೀತ್ ರಾಜ್‌ಕುಮಾರ್ ಹುಟ್ಟುಹಬ್ಬಕ್ಕೆ 'ಗೌರಿ' ಚಿತ್ರತಂಡ ವಿಶೇಷ ಗೀತೆಯೊಂದನ್ನು ಸಿದ್ಧಪಡಿಸಿದ್ದು, ಆ ಹಾಡಿನಲ್ಲಿ 'ಗೌರಿ' ನಾಯಕ ಸಮರ್ಜಿತ್ ಹಾಗೂ ನಟಿ ತಾನ್ಯಹೋಪ್ ಹೆಜ್ಜೆ ಹಾಕಿದ್ದಾರೆ. ಮೋಹನ್ ಈ ಹಾಡಿಗೆ ನೃತ್ಯ ನಿರ್ದೇಶನ ಮಾಡಿದ್ದು, ಈ ಹಾಡನ್ನು ನಿರ್ದೇಶಕ ಇಂದ್ರಜಿತ್ ಲಂಕೇಶ್ ಚಿತ್ರೀಕರಿಸಿಕೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ಸಮರ್ಜಿತ್, ಪುನೀತ್ ರಾಜ್‌ಕುಮಾರ್ ಅವರ ಆಕ್ಟಿಂಗ್, ಡ್ಯಾನ್ಸ್ ನನಗೆ ಸ್ಫೂರ್ತಿ. ಹಾಗಾಗಿ ಅವರ ಹುಟ್ಟುಹಬ್ಬದಂದು ನಮ್ಮ ಚಿತ್ರತಂಡದಿಂದ ಈ ಹಾಡನ್ನು ಬಿಡುಗಡೆ ಮಾಡುವ ಮೂಲಕ ಅವರಿಗೆ ನಮನ ಸಲ್ಲಿಸುತ್ತಿದ್ದೇವೆ ಎಂದು ಹೇಳಿದರು. ಸಮರ್ಜಿತ್ ಲವಲವಿಕೆಯ ಹುಡುಗ. ಈ ಹಾಡಿನಲ್ಲಿ ಅವರಜೊತೆ ಅಭಿನಯಿಸುತ್ತಿರುವುದಕ್ಕೆ ನನಗೆ ಖುಷಿಯಾಗಿದೆ ಎಂದು ತಾನ್ಯ ಹೋಪ್ ತಿಳಿಸಿದರು.

ಈಗಾಗಲೇ ಗೌರಿ ಚಿತ್ರದ ಚಿತ್ರೀಕರಣ ಬಹುತೇಕ ಮುಕ್ತಾಯ ಹಂತವನ್ನು ತಲುಪಿದೆ. ಪುನೀತ್ ರಾಜಕುಮಾರ್ ಅವರು ನಟಿಸಿದ ಚಿತ್ರಗಳ ಜನಪ್ರಿಯ ಹಾಡುಗಳಿಗೆ ಸಮರ್ಜಿತ್ ಹಾಗೂ ತಾನ್ಯ ಹೋಪ್ ಹೆಜ್ಜೆ ಹಾಕಿದ್ದಾರೆ. ಈ ವಿಶೇಷ ಹಾಡನ್ನು ಸಾಮಾಜಿಕ ಜಾಲತಾಣಗಳಲ್ಲಿ ಬಿಡುಗಡೆ ಮಾಡುತ್ತಿದ್ದೇವೆ ಎಂದು ನಿರ್ದೇಶಕ ಇಂದ್ರಜಿತ್ ಲಂಕೇಶ್ ಹೇಳಿದರು. ಹಿರಿಯ ಛಾಯಾಗ್ರಾಹಕ ಕೆ.ಕೆ. ಕೆಲಸ ಮಾಡುತ್ತಿರುವ ನೂರನೇ ಚಿತ್ರವಿದು.


'ಗೌರಿ' ಚಿತ್ರದಲ್ಲಿ ಸಮರ್ಜಿತ್, ತಾನ್ಯಹೋಪ್

## ದೆವ್ವದ ಜೊತೆ ಫಸ್ಟ್‌ನೈಟ್ ಮಾಡಿಕೊಂಡ ಪ್ರಥಮ್!

ಚಿತ್ರರಂಗಕ್ಕೆ ಬಂದಾಗಿನಿಂದಲೂ ಸದಾ ಕಾಂಟ್ರವರ್ಸಿ ಮಾಡಿಕೊಂಡೇ ಬಂದಿರುವ ನಟ ಪ್ರಥಮ್ ಈಗ ಮತ್ತೊಂದು ವಿಷಯಕ್ಕೆ ಸುದ್ದಿಯಲ್ಲಿದ್ದಾರೆ, ಇತ್ತೀಚೆಗಷ್ಟೇ ಪ್ರಥಮ್ 'ಫಸ್ಟ್‌ನೈಟ್ ವಿಥ್ ದೆವ್ವ' ಎಂಬ ಚಿತ್ರದಲ್ಲಿ ನಾಯಕಿಯ ಜೊತೆ ಹಸಿಬಿಸಿ ದೃಶ್ಯಗಳಲ್ಲಿ ಕಾಣಿಸಿಕೊಳ್ಳುವ ಮೂಲಕ ಸುದ್ದಿಯಾಗಿದ್ದಾರೆ. ನವೀನ್ ಬೀರಪ್ಪ ನಿರ್ಮಾಣದ ಈ ಚಿತ್ರಕ್ಕೆ ಪಿ.ವಿ.ಆರ್.ಸ್ವಾಮಿ ಆಕ್ಷನ್ ಕಟ್ ಹೇಳಿದ್ದಾರೆ. ಹಾರರ್ ಕಥಾಹಂದರ ಹೊಂದಿರುವ ಈ ಚಿತ್ರದ ಟೀಸರ್ ಬಿಡುಗಡೆಯಾಗಿದೆ.

ತನ್ನ ಪಾತ್ರದ ಕುರಿತಂತೆ ಸ್ಪಷ್ಟನೆ ನೀಡಿದ ಪ್ರಥಮ್, ಈ ಚಿತ್ರ ಆರಂಭವಾದ ತಕ್ಷಣ ಮೊದಲು ಬರುವ ಸನ್ನಿವೇಶವೇ ಮದುವೆಯ ದೃಶ್ಯ. ಬಹಳ ಆಸೆಯಿಂದ ಸುಂದರ ಯುವತಿಯ ಜೊತೆ ಮದುವೆಯಾದ ಹುಡುಗನಿಗೆ ತನ್ನ ಮೊದಲ ರಾತ್ರಿ ನಡೆಯುತ್ತಿರುವುದು ದೆವ್ವದ ಜೊತೆಗೆ ಎಂದು ತಿಳಿದಾಗ ಆತನಿಗೆ ಏನೆಲ್ಲಾ ಅನುಭವ ಆಗುತ್ತದೆ? ಎನ್ನುವುದೇ ಈ ಚಿತ್ರದ ಕಾನ್ಸೆಪ್ಟ್. ಇದು ಹಾರರ್ ಹಿನ್ನೆಲೆಯ ಚಿತ್ರವಾದರೂ ನಗುವಿಗೆ ಬರವಿಲ್ಲ. ಹಾರರ್, ಕಾಮಿಡಿ, ಆಕ್ಷನ್ ಹಾಗೂ ಸೆಂಟಿಮೆಂಟ್ ಹೀಗೆ ಎಲ್ಲ ರೀತಿಯ ಎಂಟರ್‌ಟೈನಿಂಗ್ ಕಂಟೆಂಟ್ ಚಿತ್ರದಲ್ಲಿದೆ. ಈ ಚಿತ್ರಕ್ಕೆ ನಾನೇ ಕಥೆ, ಚಿತ್ರಕಥೆ ಬರೆದಿದ್ದೇನೆ. ನಿಖಿತ, ಜೀವಿತ ಹಾಗೂ ಸುಶ್ಮಿತ ಎಂಬ ಮೂವರು ನಾಯಕಿಯರು ಚಿತ್ರದಲ್ಲಿದ್ದು, ನಿಖಿತ ನನ್ನ ಹೆಂಡತಿಯ ಪಾತ್ರ ಮಾಡಿದ್ದಾರೆ. ಹಿರಿಯ ನಟ ಶ್ರೀನಿವಾಸಮೂರ್ತಿ, ರಮೇಶ್ ಭಟ್, ಹರೀಶ್‌ರಾಜ್ ಇವರೆಲ್ಲ ಉಳಿದ ಪಾತ್ರಗಳಲ್ಲಿದ್ದಾರೆ ಎಂದರು.

ನಂತರ ಚಿತ್ರದ ನಿರ್ದೇಶಕ ಹಾಗೂ ಛಾಯಾಗ್ರಾಹಕ ಪಿವಿಆರ್ ಸ್ವಾಮಿ ಮಾತನಾಡುತ್ತಾ, ಕಳೆದ ನವೆಂಬರ್‌ನಲ್ಲಿ ಚಿತ್ರೀಕರಣ ಆರಂಭಿಸಿದ್ದೆವು. ತಂಡ ನೀಡಿದ ಸಹಕಾರದಿಂದ ನಿಗದಿಯಂತೆ ಶೂಟಿಂಗ್ ಪೂರ್ಣವಾಗಿದೆ. ಮುಂದಿನ ತಿಂಗಳು ಚಿತ್ರವನ್ನು ತೆರೆಗೆ ತರಬೇಕೆಂದು ಪ್ಲಾನ್ ಮಾಡಿಕೊಂಡಿದ್ದೇವೆ ಎಂದು ಹೇಳಿದರು.

ನಿರ್ಮಾಪಕ ನವೀನ್ ಬೀರಪ್ಪ, ನಾಯಕಿರಾದ ನಿಖಿತ, ಸುಶ್ಮಿತ, ಜೀವಿತ, ನಟಿ ಪುಷ್ಪಸ್ವಾಮಿ, ನಟ ಹರೀಶ್‌ರಾಜ್, ಸಂಗೀತ ನಿರ್ದೇಶಕ ಅದ್ವಿಕ್ ವರ್ಮ, ಕಾರ್ಯಕಾರಿ ನಿರ್ಮಾಪಕ ಅರವಿಂದ್ ಹಾಗೂ ಸಂಭಾಷಣೆ ಬರೆದು ಸಂಕಲನ ಮಾಡುತ್ತಿರುವ ನಾಗೇಶ್ ಚಿತ್ರದ ಕುರಿತಂತೆ ಮಾತನಾಡಿದರು.


'ಫಸ್ಟ್‌ನೈಟ್' ಚಿತ್ರದಲ್ಲಿ ಪ್ರಥಮ್, ನಿಖಿತ

## ಮಾ.8ಕ್ಕೆ ಎರಡು ಸಾವಿರ ಚಿತ್ರಮಂದಿರಗಳಲ್ಲಿ ರೆಕಾರ್ಡ್ ಬ್ರೇಕ್!

ಅನಾಥ ಹುಡುಗರಿಬ್ಬರು ಯಾರೂ ಸಾಧಿಸದಿದ್ದ ಕಾರ್ಯವನ್ನು ಸಾಧಿಸಿ ತೋರಿಸುವ ಮೂಲಕ ಎಲ್ಲ ದಾಖಲೆಗಳನ್ನು ಮೆಟ್ಟಿ ನಿಲ್ಲುವ ಕಥಾಹಂದರ ಹೊಂದಿದಚಿತ್ರ 'ರೆಕಾರ್ಡ್ ಬ್ರೇಕ್' ಕನ್ನಡ, ತೆಲುಗು ಸೇರಿದಂತೆ 8 ಭಾಷೆಗಳಲ್ಲಿ ನಿರ್ಮಾಣವಾಗಿದೆ, ತೆಲುಗಿನಲ್ಲಿ ಅನೇಕ ಚಿತ್ರಗಳನ್ನು ನಿರ್ಮಿಸಿದ್ದಲ್ಲದೆ ಎರಡು ಸಾವಿರಕ್ಕೂ ಅಧಿಕ ಚಿತ್ರಗಳನ್ನು ವಿತರಣೆ ಮಾಡಿರುವ ಚಲದವಾಡ ಶ್ರೀನಿವಾಸರಾವ್ ಅವರು ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದಾರೆ. ಅವರೇ ನಿರ್ಮಾಣ ಸಹ ಮಾಡಿದ್ದಾರೆ. ವಿಭಿನ್ನ ಕಥಾಹಂದರ ಹೊಂದಿರುವ ಈ ಚಿತ್ರವು ಮಾ.8ರ ಮಹಾ ಶಿವರಾತ್ರಿಯಂದು ಎಲ್ಲಾ ಭಾಷೆಗಳಲ್ಲೂ ಭಾರತದಾದ್ಯಂತ ಸುಮಾರು ಎರಡು ಸಾವಿರಕ್ಕೂ ಅಧಿಕ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಲಿದೆ. ಇತ್ತೀಚೆಗೆ ನಡೆದ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತಂತೆ ಚಿತ್ರತಂಡ ಮಾಹಿತಿ ಹಂಚಿಕೊಂಡಿತು. ನಿರ್ದೇಶಕ ಚಲದವಾಡ ಶ್ರೀನಿವಾಸರಾವ್ ಮಾತನಾಡಿ, ನಾನು ಮೂಲತಃ ಟಿಂಬರ್ ಉದ್ಯಮಿಯಾಗಿದ್ದು, ಅಯೋಧ್ಯೆಯ ಶ್ರೀ ರಾಮನ ದೇವಸ್ಥಾನ ಸೇರಿದಂತೆ ಅನೇಕ ಜಗತ್ಪ್ರಸಿದ್ಧ ದೇವಸ್ಥಾನಗಳಿಗೆ ಮರ ಒದಗಿಸಿದ್ದೇವೆ. ನಮ್ಮ ಸಂಸ್ಥೆಯಿಂದ ಈವರೆಗೂ ನೂರಕ್ಕೂ ಹೆಚ್ಚು ಚಿತ್ರಗಳನ್ನು ನಿರ್ಮಾಣ ಮಾಡಿದ್ದೇವೆ. ಅನೇಕ ಭಾಷೆಗಳ ಚಿತ್ರಗಳನ್ನು ವಿತರಣೆ ಕೂಡ ಮಾಡಿದ್ದೇವೆ. ದುಡ್ಡು ಮಾಡುವುದಕ್ಕಿಂತ ನೋಡುಗರಿಗೆ ಒಳ್ಳೆಯ ಚಿತ್ರವನ್ನು ಕೊಡಬೇಕೆಂಬ ಆಸೆ ನನ್ನದು. ಈ ಚಿತ್ರದ ಬಗ್ಗೆ ಹೇಳಬೇಕೆಂದರೆ, ಚಂಟಿ ಹಾಗೂ ಬಂಟಿ ಎಂಬ ಅನಾಥ ಹುಡುಗರಿಬ್ಬರು ತಾವು ಅಂದುಕೊಂಡದ್ದನ್ನು ಹಾಗೂ ಯಾರೂ ನಿರೀಕ್ಷಿಸದ್ದನ್ನು ಹೇಗೆ ಸಾಧಿಸುತ್ತಾರೆ ಎನ್ನುವುದೇ ಕಾನ್ಸೆಪ್ಟ್, ಹಿರಿಯ ನಟಿ ಜಯಸುಧಾ ಅವರ ಪುತ್ರ ನಿಹಾರ್ ಹಾಗೂ ನಾಗಾರ್ಜುನ ಚಂಟಿ ಹಾಗೂ ಬಂಟಿ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ರಗ್ದಾ ಇಫ್ತೇಕರ್ ಚಿತ್ರದ ನಾಯಕಿ. ಸತ್ಯಕೃಷ್ಣ, ಸಂಜನಾ ಚಿತ್ರದ ಇತರೆ ತಾರಾಬಳಗದಲ್ಲಿದ್ದಾರೆ. ಮಾ. 8ರಂದು ಕನ್ನಡ, ತೆಲುಗು, ತಮಿಳು, ಮಲಯಾಳಂ, ಹಿಂದಿ, ಭೋಜಪುರಿ, ಬೆಂಗಾಲಿ, ಒಡಿಯಾ ಭಾಷೆಗಳಲ್ಲಿ ಏಕಕಾಲಕ್ಕೆ ಭಾರತದಾದ್ಯಂತ ಎರಡು ಸಾವಿರಕ್ಕೂ ಅಧಿಕ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ ಎಂದರು.



ನಾಯಕರಾದ ನಿಹಾರ್, ನಾಗಾರ್ಜುನ, ನಾಯಕಿ ರಗ್ದಾ ಇಫ್ತೇಕರ್, ನಟಿ ಸತ್ಯಕೃಷ್ಣ ಹಾಗೂ ಪ್ರಸನ್ನ ಕುಮಾರ್ ತಮ್ಮ ಪಾತ್ರದ ಕುರಿತಂತೆ ಮಾಹಿತಿ ನೀಡಿದರು. ನಿರ್ದೇಶಕ ಅಜಯ್ ಕುಮಾರ್ ಅತಿಥಿಗಳಾಗಿ ಆಗಮಿಸಿ ಚಿತ್ರತಂಡಕ್ಕೆ ಶುಭ ಕೋರಿದರು.

## 'ನೀನೇ ನೀನೇ' ದಿಲ್‌ಖುಷ್ ಲವ್ ಸಾಂಗ್

ರೊಮ್ಯಾಂಟಿಕ್ ಕಾಮಿಡಿ ಕಥಾಹಂದರ ಹೊಂದಿರುವ, ಪ್ರಮೋದ್ ಜಯ ಮೊದಲ ಬಾರಿಗೆ ಆಕ್ಷನ್ ಕಟ್ ಹೇಳಿರುವ ದಿಲ್‌ಖುಷ್ ಚಿತ್ರವೀಗ ಬಿಡುಗಡೆಗೆ ಸಿದ್ಧವಾಗಿದ್ದು ಚಿತ್ರತಂಡ ಪ್ರಚಾರ ಕಾರ್ಯ ಆರಂಭಿಸಿದೆ, ಅದರ ಪ್ರಥಮ ಭಾಗವಾಗಿ ಚಿತ್ರದ ಹಾಡೊಂದನ್ನು ಮೂವರು ನಿರ್ದೇಶಕರು ಬಿಡುಗಡೆ ಮಾಡಿದರು. ಗೌಸ್‌ಪೀರ್ ರಚನೆಯ "ನೀನೇ ನೀನೇ" ಎಂಬ ಸುಂದರ ಹಾಡನ್ನು ನಿರ್ದೇಶಕರಾದ ಪವನ್ ಒಡೆಯರ್, ಸಿಂಪಲ್‌ಸುನಿ ಹಾಗೂ ಬಹದ್ದೂರ್ ಚೇತನ್‌ಕುಮಾರ್ ಅವರುಗಳು ಬಿಡುಗಡೆ ಮಾಡಿದರು. "ಸರಿಗಮಪ" ಖ್ಯಾತಿಯ ನಿಹಾಲ್ ತೌರೊ ಹಾಗೂ ಆರತಿ ಅಶ್ವಿನ್ ಈ ಹಾಡಿಗೆ ಧ್ವನಿಯಾಗಿದ್ದು ಪ್ರಸಾದ್ ಕೆ.ಶೆಟ್ಟಿ ಸಂಗೀತ ಸಂಯೋಜನೆ ಮಾಡಿದ್ದಾರೆ. ರಂಜಿತ್, ಸ್ಪಂದನ ಸೋಮಣ್ಣ ಚಿತ್ರದಲ್ಲಿ ಯುವ ಜೋಡಿಯಾಗಿ ಕಾಣಿಸಿಕೊಂಡಿದ್ದಾರೆ.

ದಿಲ್‌ಖುಷ್ ಚಿತ್ರದ ಹಾಡುಗಳು ಹಾಗೂ ಟೀಸರ್ ತುಂಬಾ ಚೆನ್ನಾಗಿದೆ. ಸಹನಿರ್ದೇಶಕರಾಗಿದ್ದ ಪ್ರಮೋದ್ ಜಯ ಈ ಸಿನಿಮಾ ಮೂಲಕ ನಿರ್ದೇಶಕರಾಗಿದ್ದಾರೆ. ಹಾಡುಗಳು ಹಾಗೂ ಟೀಸರ್ ಮೂಲಕವೇ ಪ್ರಮೋದ್ ಭರವಸೆ ಮೂಡಿಸಿದ್ದಾರೆ. ಉತ್ತಮ ಕಥೆಗಳಿರುವ ಚಿತ್ರಗಳು ಕನ್ನಡದಲ್ಲಿ ಹೆಚ್ಚು ಬರುತ್ತಿವೆ. ಆದರೆ ಜನ ಚಿತ್ರಮಂದಿರಗಳಿಗೆ ಬರುತ್ತಿಲ್ಲ, ಫ್ಯಾಮಿಲಿ ಆಡಿಯನ್ಸ್ ಬಂದಾಗ ಮಾತ್ರ ಚಿತ್ರಗಳು ಯಶಸ್ಸಿಯಾಗಲು ಸಾಧ್ಯ ಎಂಬ ಅಭಿಪ್ರಾಯವನ್ನು ನಿರ್ದೇಶಕರಾದ ಪವನ್ ಒಡೆಯರ್, ಸಿಂಪಲ್ ಸುನಿ ಹಾಗೂ ಚೇತನ್‌ಕುಮಾರ್ ವ್ಯಕ್ತಪಡಿಸಿದರು. ಸಿಂಪಲ್ ಸುನಿ ಅವರ ಬಳಿ ಅಸಿಸ್ಟೆಂಟ್ ಡೈರೆಕ್ಟರ್ ಆಗಿ ಸಾಕಷ್ಟು ಕೆಲಸ ಕಲಿತ್ತಿದ್ದೇನೆ. ನಿರ್ದೇಶಕನಾಗಿ ಮೊದಲ ಪ್ರಯತ್ನ. ಚಿತ್ರವನ್ನು ಮುಂದಿನ ತಿಂಗಳು ತೆರೆಗೆ ತರಲು ಸಿದ್ಧತೆ ಮಾಡಿಕೊಂಡಿದ್ದೇವೆ ಎಂದು ನಿರ್ದೇಶಕ ಪ್ರಮೋದ್ ಜಯ ತಿಳಿಸಿದರು.

ನಾಯಕ ರಂಜಿತ್ ಮಾತನಾಡುತ್ತಾ, ಚಿತ್ರದಲ್ಲಿ ಖುಷ್ ಎಂಬ ಲವಲವಿಕೆಯ ಹುಡುಗನಾಗಿ ಕಾಣಿಸಿಕೊಂಡಿದ್ದೇನೆ, ಉತ್ತಮ ಪ್ರೇಮಕಥೆ ಚಿತ್ರದಲ್ಲಿದೆ ಎಂದರು. ನಾಯಕಿ ಸ್ಪಂದನ ಸೋಮಣ್ಣ ಮಾತನಾಡಿ, ನನ್ನ ಪಾತ್ರದ ಹೆಸರು ದಿಲ್ಮಯ ಎಂದು ಹೇಳಿಕೊಂಡರು. ಉಳಿದಂತೆ ನಟರಾದ ಧರ್ಮಣ್ಣ, ರಘು ರಾಮನಕೊಪ್ಪ ಮಂತಾದವರು "ದಿಲ್ ಖುಷ್" ಚಿತ್ರದ ಬಗ್ಗೆ ಮಾತನಾಡಿದರು. ಜಯಪ್ರಭ ಕಲರ್ ಫ್ರೇಮ್ಸ್ ಲಾಂಛನದಲ್ಲಿ ಜಯಲಕ್ಷ್ಮಿ ಪ್ರವೀಣ್ ಹಾಗೂ ಪ್ರಭ ಶೇಖರ್ ಈ ಚಿತ್ರವನ್ನು ನಿರ್ಮಿಸಿದ್ದಾರೆ.


'ನೀನೇ ನೀನೇ' ಚಿತ್ರದಲ್ಲಿ ರಂಜಿತ್, ಸ್ಪಂದನ ಸೋಮಣ್ಣ

## ಸಿನಿಪದಬಂಧ–515

| | | | | | | | | | | |
|---|---|---|---|---|---|---|---|---|---|---|
| 1 | | 2 | | ■ | 3 | | | | 4 | ■ |
| | ■ | | ■ | ■ | | ■ | ■ | ■ | | ■ |
| | ■ | ■ | 5 | | | | ■ | 6 | | ■ |
| 7 | | | | ■ | | ■ | 8 | ■ | | ■ |
| | ■ | ■ | | ■ | | ■ | | ■ | | ■ |
| | ■ | 9 | | | ■ | 10 | | | ■ | 11 |
| ■ | 12 | ■ | | ■ | 13 | ■ | | ■ | ■ | |
| ■ | | ■ | | ■ | | ■ | 14 | | | |
| ■ | 15 | | ■ | 16 | | | | ■ | ■ | |
| ■ | | ■ | ■ | ■ | | ■ | ■ | 17 | ■ | |
| ■ | 18 | | | | | ■ | 19 | | | |

ಹೆಸರು ______________

ವಿಳಾಸ ______________

______________

ದೂರವಾಣಿ ಸಂಖ್ಯೆ ______________

### ಎಡದಿಂದ ಬಲಕ್ಕೆ

1. ರಮೇಶ್ ಅರವಿಂದ್ "ಖಗೋಳ ಶಾಸ್ತ್ರಜ್ಞ" 4
3. ಶಂಕರ್ ನಾಗ್–ಆರತಿಯ ಪರಿಶುದ್ಧ ಪ್ರೀತಿ 5
5. ನಟ ಅವಿನಾಶ್ ತಾರಾಪತ್ನಿ 4
6. ಕಂದು ಬಣ್ಣದ "ಪ್ರಜ್ವಲ್ ದೇವರಾಜ್" 2
7. ವಿಜಯ ರಾಘವೇಂದ್ರ–ರಾಧಿಕಾ ಅಭಿನಯದ ಚಿತ್ರ 4
9. ಅನಂತ್‌ನಾಗ್ ಅವರ ಏಕಬಿಂದು ನಿರ್ಧಾರ 3
10. ಅಂಬಿ, ದೇವು ಬಾಗಿಲ ಬಳಿ ಸಮರ ಸಾರಿದ್ದಾರೆ 3
14. ಹಬ್ಬ ಚಿತ್ರದಲ್ಲಿ ವಿಷ್ಣುವರ್ಧನ್ ಜೋಡಿ 4
15. ಅಂಬರೀಶ್–ಲಕ್ಷ್ಮೀ ಅಭಿನಯಕ್ಕೆ ಭಾರ್ಗವ ನಿರ್ದೇಶಕ 2
16. "ಓಹೋ ಹಿಮಾಲಯ ಶಿವನಿಗೂ ಗಿರಿಜಗೂ ದೇವಾಲಯ ನವವಧು–ವರರಿಗೆ.---' 4
18. ಶ್ರೀನಾಥ್ ಏನೂ ಅರಿಯದ ಮನುಷ್ಯ 5
19. ರವಿಚಂದ್ರನ್ ಕುಂಚ ಹಿಡಿದಿದ್ದಾನೆ 4



ವಿಜೇತರು: ಹರ್ಷಲಾಸ್ಯ, ನಂ. 292, 2ನೇ ಕ್ರಾಸ್, ಕೆ.ಆರ್.ಆಸ್ಪತ್ರೆ ರಸ್ತೆ, ಮೈಸೂರು-570001


ಉಮ್ಮತ್ತೂರು ಇಂದುಶೇಖರ್
ಮೊ.9880820462

### ಸಿನಿ ಪದಬಂಧ 514ರ ಉತ್ತರ

| | | | | | | | | | | |
|---|---|---|---|---|---|---|---|---|---|---|
| ಅ | ವೃ | ತ | ಬಿಂ | ದು | ■ | ರ | ■ | ■ | ■ | ಬಾ |
| ಮೃ | ■ | ■ | ■ | ರ್ಗ | ■ | ಕ್ತ | ■ | ಜ | ■ | ಳ |
| ತ | ■ | ಆ | ನಂ | ದ | ಜ್ಯೋ | ತಿ | ■ | ಗ | ■ | ನೌ |
| ಘ | ■ | ■ | ■ | ಹು | ■ | ಲ | ಗ್ನ | ಪ | ತ್ರಿ | ಕೆ |
| ಳಿ | ■ | ಪ್ರೇ | ■ | ಲಿ | ■ | ಕ | ■ | ತಿ | ■ | ■ |
| ಗೆ | ದ್ದ | ಮ | ಗ | ■ | ■ | ■ | ಐ | ರಾ | ವ | ತ |
| ■ | ■ | ಕ್ಕೊ | ■ | ಹಾ | ■ | ಕಾ | ■ | ವ್ | ■ | ವ |
| ಪ್ರೇ | ಮ | ಪ | ಲ್ಲ | ವಿ | ■ | ಡಿ | ■ | ■ | ■ | ರಿ |
| ಮಾ | ■ | ರ್ಮಿ | ■ | ನ | ಯ | ನ | ತಾ | ರಾ | ■ | ನ |
| ಚಾ | ■ | ಟ್ಟಿ | ■ | ಹೆ | ■ | ಬೆಂ | ■ | ■ | ■ | ಸಿ |
| ರಿ | ■ | ■ | ■ | ಡೆ | ■ | ಕಿ | ಲ್ಲ | ರ್ | ಡೈ | ರಿ |

### ಮೇಲಿನಿಂದ ಕೆಳಕ್ಕೆ

1. ಶಿವಧ್ವಜ್–ಪ್ರೇಮಾಳ ಗೃಹದಲ್ಲಿ ಸಂತೋಷವಿದೆ 6
2. ಅಲಾರೆ ಅಲಾರೆ ಮುಕುಂದ ಮುರಾರೆ ಎಂದು ಕೃಷ್ಣನನ್ನು ಕರೆದಾಕೆ! 2
3. ಭುಜಂಗಯ್ಯನ ದಶಾವತಾರ ಚಿತ್ರದ ನಾಯಕಿ 5
4. ಮದನ್ ಮಲ್ಲು ಅತೀ ಬುದ್ಧಿವಂತ! 5
5. ಕೆ.ಎಸ್.ಎಲ್.ಸ್ವಾಮಿ ನಿರ್ದೇಶನದಲ್ಲಿ ಚಳಿಗಾಲದಿ ಕಂಡ ಸ್ವಪ್ನ 6
8. ತ್ರಿಲೋಕ ಸಂಚಾರಿ ಗೆಲುವು ಕಂಡಿದ್ದಾನೆ 6
11. "--- --- ಆನಂದವೇ ನೀ ತಂದ ಪ್ರೀತಿಯಿಂದ ನೀ ತಂದ ಬಾಳಿನಿಂದ...", 6
12. ಒಂದು ಬಗೆಯ ತರಕಾರಿ ಇರಿಸಿಕೊಂಡಿರುವ ಸಹನಟ 5
13. ಉದಯ್ ಕುಮಾರ್ "ಗಾಡ್ ಮ್ಯಾನ್" 4
17. ಆಫ್ರಿಕಾದಲ್ಲಿ ಕಾಣಿಸಿಕೊಂಡವಳು 2

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು–570 015

# ದೇಶದ ರಕ್ಷಣೆ ಬಿಜೆಪಿ ಸರ್ಕಾರದಿಂದ ಮಾತ್ರ ಸಾಧ್ಯ

## ಮಾಜಿ ಉಪ ಮುಖ್ಯಮಂತ್ರಿ ಅಶ್ವಥ್ ನಾರಾಯಣ್



ಹುಣಸೂರಲ್ಲಿ ಭಾರತ್ ಅಕ್ಕಿಯನ್ನು ವಿತರಿಸಲಾಯಿತು.

ಹುಣಸೂರು, ಫೆ.29– ದೇಶದ ರಕ್ಷಣೆ, ಸವಾಲು ಎದುರಿಸಲು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರದಿಂದ ಮಾತ್ರ ಸಾಧ್ಯ ಎಂದು ಮಾಜಿ ಉಪ ಮುಖ್ಯಮಂತ್ರಿ ಅಶ್ವಥ್ ನಾರಾಯಣ್ ಹೇಳಿದರು.

ನಗರದ ಬಿ.ಎಂ.ರಸ್ತೆಯಲ್ಲಿರುವ ನಗರಸಭೆ ಸದಸ್ಯ ಗಣೇಶ್ ಕುಮಾರಸ್ವಾಮಿ ನಿವಾಸದ ಆವರಣದ ಬಳಿ ಪಕ್ಷ ಸಂಘಟನೆ ಕಾರ್ಯಕ್ರಮದ ನಂತರ ಭಾರತ್ ಅಕ್ಕಿ ವಿತರಿಸಿ ಮಾತನಾಡಿದ ಅವರು, ಪ್ರಸ್ತುತ ದೇಶದ ರಕ್ಷಣೆ, ಸ್ಥಿರತೆ, ಸುಭದ್ರತೆ ಮತ್ತು ಸವಾಲನ್ನು ಎದುರಿಸಲು ಸ್ಥಿರ ಸರ್ಕಾರದ ಅವಶ್ಯಕತೆ ಇದೆ. ಅದು ಬಿಜೆಪಿಯಿಂದ ಮಾತ್ರ ಸಾಧ್ಯ ಪ್ರಧಾನಿ ಮೋದಿ ಅವರು ದೇಶದ ರಕ್ಷಣೆ, ಸ್ಥಿರತೆಗೆ ಹಗಲಿರುಳು ದುಡಿಯುತ್ತಿದ್ದಾರೆ. ಅದ್ದರಿಂದ ಈ ಬಾರಿಯೂ ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಬೇಕು. ಹೀಗಾಗಿ ಕಾರ್ಯಕರ್ತರು ಬಿಜೆಪಿ ಸರ್ಕಾರದ ಜನಪರ ಯೋಜನೆಗಳನ್ನು ಜನರಿಗೆ ಮನವರಿಕೆ ಮಾಡಿಕೊಡಬೇಕು ಎಂದರು.

ಸಂಸದ ಪ್ರತಾಪ್ ಸಿಂಹ ಮಾತನಾಡಿ, ಇದೀಗ ಭಾರತ್ ಅಕ್ಕಿ ವಿತರಿಸುತ್ತಿದ್ದು, ಮುಂದೆ ಅಡುಗೆ ಎಣ್ಣೆಯನ್ನು ಸಹ ಕೇಂದ್ರ ಸರ್ಕಾರದಿಂದ ವಿತರಿಸಲಾಗುವುದು. ಪಾಲಹಳ್ಳಿಯಿಂದ ಕಟ್ಟೆಮಳಲವಾಡಿ, ಕಂಪ್ಲಾಪುರ ಮಾರ್ಗವಾಗಿ ಕುಶಾಲನಗರದವರೆಗೆ ಚತುಷ್ಪಥ ರಸ್ತೆ ನಿರ್ಮಾಣವಾಗಲಿದ್ದು, ಕೇವಲ 16 ತಿಂಗಳಲ್ಲಿ ಲೋಕಾರ್ಪಣೆಗೊಳ್ಳಲಿದೆ. ಇದರಿಂದ ಬೆಂಗಳೂರಿನಿಂದ ಕಟ್ಟೆಮಳಲವಾಡಿಗೆ ಕೇವಲ 2 ಗಂಟೆಗೆ ತಲುಪಬಹುದಾಗಿದೆ. ಅಲ್ಲದೇ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ದಕ್ಷಿಣ ಭಾರತದ ಇತಿಹಾಸದಲ್ಲೇ ವೇಗವಾಗಿ ನಿರ್ಮಾಣಗೊಂಡಿದೆ ಎಂದ ಅವರು, 30 ಕೋಟಿ ವೆಚ್ಚದಲ್ಲಿ ಹುಣಸೂರು ನಗರ ಸೇರಿದಂತೆ ತಾಲೂಕಿನ ಪ್ರತಿ ಗ್ರಾಮಕ್ಕೂ ಕುಡಿಯುವ ನೀರು ಒದಗಿಸುವ ಕಾಮಗಾರಿ ಆರಂಭವಾಗಲಿದೆ ಎಂದರು. ಈ ವೇಳೆ ನಗರಸಭೆ ಸದಸ್ಯ ಗಣೇಶ್ ಕುಮಾರಸ್ವಾಮಿ, ಮುಖಂಡರಾದ ನಾಗಣ್ಣಗೌಡ, ಕಾಂತರಾಜು, ನಾರಾಯಣ್, ನಾಗರಾಜ್ ಮಲ್ಲಾಡಿ, ನಿಂಗರಾಜಪ್ಪ, ಮಂಜುನಾಥ್, ಚಂದ್ರಶೇಖರ್, ದಿನೇಶ್, ರಮೇಶ್ ಕುಮಾರ್, ಸೂರ್ಯಕುಮಾರ್, ವೀರೇಶ್ ರಾವ್, ವೆಂಕಟಮ್ಮ, ಮಂಜುಳ, ಮೀನಾ ಸೇರಿದಂತೆ ಪಕ್ಷದ ಮುಖಂಡರು, ಕಾರ್ಯಕರ್ತರು ಹಾಜರಿದ್ದರು.

## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ ಚಿತ್ರಮಂದಿರ** | **(ದೂ: 2521923)** |
| ಕೆಜಿಎಂ (ಕ) | 2 ಪ್ರದರ್ಶನಗಳು, |
| ಜುಗಲ್‌ಬಂದಿ (ಕ) | 2 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | **(ದೂ: 2422871)** |
| ಕಾಟೇರ (ಕ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | **(ದೂ: 2497199)** |
| ಕ್ರಾಕ್ (ಹಿಂ) | 4 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | **(ಮೊ:9900820093)** |
| ಛಾಯಾ (ಕ) | 2 ಪ್ರದರ್ಶನಗಳು |
| ನಮೋಭಾರತ್ (ಕ) | 2 ಪ್ರದರ್ಶನಗಳು |
| **ಗಾಯಿತ್ರಿ** | |
| ಒಂದು ಸರಳ ಪ್ರೇಮಕಥೆ (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| ಆಪರೇಷನ್ ವ್ಯಾಲೆಂಟೈನ್ (ತೆ) | 4 ಪ್ರದರ್ಶನಗಳು |
| **ಸಂಗಂ** | |
| ಉಪಾಧ್ಯಕ್ಷ (ಕ) | 4 ಪ್ರದರ್ಶನಗಳು |
| **ಲಿಡೋ** | |
| ವಾರಿ–3 (ತೆ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| ಸಹದೇವ್ (ಹಿ) | 4 ಪ್ರದರ್ಶನಗಳು |
| **ಪ್ರಭಾ** | |
| ಛಾಯಾ (ಕ) | 2 ಪ್ರದರ್ಶನಗಳು |
| ನಮೋಭಾರತ್ (ಕ) | 2 ಪ್ರದರ್ಶನಗಳು |

### ಡಿಆರ್‌ಸಿ ಸಿನಿಮಾಸ್
ದೂ : 4240422/4241800

| | |
|---|---|
| ಸ್ಕ್ರೀನ್ 1 | **ಚಾರಿ 111 (ತೆ):** ಬೆ.10.30ಕ್ಕೆ, **ಡ್ಯೂನ್ ಪಾರ್ಟ್2 (ಇಂ):** ಮ.1.05ಕ್ಕೆ, ರಾ.10.25ಕ್ಕೆ, **ಆರ್ಟಿಕಲ್ 370 (ಹಿಂ):** ಸಂ.4.15ಕ್ಕೆ, ರಾ.7.25ಕ್ಕೆ. |
| ಸ್ಕ್ರೀನ್ 2 | **ಜುಗಲ್‌ಬಂದಿ (ಕ):** ಬೆ.10.45ಕ್ಕೆ, **ಉಪಾಧ್ಯಕ್ಷ (ಕ):** ಮ.1.30ಕ್ಕೆ, **ಲಾಪತಾ ಲೇಡಿಸ್ (ಹಿಂ):** ಸಂ.4.25ಕ್ಕೆ, **ಒಂದು ಸರಳ ಪ್ರೇಮಕಥೆ (ಕ):** ರಾ.7ಕ್ಕೆ, **ಮಂಜುಮಲೆ (ಮ):** ರಾ.10ಕ್ಕೆ. |
| ಸ್ಕ್ರೀನ್ 3 | **ಆರ್ಟಿಕಲ್ 370 (ಹಿಂ):** ಬೆ.10.40ಕ್ಕೆ, ರಾ.9.45ಕ್ಕೆ, **ಆಪರೇಷನ್ ವ್ಯಾಲೆಂಟೈನ್ (ತೆ):** ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ. |
| ಸ್ಕ್ರೀನ್ 4 | |

### ಐನಾಕ್ಸ್ ಮೂವೀಸ್
ದೂ : 2533444 / 2433456

| | |
|---|---|
| ಸ್ಕ್ರೀನ್ 1 | **ಆಪರೇಷನ್ ವ್ಯಾಲೆಂಟೈನ್ (ತೆ):** ಬೆ.9.55ಕ್ಕೆ, **ಲಾಪತಾ ಲೇಡಿಸ್ (ಹಿಂ):** ಮ.12.45ಕ್ಕೆ, **ಡ್ಯೂನ್ ಪಾರ್ಟ್2 (ಇಂ):** ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ. |
| ಸ್ಕ್ರೀನ್ 2 | **ಡ್ಯೂನ್ ಪಾರ್ಟ್2 (ಇಂ):** ಬೆ.9.50ಕ್ಕೆ, ಮ.1.20ಕ್ಕೆ, **ಕ್ರೀಂ (ಕ):** ಸಂ.4.50ಕ್ಕೆ, **ಆಪರೇಷನ್ ವ್ಯಾಲೆಂಟೈನ್ (ತೆ):** ರಾ.7.25ಕ್ಕೆ, **ಮಂಜುಮ್ಮೆಲ್ ಬಾಯ್ಸ್ (ಮ):** ರಾ.10.20ಕ್ಕೆ. |
| ಸ್ಕ್ರೀನ್ 3 | **ಲಾಪತಾ ಲೇಡಿಸ್ (ಹಿಂ):** ಬೆ.10ಕ್ಕೆ, ರಾ.7.25ಕ್ಕೆ, **ಆರ್ಟಿಕಲ್ 370 (ಹಿಂ):** ಮ.12.45ಕ್ಕೆ, ಸಂ.4.05ಕ್ಕೆ, ರಾ.10.10ಕ್ಕೆ. |
| ಸ್ಕ್ರೀನ್ 4 | **ಆಪರೇಷನ್ ವ್ಯಾಲೆಂಟೈನ್ (ತೆ):** ಮ.12ಕ್ಕೆ, **ಉಪಾಧ್ಯಕ್ಷ (ಕ):** ಮ.3.05ಕ್ಕೆ, **ಒಂದು ಸರಳ ಪ್ರೇಮಕಥೆ (ಕ):** ಸಂ.6.20ಕ್ಕೆ. |

### ಮೈಸೂರು ವಿಷನ್ ಸಿನಿಮಾ
ದೂ : 0821–2973519

| | |
|---|---|
| ಸ್ಕ್ರೀನ್ 1 | **ಪಾರ್ಕಿಂಗ್ (ಕ):** ಬೆ.10.35ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ 2 (ಕ):** ಮ.1.10ಕ್ಕೆ, **ಬ್ಯಾಡ್ ಮ್ಯಾನರ್ಸ್ (ಕ):** ಸಂ.4ಕ್ಕೆ, **ಅರ್ಧಂಬರ್ಧ ಪ್ರೇಮಕಥೆ (ಕ):** ಸಂ.6.35ಕ್ಕೆ, **ಅನ್ನಪೂರ್ಣಿ (ತ):** ರಾ.9.15ಕ್ಕೆ |
| ಸ್ಕ್ರೀನ್ 2 | **ಅನಿಮಲ್ (ಹಿಂ):** ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, **ಸ್ಯಾಮ್ ಬಹದ್ದೂರ್ (ಹಿಂ):** ಮ.1.45ಕ್ಕೆ. |
| ಸ್ಕ್ರೀನ್ 3 | **ಸ್ಯಾಮ್ ಬಹದ್ದೂರ್ (ಹಿಂ):** ಬೆ.10.10ಕ್ಕೆ, ಸಂ.4.50ಕ್ಕೆ, **ಅನಿಮಲ್ (ಹಿಂ):** ಮ.1.05ಕ್ಕೆ, ರಾ.7.45ಕ್ಕೆ |
| ಸ್ಕ್ರೀನ್ 4 | **ಸಪ್ತ ಸಾಗರದಾಚೆ ಎಲ್ಲೋ 2 (ಕ):** ಬೆ.10.45ಕ್ಕೆ, **ಅನಿಮಲ್ (ಹಿಂ):** ಮ.2.40ಕ್ಕೆ, **ನೆಪೋಲಿಯನ್ (ಇಂ):** ಸಂ.6.25ಕ್ಕೆ, **ಸ್ಯಾಮ್ ಬಹದ್ದೂರ್ (ಹಿಂ):** ರಾ.9.30ಕ್ಕೆ. |

### ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

**ಆರ್ಟಿಕಲ್ 370 (ಹಿಂ):** ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, **ಡ್ಯೂನ್ ಪಾರ್ಟ್ 2 (ಇಂ):** ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, **ಡೆಮೋನ್ ಸ್ಲೇಯರ್ (ಜ):** ಸಂ.4.30ಕ್ಕೆ, **ಆಪರೇಷನ್ ವ್ಯಾಲೆಂಟೈನ್ (ತೆ & ಹಿಂ):** ಬೆ.9.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, **ಲಾಪತಾ ಲೇಡಿಸ್ (ಹಿಂ):** ಬೆ.10.35ಕ್ಕೆ, ಸಂ.4.10ಕ್ಕೆ, ರಾ.9.45ಕ್ಕೆ, **ಮಂಜುಮ್ಮೆಲ್ ಬಾಯ್ಸ್ (ಮ):** ಬೆ.10.20ಕ್ಕೆ, ಮ.1.25ಕ್ಕೆ, ರಾ.7.25ಕ್ಕೆ, **ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ):** ಬೆ.11.55ಕ್ಕೆ, **ಕ್ರೀಂ (ಕ):** ಸಂ.6.55ಕ್ಕೆ, **ಪ್ರೇಮಲು (ಮ):** ರಾ.10.20ಕ್ಕೆ, **ಜೋಶುವಾ (ತ):** ಮ.1.20ಕ್ಕೆ, ಸಂ.6.55ಕ್ಕೆ, **ಭ್ರಮಯುಗಂ (ಮ):** ರಾ.9.45ಕ್ಕೆ, **ವಾರನಂ ಆಯಿರಂ (ತ):** ಮ.3.40ಕ್ಕೆ.

**ಸೂಚನೆ :** ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

# ಪಕ್ಷ ಸಂಘಟಿಸಿ, ಲೋಕಸಭಾ ಚುನಾವಣೆಗೆ ಸಜ್ಜಾಗಿ

## ಜಿಲ್ಲಾ ಗ್ರಾಮಾಂತರ ಎಸ್‌ಟಿ ಮೋರ್ಚಾ ಅಧ್ಯಕ್ಷ ಮುದ್ದುಕೃಷ್ಣ ಕರೆ



ಜಿಲ್ಲಾ ಗ್ರಾಮಾಂತರ ಎಸ್‌ಟಿ ಮೋರ್ಚಾ ಅಧ್ಯಕ್ಷ ಮುದ್ದುಕೃಷ್ಣ ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಫೆ29– ಬಿಜೆಪಿ ಕಾರ್ಯಕರ್ತರು ಬೂತ್ ಮಟ್ಟದಿಂದ ಪಕ್ಷ ಸಂಘಟಿಸಿ ಲೋಕಸಭಾ ಚುನಾವಣೆಗೆ ಸಜ್ಜಾಗಬೇಕು ಎಂದು ನೂತನ ಜಿಲ್ಲಾ ಗ್ರಾಮಾಂತರ ಎಸ್‌ಟಿ ಮೋರ್ಚಾ ಅಧ್ಯಕ್ಷ ಮುದ್ದುಕೃಷ್ಣ(ಕಿಟ್ಟಿ) ಕರೆ ನೀಡಿದರು.

ವರುಣ ವಿಧಾನಸಭಾ ಕ್ಷೇತ್ರದ ಆಲಗೂಡು ಗ್ರಾಮದಲ್ಲಿ ತಮ್ಮ ಬೆಂಬಲಿಗರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರ ಸೂಚನೆಯಂತೆ ಪಕ್ಷವನ್ನು ಬೂತ್ ಮಟ್ಟದಿಂದ ಸಂಘಟಿಸಿ ಚಾಮರಾಜನಗರ ಮತ್ತು ಮೈಸೂರು ಹಾಗೂ ಕೊಡಗು ಲೋಕಸಭಾ ಕ್ಷೇತ್ರಗಳು ಬಿಜೆಪಿ ವಶವಾಗುವಂತೆ ಮಾಡೋಣ ಎಂದರು. ವರುಣದಲ್ಲಿ ಈ ಬಾರಿ ಲೋಕಸಭೆ, ಜಿಪಂ, ತಾಪಂ ಚುನಾವಣೆಯಲ್ಲಿ ಯಾರೇ ಅಭ್ಯರ್ಥಿಯಾದರೂ ಅವರ ಪರ ಕೆಲಸ ಮಾಡಿ ಅಧಿಕಾರ ಹಿಡಿಯುವಲ್ಲಿ ಯಶಸ್ವಿಯಾಗಬೇಕು ಎಂದರು.

ಹಿಂದುಳಿದ ವರ್ಗಗಳ ಮಾಜಿ ಜಿಲ್ಲಾಧ್ಯಕ್ಷ ವೆಂಕಟರಮಣಶೆಟ್ಟಿ ಮಾತನಾಡಿ, ಈ ಬಾರಿ ಯುವಕರಿಗೆ ಹೆಚ್ಚಿನ ಆದ್ಯತೆ ನೀಡಲಾಗಿದ್ದು, ಮುಂಬರುವ ಯಾವುದೇ ಚುನಾವಣೆಯಲ್ಲಿ ಎಲ್ಲರೂ ಒಗ್ಗೂಡಿ ಕೆಲಸ ಮಾಡುವ ಮೂಲಕ ನಮ್ಮ ಶಕ್ತಿ ಏನೆಂದು ತೋರಿಸೋಣ ಎಂದರು.

ಈ ವೇಳೆ ಪುರಸಭಾ ಸದಸ್ಯ ಎಸ್.ಕೆ.ಕಿರಣ್, ಗ್ರಾಮದ ಮುಖಂಡರಾದ ಬಸ್ ಏಜೆಂಟ್ ಕುಮಾರ್, ಯಜಮಾನ್ ಕೂಸಣ್ಣ, ಮಲ್ಲೇಶ್ ಕೃಷ್ಣ, ನಾರಾಯಣ್, ಮನು, ದಿನೇಶ್, ತ್ಯಾಗರಾಜು, ಮಹದೇವಣ್ಣ, ಸತೀಶ್, ಗುರು, ಶಂಕರ, ನಾಗ, ಮಹೇಶ್, ಸುರೇಶ, ರಾಜಣ್ಣ, ಮಂಜು, ಸುಹಾಸ್ ಮತ್ತಿತರಿದ್ದರು.

# ಲೋಕಾಯುಕ್ತ ಬಲೆಗೆ ಗ್ರಾಮ ಸಹಾಯಕ

ಹೆಚ್.ಡಿ.ಕೋಟೆ, ಫೆ.29– ಲಂಚ ಪಡೆಯುತ್ತಿದ್ದ ವೇಳೆ ಗ್ರಾಮ ಸಹಾಯಕರೊಬ್ಬರು ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.



ಪಟ್ಟಣದ ತಾಲೂಕು ಕಚೇರಿಯ ಚುನಾವಣೆ ಶಾಖೆ ಗ್ರಾಮ ಸಹಾಯಕ ಕೃಷ್ಣ ಲೋಕಾಯುಕ್ತ ಬಲೆಗೆ ಬಿದ್ದವರು. ಈತ ಸಾಗುವಳಿ ಚೀಟಿ ಮಾಡಿಸಿ ಕೊಡುವುದಾಗಿ ಹುಣಸೂರು ತಾಲೂಕಿನ ಮರಿಸ್ವಾಮಿ ಅವರಿಗೆ 20 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟು, ಮುಂಗಡವಾಗಿ 15 ಸಾವಿರ ರೂ. ಲಂಚ ಪಡೆದಿದ್ದರು. ಈ ಸಂಬಂಧ ಮರಿಸ್ವಾಮಿ ಲೋಕಾಯುಕ್ತ ಅಧಿಕಾರಿಗಳಿಗೆ ದೂರು ಸಲ್ಲಿಸಿದ್ದರು. ಗುರುವಾರ ತಾಲೂಕು ಕಚೇರಿಯಲ್ಲಿ ಕೃಷ್ಣ, ಮರಿಸ್ವಾಮಿ ಅವರಿಂದ 5 ಸಾವಿರ ರೂ. ಲಂಚ ಪಡೆಯುವ ವೇಳೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ ಹಣದ ಸಮೇತ ಕೃಷ್ಣನನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದ್ದಾರೆ.

ಲೋಕಾಯುಕ್ತ ಎಸ್‌ಪಿ ಸುಜಿತ್ ಮಾರ್ಗದರ್ಶನದಲ್ಲಿ ಡಿವೈಎಸ್‌ಪಿ ವಿ.ಕೃಷ್ಣಯ್ಯ, ಲೋಕಾಯುಕ್ತ ಪೊಲೀಸ್ ಇನ್ಸ್‌ಪೆಕ್ಟರ್ ಗಳಾದ ರೂಪಶ್ರೀ, ಜಯರತ್ನ, ಉಮೇಶ್, ಗುರುಪ್ರಸಾದ್, ಗೋಪಿ, ನೇತ್ರಾವತಿ, ತ್ರಿವೇಣಿ, ಕಾಂತರಾಜ್, ಪ್ರಕಾಶ್, ಮೋಹನ್ ಗೌಡ, ಶೇಖರ್, ಮೋಹನ್, ಲೋಕೇಶ್ ಕಾರ್ಯಚರಣೆಯಲ್ಲಿ ಭಾಗವಹಿಸಿದ್ದರು.

# ಪ್ರಧಾನ ಕಾರ್ಯದರ್ಶಿಯಾಗಿ ನೇಮಕ



ತಿ.ನರಸೀಪುರ, ಫೆ.29– ತಿ.ನರಸೀಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಪ್ರಧಾನ ಕಾರ್ಯದರ್ಶಿಯಾಗಿ ಹಿರಿಯ ಮುಖಂಡ ನುಗ್ಗಹಳ್ಳಿಕೊಪ್ಪಲು ಎನ್.ಎಂ.ರಾಮಚಂದ್ರ ಅವರನ್ನು ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಆದೇಶದ ಮೇರೆಗೆ ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

# ಪಾರ್ವತಿ ಸಮೇತ ಸೋಮೇಶ್ವರ ದೇವಾಲಯ ಜೀರ್ಣೋದ್ಧಾರ

ಹೆಚ್.ಡಿ.ಕೋಟೆ, ಫೆ.29– ಪಟ್ಟಣದ ಕಾಳಿದಾಸ ರಸ್ತೆಯಲ್ಲಿ 700 ವರ್ಷಗಳ ಇತಿಹಾಸವಿರುವ ಪಾಂಡ್ಯರ ಕಾಲದ ಪಾರ್ವತಿ ಸಮೇತ ಸೋಮೇಶ್ವರ ದೇವಾಲಯವನ್ನು ಪಟ್ಟಣದ ನಿವಾಸಿಗಳು ಜೀರ್ಣೋದ್ಧಾರಗೊಳಿಸಿದ್ದಾರೆ.



ಗುರುವಾರ ಮುಂಜಾನೆಯಿಂದಲೇ ದೇವಾಲಯದಲ್ಲಿ ಹೆಬ್ಬಲಕುಪ್ಪೆ ಶಾಮಕೃಷ್ಣ ಅವರ ನೇತೃತ್ವದಲ್ಲಿ ಮಹಾ ಗಣಪತಿ ಹೋಮ, ನವಗ್ರಹ ಹೋಮ, ಪುಣ್ಯಾಹ ಸೇರಿದಂತೆ ಧಾರ್ಮಿಕ ವಿಧಿ ವಿಧಾನಗಳು ನೆರವೇರಿಸಲಾಯಿತು. ಬಳಿಕ ಮಹಾಮಂಗಳಾರತಿ ಮಾಡಿ ಪ್ರಸಾದ ವಿತರಿಸಲಾಯಿತು. ಈ ವೇಳೆ ಪಟ್ಟಣ ಸೇರಿದಂತೆ ತಾಲೂಕಿನ ವಿವಿಧ ಗ್ರಾಮಗಳ ಭಕ್ತರು ಪಾರ್ವತಿ ಸಮೇತ ಸೋಮೇಶ್ವರರ ದರ್ಶನ ಪಡೆದು ಪುನೀತರಾದರು.

ಈ ಸಂದರ್ಭ ದೇವಸ್ಥಾನ ಕಮಿಟಿ ಅಧ್ಯಕ್ಷ ಗೋವಿಂದರಾಜಶೆಟ್ಟಿ ರಾಮಕೃಷ್ಣ ಹೆಚ್.ವಿ. ಭುಜಂಗರಾವ್, ಹೆಚ್.ಕೆ.ಶ್ರೀಕಂಠ, ವೈ.ಟಿ.ಮಹೇಶ್, ಡೈರಿ ಶ್ರೀಕಾಂತ್, ಮುತ್ತುರಾಜ್, ನಟರಾಜ್, ವೀರಭದ್ರಪ್ಪ, ನಂದೀಶ್, ಮಹೇಶ್, ಸುರೇಶ್, ಸುಧಾಕರ್, ಫಣಿಕಾಂತ್, ದೇವರಾಜ್, ಕನ್ನಡ ಪ್ರಮೋದ್, ಶಿವರಾಜ್ ಸೇರಿದಂತೆ ಇನ್ನಿತರರಿದ್ದರು.

# ನೇರಳಕುಪ್ಪೆ ಪ್ರೌಢಶಾಲೆಯಲ್ಲಿ ವಿಜ್ಞಾನ ದಿನಾಚರಣೆ



ನೇರಳಕುಪ್ಪೆ ಸರ್ಕಾರಿ ಪ್ರೌಢಶಾಲೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನ ಆಚರಿಸಲಾಯಿತು.


ಹನಗೋಡು, ಫೆ.29– ಇಲ್ಲಿಗೆ ಸಮೀಪದ ನೇರಳಕುಪ್ಪೆ ಸರ್ಕಾರಿ ಪ್ರೌಢಶಾಲೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಸರ್ ಸಿ.ವಿ. ರಾಮನ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಶಾಲೆ ಸಹಶಿಕ್ಷಕಿ ಪ್ರೀತಿ, ಸಿ.ವಿ.ರಾಮನ್ ಅವರು ಬೆಳಕಿನ ಚದುರುವಿಕೆ ಕುರಿತು ನಡೆಸಿದ ಪ್ರಯೋಗ, ಆಕಾಶದ ಬಣ್ಣ ನೀಲಿ ಆಗಿರಲು ಕಾರಣ ಮುಂತಾದ ಅಂಶಗಳ ಕುರಿತು ಮಾತನಾಡಿ, ಈ ವಿಶೇಷ ಸಾಧನೆ ಮಾಡಿದ ಸರ್ ಸಿ.ವಿ.ರಾಮನ್ ಅವರ ನೆನಪಿಗಾಗಿ 1987ರಲ್ಲಿ ಭಾರತ ಸರ್ಕಾರ ಫೆ.28 ಅನ್ನು ರಾಷ್ಟ್ರೀಯ ವಿಜ್ಞಾನ ದಿನವೆಂದು ಘೋಷಿಸಿತು. ಅಂದಿನಿಂದ ಪ್ರತಿವರ್ಷ ಫೆ.28ರಂದು ರಾಷ್ಟ್ರೀಯ ವಿಜ್ಞಾನ ದಿನವಾಗಿ ಆಚರಿಸಲಾಗುತ್ತಿದೆ. ಇದೇ ವೇಳೆ ವಿಜ್ಞಾನ ಕ್ಷೇತ್ರದಲ್ಲಿ ಮಹಾನ್ ಸಾಧನೆ ಮಾಡಿದ ಅನೇಕ ವಿಜ್ಞಾನಿಗಳ ಸಾಧನೆ ಸ್ಮರಿಸಿದರು. ವಿಜ್ಞಾನ ಶಿಕ್ಷಕಿ ಉಮಾ ಸಣ್ಣ ಪ್ರಯೋಗಗಳ ಮೂಲಕ, ಯಾವುದೇ ವಿಷಯಗಳನ್ನು ಏಕೆ, ಏನು, ಹೇಗೆ ಮುಂತಾದ ಪ್ರಶ್ನೆಗಳಿಲ್ಲದೆ ಒಪ್ಪಿಕೊಳ್ಳಬಾರದು ಹಾಗೂ ಮೌಢ್ಯಗಳ ಆಚರಿಸಬಾರದು ಎಂದು ತಿಳಿಸಿ ದಾಸವಾಳ ಹೂವಿನ ರಸವನ್ನು ಆಮ್ಲ ಮತ್ತು ಪ್ರತ್ಯಾಮ್ಲಗಳ ನೈಸರ್ಗಿಕ ಸೂಚಕವಾಗಿ ಬಳಸುವ ವಿಧಾನವನ್ನು ಹಾಗೂ ಮ್ಯಾಜಿಕ್ ಪೇಪರ್ ಪ್ರಯೋಗಗಳನ್ನು ತೋರಿಸಿ ಮಾಹಿತಿ ನೀಡಿದರು.

ವಿದ್ಯಾರ್ಥಿಗಳಿಗೆ ಮುಖ್ಯಶಿಕ್ಷಕ ಕುಮಾರಸ್ವಾಮಿ ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ಪ್ರತಿಜ್ಞಾ ವಿಧಿ ಬೋಧಿಸಿ ಸಮಾಜ ಅಭಿವೃದ್ಧಿಗೆ ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳುವಂತೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಕರಾದ ಲಕ್ಷ್ಮಣ್, ಜಗದೀಶ್, ಸ್ವಾಮಿ, ಪುನೀತ್ ಸೇರಿದಂತೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಅಧಿಕಾರಿಗಳಿಂದ ಲಕ್ಷ್ಮಣತೀರ್ಥ ನದಿ ಪರಿಶೀಲನೆ





ಪರಿಶೀಲನೆ ನಡೆಸುತ್ತಿರುವ ಅಧಿಕಾರಿಗಳು.

ಹುಣಸೂರು, ಫೆ.29– ಕರ್ನಾಟಕ ನೀರು ಸರಬರಾಜು ಹಾಗೂ ಒಳಚರಂಡಿ ಮೈಸೂರು ವಿಭಾಗದ ಅಧಿಕಾರಿಗಳು ಗುರುವಾರ ಪಟ್ಟಣದಲ್ಲಿ ಲಕ್ಷ್ಮಣತೀರ್ಥ ನದಿ ಪರಿಶೀಲನೆ ನಡೆಸಿದರು.

ಇತ್ತೀಚೆಗೆ ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಡೆದ ಜನಸ್ಪಂದನ ಸಭೆಯಲ್ಲಿ ಮುಖಂಡ ಸತ್ಯಪ್ಪ ಅವರು ಹುಣಸೂರಿನ ಜೀವನದಿ ಲಕ್ಷ್ಮಣತೀರ್ಥ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಮನವಿ ಸಲ್ಲಿಸಿದ್ದರು. ಅದರಂತೆ ಇಂದು ನಗರಕ್ಕೆ ಆಗಮಿಸಿದ ಕರ್ನಾಟಕ ನೀರು ಸರಬರಾಜು ಹಾಗೂ ಒಳಚರಂಡಿ ಮೈಸೂರು ವಿಭಾಗದ ಅಧಿಕಾರಿಗಳು ನಗರದ ದಾವಣಿ ಬೀದಿಯಲ್ಲಿರುವ ಪಂಪ್‌ಹೌಸ್ ಬಳಿ ನದಿ ವೀಕ್ಷಣೆ ಮಾಡಿದರು.

ಕಾರ್ಯಪಾಲಕ ಅಭಿಯಂತರ ಉಮೇಶ್‌ಚಂದ್ರ ಮಾತನಾಡಿ, ಹುಣಸೂರಿನ ಬಡಾವಣೆಗಳು, ಹೊಸ ಲೇಔಟ್‌ಗಳ ಕೊಳಚೆ ನೀರು ನದಿಗೆ ಸೇರ್ಪಡೆಯಾಗುತ್ತಿದ್ದು, ಇದನ್ನು ತಡೆಗಟ್ಟುವ ಒಳಚರಂಡಿ ಕಾಮಗಾರಿಗೆ 80 ಕೋಟಿ ವೆಚ್ಚವಾಗಲಿದೆ. ಈ ಸಂಬಂಧ ಈ ಹಿಂದೆಯೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಇದೀಗ ಮತ್ತೆ ಸರ್ಕಾರಕ್ಕೆ ವರದಿ ಸಲ್ಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದ ಅವರು, ನಗರದ ದಾವಣಿ ಬೀದಿ ಹಾಗೂ ಕಲ್ಕುಣಿಕೆಯಲ್ಲಿ 26 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಪಂಪ್ ಹೌಸ್‌ಗಳ ಕಾಮಗಾರಿ ಪೂರ್ಣಗೊಂಡಿದ್ದು, ಶೀಘ್ರ ಉದ್ಘಾಟನೆಯಾಗಲಿದೆ ಎಂದರು.

ಸಾರ್ವಜನಿಕರು ಸಹ ಸ್ವಚ್ಛತೆ ಬಗ್ಗೆ ಗಮನಹರಿಸಬೇಕಿದೆ. ನೀರು ಹರಿಯುವ ಪೈಪ್‌ಗಳಿಗೆ ಕಸ ಕಡ್ಡಿ ಹಾಕುವುದರಿಂದ ಅಲ್ಲಲ್ಲಿ ನೀರು ಕಟ್ಟಿಕೊಂಡು ಕೊಳಚೆ ಉಂಟಾಗುತ್ತದೆ. ಅಲ್ಲದೇ ಮೈಸೂರು ಜಿಲ್ಲೆಯ ನಂಜನಗೂಡು, ತಿ.ನರಸೀಪುರ ಮುಂತಾದ ಭಾಗದಲ್ಲಿ ಸುಮಾರು 17 ನದಿಗಳು ಕಲುಷಿತಗೊಂಡಿವೆ ಎಂದು ಮಾಲಿನ್ಯ ಇಲಾಖೆ ವರದಿ ಮಾಡಿದೆ ಎಂದ ಅವರು ಸರ್ಕಾರದಿಂದ ಅನುದಾನ ಬಿಡುಗಡೆಯಾದ ತಕ್ಷಣ ಕಾಮಗಾರಿ ಪ್ರಾರಂಭಿಸಲಾಗುವುದು ಎಂದರು.

ಈ ವೇಳೆ ಸತ್ಯ ಎಂ.ಎ.ಎಸ್ ಫೌಂಡೇಶನ್ ಅಧ್ಯಕ್ಷ ಸತ್ಯಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರ ಸೋಹೆಲ್, ಹುಣಸೂರು ವಿಭಾಗದ ಜೆಇ ರಾಕೇಶ್ ರಾವ್ ಇತರರಿದ್ದರು.

# ವಿಜೃಂಭಣೆಯ ದೇವಸ್ಥಾನ ಪುನರ್ ಪ್ರತಿಷ್ಠಾಪನಾ ಮಹೋತ್ಸವ



ಮಿರ್ಲೆಯಲ್ಲಿ ಶ್ರೀಮಹಾ ಗಣಪತಿ ಮತ್ತು ಶ್ರೀನವಗ್ರಹ ದೇವಸ್ಥಾನ ಪುನರ್ ಪ್ರತಿಷ್ಠಾಪನಾ ಮಹೋತ್ಸವ ನಡೆಯಿತು.

ಭೇರ್ಯ, ಫೆ.29– ಸಾಲಿಗ್ರಾಮ ತಾಲೂಕಿನ ಮಿರ್ಲೆ ಗ್ರಾಮದ ಶ್ರೀ ಚಾವಡಿ ವಿನಾಯಕ ಹಾಗೂ ಶ್ರೀಮಹಾ ಗಣಪತಿ ಮತ್ತು ಶ್ರೀನವಗ್ರಹ ದೇವಸ್ಥಾನ ಪುನರ್ ಪ್ರತಿಷ್ಠಾಪನಾ ಮಹೋತ್ಸವ ನೂರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.


ದೇವಾಲಯ ನವೀಕರಿಸಿಕೊಟ್ಟ ಉದ್ಯಮಿಗಳಾದ ಅಶ್ವಿನಿ ಪ್ರಸಾದ್ ಹಾಗೂ ಟಿ.ತುಳಸೀ ಪ್ರಸಾದ್ ಬುಧವಾರ ಸಂಜೆ 6 ಗಂಟೆಗೆ ಗೋಧೂಳಿ ಲಗ್ನದಲ್ಲಿ ಶ್ರೀಮಹಾ ಗಣಪತಿ ಪೂಜೆ, ಪುಣ್ಯಾಹ ದೇವನಾಂಧಿ ಕಳಸ ಸ್ಥಾಪನೆ, ಹೋಮ ಹವನಗಳನ್ನು ನಡೆಸಿದರು.

ಗುರುವಾರ ಬೆಳಗ್ಗೆ 9.15ಕ್ಕೆ ಕಳಸ ಪ್ರತಿಷ್ಠಾಪನೆ ನೆರವೇರಿಸಿ ಅರ್ಚಕರಾದ ಕುಮಾರಸ್ವಾಮಿ ಅವರೊಟ್ಟಿಗೆ ಶ್ರೀಚಾವಡಿ ವಿನಾಯಕ ಹಾಗೂ ಶ್ರೀಮಹಾಗಣಪತಿ ಮತ್ತು ಶ್ರೀನವಗ್ರಹ ದೇವಸ್ಥಾನ ಪುನರ್ ಪ್ರತಿಷ್ಠಾಪನಾ ಹಾಗೂ ಗಣಪತಿ ಹೋಮದ ನಂತರ ಪೂರ್ಣಾಹುತಿ ನೆರವೇರಿಸಿ ಉತ್ತಮ ಮಳೆ, ಬೆಳೆ ಸಮೃದ್ಧಿಯಾಗಲಿ ಎಂದು ವಿಘ್ನ ವಿನಾಯಕ ಚಾವಡಿ ವಿನಾಯಕನಲ್ಲಿ ದಂಪತಿ ಪ್ರಾರ್ಥನೆ ಸಲ್ಲಿಸಿದರು.

ಇದಕ್ಕೂ ಮುನ್ನಾ ಗುರು ಪ್ರಾರ್ಥನೆ, ಗಣಪತಿ ಪೂಜೆ, ಪುಣ್ಯಾಹ ವಾಚನ, ನಾಂದಿ, ಋತ್ವಿಗ್ವರಣೆ, ಬಂಬಶುದ್ಧಿ ಸಾಯಂಕಾಲ ಸ್ಥಾನಶುದ್ಧಿ, ಪ್ರಸಾದ ಶುದ್ಧಿ, ವಾಸ್ತುರಾಕ್ಷೋಘ್ನ ಹೋಮ, ವಾಸ್ತು ಪೂಜಾ ಬಲಿ, ಪ್ರತಿಷ್ಠಾಧಿವಾಸಾದಿ ಹೋಮ ನಡೆಸಲಾಯಿತು.

ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಮಿರ್ಲೆ ಅಣ್ಣೇಗೌಡ, ತಾಲೂಕು ಜೆಡಿಎಸ್ ಉಪಾಧ್ಯಕ್ಷ ತುಕಾರಾಂ, ವೈದ್ಯಾಧಿಕಾರಿ ಡಾ.ಶಿವಪ್ರಸಾದ್ ದಂಪತಿ, ಮುಖಂಡರಾದ ವಿಶ್ವನಾಥ್, ಲೋಕನಾಥ್, ಮೋಹನ್, ಮಂಜುನಾಥ್ ಹಾಗೂ ಗ್ರಾಮಸ್ಥರಿದ್ದರು.

# ನೀರು ಹರಿಸಲು ಒತ್ತಾಯಿಸಿ ಪ್ರತಿಭಟನೆ



ನೀರು ಹರಿಸುವಂತೆ ಆಗ್ರಹಿಸಿ ರೈತರು ಪ್ರತಿಭಟನೆ ನಡೆಸಿದರು.

ನಂಜನಗೂಡು, ಫೆ.29– ಹುಲ್ಲಹಳ್ಳಿ, ರಾಂಪುರ ನಾಲೆಗಳ ವ್ಯಾಪ್ತಿಯ ಅಚ್ಚುಕಟ್ಟು ಪ್ರದೇಶಕ್ಕೆ ನೀರು ಹರಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘದ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದ ಬಳಿ ಜಮಾಯಿಸಿದ ರೈತರು ಟ್ರಾಕ್ಟರ್, ಎತ್ತಿನಗಾಡಿಗಳೊಂದಿಗೆ ರಸ್ತೆಗೆ ಇಳಿದು ನೀರಾವರಿ ಇಲಾಖೆ, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಮುಖಂಡ ಶಿರಮಳ್ಳಿ ಸಿದ್ದಪ್ಪ ಮಾತನಾಡಿ, ಪ್ರಸ್ತುತ ಕಬಿನಿ ಜಲಾಶಯದಲ್ಲಿ 73 ಅಡಿ ನೀರು ಸಂಗ್ರಹವಾಗಿದ್ದು, 500 ಕ್ಯುಸೆಕ್ ನೀರನ್ನು ರಾಂಪುರ, ಹುಲ್ಲಹಳ್ಳಿ ನಾಲೆಗಳಿಗೆ ನೀರು ಹರಿಸಿದರೆ ರೈತರು ಬೇಸಿಗೆ ಬೆಳೆ ಬೆಳೆಯಬಹುದಾಗಿದೆ.

ಈಗಾಗಲೇ 15 ದಿನ ತಡವಾಗಿದ್ದು, ಈ ಕೂಡಲೇ ನೀರಾವರಿ ಇಲಾಖೆ ಅಧಿಕಾರಿಗಳು ಕ್ರಮ ಕೈಗೊಂಡು ನೀರು ಹರಿಸಬೇಕು ಎಂದು ಆಗ್ರಹಿಸಿದರು.

ಈ ವೇಳೆ ರೈತ ಸಂಘದ ಪದಾಧಿಕಾರಿಗಳು ಹಾಗೂ ರೈತರು ಹಾಜರಿದ್ದರು.

# ಕಸುವಿನಹಳ್ಳಿ ಬಳಿ ಬೀಡುಬಿಟ್ಟ ಕಾಡಾನೆಗಳು

ನಂಜನಗೂಡು, ಫೆ.29– ತಾಲೂಕಿನ ಕಸುವಿನಹಳ್ಳಿ–ಸೂರಹಳ್ಳಿ ಮಾರ್ಗ ಮಧ್ಯದಲ್ಲಿರುವ ಕುರುಚಲು ಪ್ರದೇಶದಲ್ಲಿ 4 ಕಾಡಾನೆಗಳು ಬೀಡು ಬಿಟ್ಟಿವೆ.

ಬಂಡೀಪುರ ರಾಷ್ಟ್ರೀಯ ಉದ್ಯಾನವನದ ಓಂಕಾರೇಶ್ವರ ಅರಣ್ಯ ವ್ಯಾಪ್ತಿಗೊಳಪಡುವ ಬೋಳೇಗೌಡನಕಟ್ಟೆ ಮೂಲಕ ಕಾಡಿನಿಂದ ಬಂದ 4 ಕಾಡಾನೆಗಳು ತಾಲೂಕಿನ ದೇಪೇಗೌಡನಪುರ ಮಾರ್ಗವಾಗಿ ಕಸುವಿನಹಳ್ಳಿಯತ್ತ ಬಂದಿವೆ. ಈ ಮಧ್ಯೆ ರೈತರ ಜಮೀನಿನಲ್ಲಿ ಬೆಳೆದಿದ್ದ ಬಾಳೆ ಬೆಳೆ ತುಳಿದು ನಾಶ ಮಾಡಿದ್ದು, ಜನರ ಕಿರುಚಾಟ, ಶಿಳ್ಳೆ, ತಮಟೆ ಶಬ್ದಕ್ಕೆ ಕಾಡಾನೆಗಳು ಗಾಬರಿಗೊಂಡು ಅಲ್ಲಿಂದ ಓಡಿ ಕಸುವಿನಹಳ್ಳಿ–ಸೂರಹಳ್ಳಿ ಮಾರ್ಗ ಮಧ್ಯದಲ್ಲಿರುವ ಕುರುಚಲು ಅರಣ್ಯ ಪ್ರದೇಶದಲ್ಲಿ ಬೀಡು ಬಿಟ್ಟಿವೆ. ಇದರಿಂದ ಜನರು ಭಯಗೊಂದಿದ್ದು, ಜೀವ ಭಯದಲ್ಲಿ ಓಡಾಡುವಂತಾಗಿದೆ.



ಸಂಗ್ರಹ ಚಿತ್ರ

**ಆನೆಗಳನ್ನು ಮರಳಿ ಕಾಡಿಗಟ್ಟಲು ಕಾರ್ಯಾಚರಣೆ:** ಕಾಡಿನಿಂದ ಆಹಾರ ಅರಸಿ ನಾಡಿಗೆ ಬಂದಿರುವ 4 ಕಾಡಾನೆಗಳನ್ನು ಗುರುವಾರ ರಾತ್ರಿ ಮತ್ತೆ ಕಾಡಿಗೆ ಅಟ್ಟಲು ವಲಯ ಅರಣ್ಯಾಧಿಕಾರಿ ನಿತಿನ್ ಕುಮಾರ್ ನೇತೃತ್ವದಲ್ಲಿ 20 ಮಂದಿ ಅರಣ್ಯ ಇಲಾಖೆ ಸಿಬ್ಬಂದಿ ಕಾರ್ಯಾಚರಣೆ ನಡೆಸಲಿದ್ದಾರೆ.

ವಲಯ ಅರಣ್ಯಾಧಿಕಾರಿ ನಿತಿನ್ ಕುಮಾರ್ ಮಾತನಾಡಿ, 4 ಕಾಡಾನೆಗಳು ಓಂಕಾರೇಶ್ವರ ಅರಣ್ಯ ಪ್ರದೇಶದ ಬೋಳೇಗೌಡನಕಟ್ಟೆಯಿಂದ ದೇಪೌಗೌಡನಪುರ ಮಾರ್ಗವಾಗಿ ಸೂರಹಳ್ಳಿ ಗ್ರಾಮದತ್ತ ಬಂದಿವೆ. ಬೇಸಿಗೆಯಾದ್ದರಿಂದ ಜಮೀನಿನಲ್ಲಿ ಬೆಳೆಗಳಿಲ್ಲದಿರುವುದರಿಂದ ಹೆಚ್ಚಿನ ಬೆಳೆ ಹಾನಿಯಾಗಿಲ್ಲ. ಆದರೆ ಕಸುವಿನಹಳ್ಳಿ ಗ್ರಾಮದ ರೈತರ ಬಾಳೆ ಬೆಳೆ ನಾಶಪಡಿಸಿವೆ. ಹೆಚ್ಚಿನ ಬೆಳೆ ನಷ್ಟ ಕಂಡು ಬಂದಿಲ್ಲ. ನಂಜನಗೂಡು ವ್ಯಾಪ್ತಿಯ ರವಳಪ್ಪನ ಕೆರೆ ಮಾರ್ಗವಾಗಿ ಕಾಡಾನೆಗಳನ್ನು ಮರಳಿ ಕಾಡಿಗಟ್ಟಲು ಕಾರ್ಯಾಚರಣೆ ನಡೆಸಲು ಉದ್ದೇಶಿಸಲಾಗಿದ್ದು, ಆನೆಗಳ ಹೆಜ್ಜೆ ಗುರುತನ್ನು ಪತ್ತೆ ಮಾಡಿ, ಪಟಾಕಿ ಸಿಡಿಸಿ ಬ್ಯಾಟರಿ ಬಿಟ್ಟು ಬಂದ ಮಾರ್ಗವಾಗಿಯೇ ಮರಳಿ ಕಾಡಿಗಟ್ಟಲು ಕಾರ್ಯಾಚರಣೆ ನಡೆಸಲಾಗುವುದು ಎಂದರು.

ಈ ವೇಳೆ ಉಪ ವಲಯ ಅರಣ್ಯಾಧಿಕಾರಿ ಮದನ್‌ಕುಮಾರ್, ಆನೆ ಕಾರ್ಯ ಪಡೆಯ ಸಿಬ್ಬಂದಿ ಮತ್ತು ಅರಣ್ಯ ಇಲಾಖೆ ಸಿಬ್ಬಂದಿ ಇದ್ದರು.

# ನೇಮಕ



ತಿ.ನರಸೀಪುರ, ಫೆ29– ಬಿಜೆಪಿ ಮೈಸೂರು ಜಿಲ್ಲಾ ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷರಾಗಿ ದಿ.ಹಿರಿಯ ರಾಜಕಾರಣಿ ಸುಂದರೇಶನ್ ಅವರ ಪುತ್ರ ಸಾಮ್ರಾಟ್ ಸುಂದರೇಶನ್ ಅವರನ್ನು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರ ಆದೇಶದ ಮೇರೆಗೆ ಮೈಸೂರು ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

## 18ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 18 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿ ಇರುವ ದುಃಖತಪ್ತರು:

ಪತ್ನಿ–ಲಕ್ಷ್ಮಿದೇವಿ
ಪುತ್ರರಾದ ಎಸ್.ಎನ್ ರಾಘವೇಂದ್ರ ಎಸ್.ಎನ್ ಸಿದ್ದಪ್ಪ ಎಸ್ ಎನ್ ಪ್ರಶಾಂತ್ ಹಾಗೂ ಸೊಸೆಯಂದಿರು ಮೊಮ್ಮಕ್ಕಳು

**ಎಸ್.ನಾಗರಾಜು**
(ಐಡಿಯಲ್ ಜಾವ)
ನಿಧನ: 01-03-2006

## 18ನೇ ವರ್ಷದ ಸವಿನೆನಪು



ನೀವು ನಮ್ಮನ್ನು ಅಗಲಿ ಇಂದಿಗೆ 18 ವರ್ಷ ಕಳೆದರೂ ನೀವು ನುಡಿಯುತ್ತಿದ್ದ ಹಾಗೆ ಹಾಗೂ ತೋರಿಸಿಕೊಟ್ಟಿರುವ ಹಾದಿಯಲ್ಲಿ ನಾನು ಸಾಗುತ್ತಿದ್ದೇನೆ. ನೀವು ಹೇಳಿದ ನುಡಿಯಂತೆ "ಈಸಬೇಕು ಈಸಿ ಜೈಸಬೇಕು" ಅನ್ನೋ ಹಾದಿಯಲ್ಲಿ ನಾನು ಸಾಗುತ್ತಿದ್ದೇನೆ.

**ನಾಗರಾಜು** (ಜಾವಾ)

ನಿಮ್ಮ ಮಗನಾದ ಎಸ್.ಎನ್. ಸತ್ಯನಾರಾಯಣ ಹಾಗೂ ನಿಮ್ಮ ಸೊಸೆಯಾದ ಡಿ. ಧನಲಕ್ಷ್ಮಿ ಹಾಗೂ ನಿಮ್ಮ ಮೊಮ್ಮಗಳಾದ ಎಸ್.ಎಸ್ ಕನಿಷ್ಕ ಗೌಡ ಮತ್ತು ನಿಮ್ಮ ತಮ್ಮನಾದ ಶ್ರೀಕಂಠಯ್ಯ ರವರ ಕುಟುಂಬದವರು

## ಬೇಕಾಗಿದ್ದಾರೆ

ಪ್ಯಾಂಟ್ ಮತ್ತು ಶರ್ಟ್ ಹೊಲೆಯಲು, ಹಾಗೂ ಪೀಸ್ ವರ್ಕ್ ಮಾಡಲು ಅನುಭವವುಳ್ಳ ಲೇಡಿ ಟೇಲರ್ ಗಳು ಬೇಕಾಗಿದ್ದಾರೆ

ವಿಜಯನಗರ ವಿದ್ಯಾವರ್ಧಕ ಕಾಲೇಜ್ ಸಮೀಪ ಸಮವಸ್ತ್ರ ಹೊಲೆಯುವ ಗಾರ್ಮೆಂಟ್ಸ್ ಕೆಲಸ ಬೆಳಿಗ್ಗೆ 9.55 ರಿಂದ ಸಂಜೆ 6.00 ರವರೆಗೆ

**ಸಂಪರ್ಕಿಸಿ: 720 411 3691**

## 100% NEEM WOOD PLYWOOD & DOORS

@ FACTORY DEPOT RATES

NEEM BOND PLATINUM ® 10yrs WARRANTY

ISO 9001:2015 Certified Depot

CALL **99012 91267** **98454 26862**

## WANTED SALES EXECUTIVE

for a Hospitality Business with 3 + years experience.
Salary : 15-25k + Insentives based on Experience.
Share CV with photo to - suraj@ygroup.in

## KHB SITE FOR SALE

**60 x 40,** SOUTH FACE, Rs. 2600/Sq Ft.
KENCHALAGUDU, MYSURU

**9632102676**

## Statement of Ownership and other particulars about newspaper MYSORE MITRA MYSORE

As required to be published under the Press & Registration of Books Act and Rules.

**FORM - IV**
**(See Rule-8)**

1. Place of publication: **Mysore**
2. Periodicity of Publication: **Daily**
3. Printer's name, address and citizenship: **T.S. Gopinath**, No. 15-C, Industrial 'A' Layout, Bannimantap, Mysore-570 015. Citizen of India.
4. Publisher's name, address & citizenship: **M. Govinde Gowda**, No. 15-C, Industrial 'A' Layout, Bannimantap, Mysore-570 015. Citizen of India.
5. Editor's name, address & citizenship: **M. Govinde Gowda**, No. 15-C, Industrial 'A' Layout, Bannimantap, Mysore- 570 015. Citizen of India.
6. Name and addresses of individuals who own the Newspaper and partners or Shareholders, holding more than one percent of the total capital: Owner: Academy Newspapers Pvt. Ltd., No. 15-C, Industrial 'A' Layout, Bannimantap, Mysore-570 015.

**SHAREHOLDERS**

1. **Mr. K.B. Ganapathy,** "Fourth Estate," 375, 9th Cross, 8th Main, Lalithadri Road, K.C. Nagar, Mysore-570 011.
2. **Mrs. K.K. Devamma,** "Fourth Estate," 375, 9th Cross, 8th Main, Lalithadri Road, K.C. Nagar, Mysore-570 011.
3. **Mr. K.G. Vikram Muthanna,** "Fourth Estate," 375, 9th Cross, 8th Main, Lalithadri Road, K.C. Nagar, Mysore-570 011.
4. **Mr. K.G. Mickey Bopanna,** "Fourth Estate," 375, 9th Cross, 8th Main, Lalithadri Road, K.C. Nagar, Mysore-570 011.

I, **M. Govinde Gowda,** Publisher, hereby declare that the particulars given above are true to the best of my knowledge and belief.

—M. Govinde Gowda
Date: 1-3-2024 Publisher

## HOUSE FOR SALE

**Rs. 68 Lakhs**
Bank Loan available
3 BHK Duplex North West Corner
**30x45 site**
**25x35 built up**
Jattihundi, Bogadi Road.
Call : **95385 83377**

## URGENT REQUIREMENT

**EXPERIENCED SALES & MARKETING EXECUTIVES - MALE**
- Open to traveling across 8 dist.
INTERVIEW: 5th MAR 2024, 11 AM
For: MATTRESSES MANUFACTURING COMPANY IN NAGAWALA, MYSURU
Contact: 9880512047 Email: admin@comfortsleep.in

## SITE FOR SALE

In Yesh Smart City (Beerihundi)
1517 sqft, N/E Corner site @ 27 Lakhs
(Non-Negotiable)
Mob: **9591959396**
Brokers Excuse

## NOT GETTING YOUR STAR OF MYSORE & ಮೈಸೂರು ಮಿತ್ರ

Call: 98452-96447 / 99003-82840

## ನಿಮ್ಮ ತಾರಸಿ ಸೋರುತ್ತಿದೆಯೇ?

ತಾರಸಿ, ಬಚ್ಚಲುಮನೆ,
ಶೌಚಾಲಯಗಳು,
ಬಿರಿಕು ಬಿಟ್ಟ ಚಪ್ಪಡಿಗಳು,
ನೀರಿನ ಟ್ಯಾಂಕ್‌ಗಳು,
ನೀರಿನ ಸಂಪ್‌ಗಳು,
ಈಜು ಕೊಳಗಳು

ಇವುಗಳ ದುರಸ್ಥಿಗಾಗಿ ಸಂಪರ್ಕಿಸಿ :
ಆಶೀರ್ವಾದ್ ವಾಟರ್ ಪ್ರೂಫಿಂಗ್ ಕಂಪೆನಿ
**96111 86750**

## IMKTA TEACHER TRAINING PROGRAMS INDIA MYSORE

IMKTA Since 2003

*20 years of success in PreSchool Teacher Training and Placements*

**JOIN DIPLOMA MONTESSORI/ PRIMARY TEACHER TRAINING**

GET PLACED IN INDIA, DUBAI, QATAR, UAE, SHARJAH, OMAN

- FOR SSLC, PUC OR ANY GRADUATES • REGULAR/ SATURDAY CLASS
- 20 YEARS OF SUCCESS • 30,000+ ALUMNI
- 800+ SCHOOL PARTNERSHIP • 25 BRANCHES IN INDIA

Admission Open

Online course available

Alpha International School
Manandavadi Road, Near Ring Road Signal Junction, Srirampura, Mysore
7829 937 469
WWW.IMKTA.IN

## MUDA APPROVED SITES FOR SALE

Last 7
**30X40 EAST FACING**
Available.
Location: Adjacent J P Nagar, At Mysore-Ooty Road & Ring Road Junction.
Price @ Rs 68 lakhs onwards
**Call: 96200 99122**

## ವಾಣಿಜ್ಯ ಜಾಗ ಬಾಡಿಗೆಗೆ ಲಭ್ಯವಿದೆ

ಮೈಸೂರು ಸಿಟಿ
ಜಿಲ್ಲಾ ಪಂಚಾಯಿತಿ ಮುಂಭಾಗ
ನೆಲ ಅಂತಸ್ತು (Ground Floor)
3000 ಚದರ ಅಡಿ ಬಾಡಿಗೆಗೆ ದೊರೆಯುತ್ತದೆ.
ರಾಮಸ್ವಾಮಿ ವೃತ್ತದ ಹತ್ತಿರ
**8151963881**

## UNIVERSITY OF THE PEOPLE — Job Opportunity: ADMISSIONS ADVISOR

UNIVERSITY OF THE PEOPLE The Education Revolution — Vandey

Looking for a dynamic career opportunity with a **Work from Home** facility? Join our team at Vandey Consultancy Services for our Client – **University of the People**, Educational Institution headquartered in the **United States.**

- **Position:** ADMISSIONS ADVISOR (Non-voice Process-US Process-Night Shift) • **No. of openings:** 6
- **Job Location** – Mysore, Near Ramaswamy Circle
- **Working Days** – Mon-Sat (Sat-Half Day)
- **Salary – 25000 per month**

**Key responsibility is to assist applicants via Chats & E-mail communication.**

**Requirements:** * Bachelor's Degree & Excellent written communication skills. * 0-4 yrs. max If you are passionate about providing exceptional customer service and thrive in a collaborative team environment, we want to hear from you!

**Walk-ins are welcome on 1st, 2nd & 4th Mar. 2024 •• Time: 9:00 am – 4:00 pm**







